## ಅಧ್ಯಾಯ 1

# ಮನುಷ್ಯಕುಮಾರನಂತೆ ಇರುವವನು

ದೇವರು ಅವರ ಮೂಲಪಿತೃಗಳನ್ನು ಹೇಗೆ ತನ್ನ “ಮಹಾ ಶಕ್ತಿಯಿಂದಲೂ ಭುಜಬಲದಿಂದಲೂ” ಐಗುಪ್ತ್ಯದೇಶದಿಂದ ಬಿಡಿಸಿ ಕರೆ ತಂದನೆಂಬುದರ ಕಥನಕ್ಕಿಂತಲೂ ಬೇರೆ ಇನ್ನಾವ ಕಥೆಯು ಇಸ್ರಾಯೇಲ್ಯರಿಗೆ ಹೆಚ್ಚಾದ ಆದರಣೆಯನ್ನುಂಟು ಮಾಡುತ್ತಿರಲಿಲ್ಲ (ವಿಮೋಚನಕಾಂಡ 32:11). ಇಸ್ರಾಯೇಲ್ಯರು ಐಗುಪ್ತ್ಯದವರಿಂದ ದಬ್ಬಾಳಿಕೆಗೊಳಪಟ್ಟಾಗ, ಅವರು ದೇವರಿಗೆ ಮೊರೆಯಿಟ್ಟರು. ದೇವರು “ಅವರು ಇಟ್ಟ ಮೊರೆಯನ್ನು ಕೇಳಿಸಿಕೊಂಡನು” (ವಿಮೋಚನಕಾಂಡ 3:7; KJV) ಮತ್ತು ಮನಮುಟ್ಟಲ್ಪಟ್ಟನು. ಹೀಗೆ, ಮೋಶೆಯು ಒಂದು ದಿನ ಅರಣ್ಯದಲ್ಲಿ ಉರಿಯುವ ಪೊದೆಯ ಮುಂದೆ ನಿಂತುಕೊಂಡನು ಮತ್ತು ಈ ಆಶ್ಚರ್ಯವಾದ ಮಾತುಗಳನ್ನು ಕೇಳಿಸಿಕೊಂಡನು:

> ನಾನು ನಿನ್ನ ತಂದೆಯ ದೇವರು, ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು ಅಂದಾಗ ಮೋಶೆ ದೇವರನ್ನು ನೋಡುವದಕ್ಕೆ ಭಯಪಟ್ಟು ಮುಖವನ್ನು ಮುಚ್ಚಿಕೊಂಡನು. ಆಗ ಯೆಹೋವನು - ಐಗುಪ್ತ ದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ. ಬಿಟ್ಟೀಮಾಡಿಸುವವರ ವಿಷಯದಲ್ಲಿ ಅವರು ಇಟ್ಟ ಮೊರೆಯು ನನಗೆ ಕೇಳಿಸಿತು; ಅವರ ದುಃಖವನ್ನೆಲ್ಲಾ ನಾನು ಬಲ್ಲೆನು. ಆದಕಾರಣ ಅವರನ್ನು ಐಗುಪ್ತ್ಯರ ಕೈಯೊಳಗಿಂದ ತಪ್ಪಿಸುವದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ ಹರಿಯುವ ವಿಸ್ತಾರವಾದ ಒಳ್ಳೇ ದೇಶಕ್ಕೆ ಅಂದರೆ ಕಾನಾನ್ಯರೂ ಹಿತ್ತಿಯರೂ ಅಮೋರಿಯರೂ ಪೆರಿಜೀಯರೂ ಹಿವ್ವಿಯರೂ ಯೆಬೂಸಿಯರೂ ವಾಸವಾಗಿರುವ ದೇಶಕ್ಕೆ ನಡಿಸಿಕೊಂಡು ಹೋಗುವದಕ್ಕೂ ಇಳಿದುಬಂದಿದ್ದೇನೆ. ಈಗ ಕೇಳು, ಇಸ್ರಾಯೇಲ್ಯರು ಕೂಗು ನನಗೆ ಮುಟ್ಟಿತು; ಐಗುಪ್ತ್ಯರು ಅವರಿಗೆ ಕೊಡುವ ಉಪದ್ರವವನ್ನು ನಾನು ನೋಡಿದ್ದೇನೆ (ವಿಮೋಚನಕಾಂಡ 3:6-9).

ವಿಮೋಚನಕಾಂಡದಲ್ಲಿ ಇಸ್ರಾಯೇಲ್ಯರು ಫರೋಹನ ಕೈಯಲ್ಲಿ ಅನುಭವಿಸಿದ ದಬ್ಬಾಳಿಕೆ ಮತ್ತು ಪ್ರಕಟನೆ ಪುಸ್ತಕದಲ್ಲಿ ಕ್ರೈಸ್ತರು Domitianನ ಕೈಯಲ್ಲಿ ಅನುಭವಿಸಿದ ದಬ್ಬಾಳಿಕೆಯ ನಡುವಿನ ಸಾಮ್ಯತೆಗಳು ಗಮನಾರ್ಹವಾಗಿವೆ. ಇಸ್ರಾಯೇಲ್ಯರು ಹತಾಶೆಯಿಂದ ಮಾಡಿದ ಮೊರೆಗೆ ದೇವರು ತೋರಿಸಿದ ಪ್ರತ್ಯುತ್ತರವು ಸಹ ಹಿಂಸೆಗೊಳಗಾದ ಕ್ರೈಸ್ತರ ಅತ್ಯಾಸಕ್ತಿಯ ಪ್ರಾರ್ಥನೆಗಳಿಗೆ ಆತನು ನೀಡಿದ ಪ್ರತ್ಯುತ್ತರಕ್ಕೆ ಗಮನ ಸೆಳೆಯುವ ರೀತಿಯಲ್ಲಿ ಸಾಮ್ಯತೆ ಹೊಂದಿರುತ್ತದೆ.

ಕ್ರೈಸ್ತರು ತಮಗೆ ಉಪಶಮನ ನೀಡುವಂತೆ ದೇವರಿಗೆ ಮೊರೆಯಿಡುತ್ತಿದ್ದರು. 6ನೇ ಅಧ್ಯಾಯದಲ್ಲಿ ನಾವು “ದೇವರ ವಾಕ್ಯದ ನಿಮಿತ್ತವಾಗಿಯೂ . . . ಹತರಾದವರ” (6:9) ಎಂಬುದಾಗಿ ಓದುತ್ತೇವೆ. ಅವರು ಮಹಾ ಶಬ್ದದಿಂದ “ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, . . . ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲ . . .

ಪ್ರತಿದಂಡನೆ ಮಾಡದೆಯೂ ಇರುವಿ?" (6:10) ಎಂದು ಗೋಳಾಡುತ್ತಿದ್ದರು. ಆ ಭಾವೋದ್ರಿಕ್ತಗೊಳಿಸುವ ಮನವಿಯಲ್ಲಿ "ದೇವಜನರೆಲ್ಲರ ಪ್ರಾರ್ಥನೆಗಳು" ಸಹ ಮಿಶ್ರಣಗೊಂಡಿದ್ದವು (8:3; ನೋಡಿರಿ 5:8; 8:4), ಅವರು "ಹಿಂಸೆಯಲ್ಲಿ" ಇದ್ದವರಾಗಿದ್ದರು (1:9). ಕ್ರೈಸ್ತರು ಹೀಗೆ ಚಕಿತಗೊಂಡಿರಬಹುದು: "ದೇವರು ಮಧ್ಯಪ್ರವೇಶಿಸುವದಕ್ಕೆ ಇನ್ನೆಷ್ಟು ಕಾಲವಾಗುವದು? ನಮಗಾಗಿ ಪ್ರತೀಕಾರ ಸಲ್ಲಿಸಲ್ಪಡುವದಕ್ಕೆ ಇನ್ನೆಷ್ಟು ಕಾಲವಾಗಲಿದೆ?" ಕೇಳಿದರೂ ಸರಿಯೇ ಅಥವಾ ಕೇಳದಿದ್ದರೂ ಸರಿಯೇ, ಪ್ರಕಟನೆ ಪುಸ್ತಕವು ಅವರ ಪ್ರಶ್ನೆಗಳಿಗೆ ದೇವರು ಕೊಡುವ ಉತ್ತರವಾಗಿರುತ್ತದೆ. ದೇವರು ಹಿಂದೊಮ್ಮೆ ಅರಣ್ಯದಲ್ಲಿ ಮೋಶೆಗೆ ಆದರಣೆಯುಂಟು ಮಾಡುವ ಸಂದೇಶವನ್ನು ನೀಡಿದ್ದನು; ಈಗ ಪತ್ಮೊಸ್ ದ್ವೀಪದಲ್ಲಿದ್ದ ಯೋಹಾನನಿಗೆ ಆತನು ಸಾಂತ್ವನದ ಮಾತುಗಳನ್ನು ತಿಳಿಸುತ್ತಾನೆ.

## ಯೇಸು ಕ್ರಿಸ್ತನ ಪ್ರಕಟನೆಯು (1:1-3)

**[1]ಯೇಸು ಕ್ರಿಸ್ತನ ಪ್ರಕಟನೆಯು. ಆತನು ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತೋರಿಸುವದಕ್ಕಾಗಿ ದೇವರಿಂದ ಈ ಪ್ರಕಟನೆಯನ್ನು ಹೊಂದಿದನು; ಇದಲ್ಲದೆ ಆತನು ತನ್ನ ದೂತನನ್ನು ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು. [2]ಯೋಹಾನನು ತಾನು ಕಂಡದ್ದನ್ನೆಲ್ಲಾ ತಿಳಿಸುವವನಾಗಿ ದೇವರ ವಾಕ್ಯದ ವಿಷಯವಾಗಿಯೂ ಯೇಸು ಕ್ರಿಸ್ತನು ಹೇಳಿದ ಸಾಕ್ಷಿಯ ವಿಷಯವಾಗಿಯೂ ಸಾಕ್ಷಿ ಕೊಟ್ಟನು. [3]ಈ ಪ್ರವಾದನಾವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು. ಅವು ನೆರವೇರುವ ಸಮಯವು ಸಮೀಪವಾಗಿದೆ.**

**ವಚನ 1. ಪ್ರಕಟನೆಯು** ಎಂಬ ಪದವು ಗ್ರೀಕ್ ಭಾಷೆಯ ἀποκάλυψις (*apokalupsis*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದರರ್ಥವು "ಬಯಲುಗೊಳಿಸುವದು" ಅಥವಾ "ಮುಸುಕು ತೆಗೆಯುವದು" ಎಂದಾಗಿದೆ. ಒಬ್ಬ ಮಹಾನ್ ಚಿತ್ರ ಕಲಾಕಾರನು ತಾನು ಇತ್ತೀಚಿಗೆ ಬಿಡಿಸಿದ ಮೇರುಕೃತಿಯೊಂದರ ಮೇಲಿನ ಮುಸುಕು ತೆಗೆದು ನಾಟಕೀಯವಾಗಿ ಬಯಲುಗೊಳಿಸುವ ರೀತಿಯಲ್ಲಿಯೇ, ಪ್ರಕಟನೆ ಪುಸ್ತಕದಲ್ಲಿ ದೇವರ ಆದರಣೆಯ ಮೇರುಕೃತಿಯು ನಾಟಕೀಯವಾಗಿ ಬಯಲುಗೊಳಿಸಲ್ಪಡುತ್ತದೆ.

ಪುಸ್ತಕವು **ಯೇಸು ಕ್ರಿಸ್ತನ** ಪ್ರಕಟನೆಯು ಎಂದು ಕರೆಯಲ್ಪಟ್ಟಿದೆ. ಈ ಪದಗುಚ್ಛದ ಅರ್ಥವು "(1) ಯೇಸು ಕ್ರಿಸ್ತನಿಂದಾದ, (2) ಯೇಸು ಕ್ರಿಸ್ತನ ಕುರಿತ ಪ್ರಕಟನೆ ಅಥವಾ (3) ಎರಡೂ" ಎಂದಾಗಿರಬಹುದಾಗಿದೆ.[1] ಈ ವಚನವು ಒಟ್ಟಾರೆಯಾಗಿ ಇದು ಯೇಸುವು ಯೋಹಾನನಿಗೆ ಕೊಟ್ಟಂಥ ಪ್ರಕಟನೆ ಎಂಬ ವಿಚಾರದ ಕಡೆಗೆ ಒಲವು ಹೊಂದಿರುತ್ತದೆ, ಆದಾಗ್ಯೂ ಪುಸ್ತಕವು ಯೇಸು ಕ್ರಿಸ್ತನ ವಿಷಯದಲ್ಲಿ ಸಹ ಬಹಳಷ್ಟನ್ನು ಪ್ರಕಟಗೊಳಿಸುತ್ತದೆ.

1ನೇ ವಚನದಿಂದ ಮೂರು ವಾಸ್ತವಾಂಶಗಳನ್ನು ಒತ್ತಿ ಹೇಳತಕ್ಕದ್ದು: **ದೇವರು** ಯೇಸುವಿಗೆ ಸಂದೇಶವನ್ನು ಕೊಟ್ಟನು, ಆತನು ಪ್ರತಿಯಾಗಿ ಯೋಹಾನನಿಗೆ ಕೊಟ್ಟನು. ಯೋಹಾನನು ಬಾಬಿಲೋನಿನವರು, ಗ್ರೀಕ್, ರೋಮನ್, ಮತ್ತು ಯೆಹೂದಿ ಪುರಾಣಗಳು ಸೇರಿದಂತೆ ಅನ್ಯಧರ್ಮಿಯ ಮೂಲಗಳಿಂದ ವಿಷಯಗಳನ್ನು ಎರವಲಾಗಿ ಪಡೆದನೆಂದು ಕೆಲವು ಲೇಖಕರು ಅಭಿಪ್ರಾಯ ಪಡುತ್ತಾರೆ. ದೇವರು ಆಸ್ಯ ಸೀಮೆಯಲ್ಲಿದ್ದ ಕ್ರೈಸ್ತರಿಗೆ ಪರಿಚಿತವಾಗಿರುವ ಚಿತ್ರಗಳನ್ನು ಬಳಸಿಕೊಂಡಿರದೆ ಇರಬಹುದು, ಆದರೆ ಸ್ವತಃ ಯೋಹಾನನು

ಅನ್ಯಧರ್ಮಿಯರ ಪುರಾಣ ಕಥೆಗಳಿಂದ ವಿಷಯಗಳನ್ನು ಅಳವಡಿಸಿಕೊಂಡನು ಎಂದು ಹೇಳುವದು ಪ್ರಕಟನೆ ಪುಸ್ತಕದ ಸ್ಪಷ್ಟವಾದ ಉಪದೇಶಕ್ಕೆ ತದ್ವಿರುದ್ಧವಾಗುತ್ತದೆ. ಯೋಹಾನನ ಸಂದೇಶವು *ದೇವರಿಂದ* ಬಂದದ್ದಾಗಿತ್ತು. ಅಪೊಸ್ತಲನು ಕೇವಲ ತಾನು ಕೇಳಿದ್ದನ್ನೂ ಕಂಡದ್ದನ್ನೂ ಬರೆದಿಟ್ಟನಷ್ಟೆ (ವಚನಗಳು 11, 19).

2. ದೇವರು ತನ್ನ **ದಾಸರಿಗೆ**-ಬೇರೆ ಮಾತುಗಳಲ್ಲಿ ಹೇಳುವದಾದರೆ, ತನ್ನ ಜನರಿಗೆ- ಪ್ರಯೋಜನವಾಗುವದಕ್ಕಾಗಿ ಸಂದೇಶವನ್ನು ಕೊಟ್ಟನು (ರೋಮಾ 6:17, 18). ಗ್ರೀಕ್ ಭಾಷೆಯ δοῦλοι (*douloi*) ಎಂಬ ಪದವು "ದಾಸರು" ಎಂದು ಅನುವಾದಿಸಲ್ಪಟ್ಟಿದ್ದು, "ಗುಲಾಮರು" ಎಂದರ್ಥವಾಗಿದೆ. ಈ ಪದವು ಸೂಚಿಸುವದೇನೆಂದರೆ ನಾವು ನಮ್ಮ ಸ್ವಂತ ಸ್ವತ್ತಲ್ಲ, ನಾವು ಒಂದು ಕ್ರಯಕ್ಕೆ ಕೊಳ್ಳಲ್ಪಟ್ಟವರು ಎಂಬುದೆ (1 ಕೊರಿಂಥ 6:19, 20).

3. ಆತನು ತನ್ನ ದಾಸರಿಗೆ **ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತೋರಿಸುವದಕ್ಕಾಗಿ** ಸಂದೇಶವನ್ನು ಕೊಟ್ಟನು (ನೋಡಿರಿ 22:6). "ಬೇಗನೆ" ಎಂದು ಅನುವಾದಿಸಲ್ಪಟ್ಟಿರುವ τάχος (*tachos*) ಎಂಬ ಗ್ರೀಕ್ ಪದದ ಅರ್ಥವು "ಶೀಘ್ರವೇ" ಅಥವಾ "ತಕ್ಷಣವೇ" ಎಂದಾಗಿರುತ್ತದೆ. ಪದಗುಚ್ಛವು "ಶೀಘ್ರವೇ ಸಂಭವಿಸತಕ್ಕ" (CEV) ಅಥವಾ "ಸ್ವಲ್ಪ ಸಮಯದಲ್ಲೇ ಸಂಭವಿಸಲಿರುವಂಥ"[2] ಎಂದು ಅನುವಾದಿಸಲ್ಪಟ್ಟಿರುತ್ತದೆ. "ಒಡೆಯನೇ, . . . ಎಷ್ಟು ಕಾಲದ ವರೆಗೆ?" (6:10) ಎಂಬುದಕ್ಕೆ ಪ್ರತ್ಯುತ್ತರವಾಗಿ, ದೇವರು ಹೀಗೆ ಉತ್ತರ ಕೊಟ್ಟನು: "ಧೈರ್ಯ ತಂದುಕೊಳ್ಳಿರಿ; *ಅದಕ್ಕೆ ಹೆಚ್ಚು ಹೊತ್ತೇನೂ ಆಗುವದಿಲ್ಲ!* ನಾನು ಕಾಪಾಡುವದಕ್ಕೆ ಮತ್ತು ನಿಮ್ಮ ವೈರಿಗಳನ್ನು ದಂಡಿಸುವದಕ್ಕೆ ಹೊರಟಿರುತ್ತೇನೆ."

ಈ ಸಂದೇಶವನ್ನು ತನ್ನ ಜನರ ಬಳಿಗೆ ತಲುಪಿಸುವದಕ್ಕಾಗಿ, ದೇವರು ಒಂದು ಸರಣಿ ಪ್ರಕಟನೆಯನ್ನು ಬಳಸಿದನು. ದೇವರು ಯೇಸುವಿಗೆ ಸಂದೇಶವನ್ನು ಕೊಟ್ಟನು. ಯೇಸು ಸಂದೇಶವನ್ನು ದೇವರ ಜನರಿಗೆ ತಲುಪಿಸಿ ಅವರನ್ನು ಪ್ರೋತ್ಸಾಹಗೊಳಿಸುವಂತೆ **ಯೋಹಾನನ** ಬಳಿಗೆ ಕೊಂಡೊಯ್ಯುವದಕ್ಕಾಗಿ **ತನ್ನ ದೂತನನ್ನು** ಕಳುಹಿದನು (ನೋಡಿರಿ 22:8, 16). "ಯೋಹಾನ"ನು ಅಪೊಸ್ತಲನಾದ ಯೋಹಾನನೇ, ಬಹುಶಃ ಈ ಸಮಯದಲ್ಲಿ ಜೀವಂತವಾಗಿರಬಹುದಾಗಿದ್ದ ಏಕೈಕ ಅಪೊಸ್ತಲನಾಗಿದ್ದನು.

ಸರಣಿ ಪ್ರಕಟನೆಯಲ್ಲಿ ದೇವರು ಒಬ್ಬ ದೇವದೂತನನ್ನು ಬಳಸಿದ್ದು ಮಹತ್ವಪೂರ್ಣವಾದದ್ದು. ಮೋಶೆಯು ಅರಣ್ಯದಲ್ಲಿದ್ದ ವೇಳೆ, "ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ . . . ಕಾಣಿಸಿಕೊಂಡಿದ್ದು" "ಯೆಹೋವನ *ದೂತ*"ನೇ ಆಗಿದ್ದನು (ವಿಮೋಚನಕಾಂಡ 3:2; ಒತ್ತಿ ಹೇಳಿದ್ದು ನನ್ನದು). ಅದೇ ರೀತಿಯಲ್ಲಿಯೇ, ದೇವರು ತನ್ನ ಜನರ ಗೋಳಾಟಗಳನ್ನು ಆಲಿಸಿದ್ದಾನೆ ಎಂಬುದನ್ನು ಯೋಹಾನನಿಗೆ ತಿಳಿಸುವದಕ್ಕಾಗಿ ಒಬ್ಬ ದೂತನು ಕಳುಹಿಸಲ್ಪಟ್ಟನು.

**ವಚನ 2.** ಯೋಹಾನನು ತನ್ನ ಸಂದೇಶದ ವಿಶ್ವಾಸಾರ್ಹತೆಯ ಬಗ್ಗೆ ವೈಯಕ್ತಿಕವಾಗಿ ಹೊಣೆಯನ್ನು ಹೊತ್ತುಕೊಳ್ಳುತ್ತಾನೆ: ತಾನು **ಕಂಡದ್ದನ್ನೆಲ್ಲಾ ತಿಳಿಸುವವನಾಗಿ ದೇವರ ವಾಕ್ಯದ ವಿಷಯವಾಗಿಯೂ ಯೇಸು ಕ್ರಿಸ್ತನು ಹೇಳಿದ ಸಾಕ್ಷಿಯ ವಿಷಯವಾಗಿಯೂ ಸಾಕ್ಷಿ ಕೊಟ್ಟನು** ಎಂಬುದಾಗಿ ಘೋಷಿಸುತ್ತಾನೆ (ನೋಡಿರಿ 22:8). ಯೋಹಾನನು ತನ್ನ ಜೀವಿತದುದ್ದಕ್ಕೂ ದೇವರ ವಾಕ್ಯದ ವಿಷಯವಾಗಿ ನಂಬಿಗಸ್ತನಾದ ಸಾಕ್ಷಿಯಾಗಿದ್ದನು. ಹೇಗೂ, ಈ ವಚನದಲ್ಲಿ, "ದೇವರ ವಾಕ್ಯ" ಮತ್ತು "ಯೇಸು ಕ್ರಿಸ್ತನ ವಿಷಯವಾದ ಸಾಕ್ಷಿ" ಎಂಬ ಪದಗುಚ್ಛಗಳು ಆತನು ಪತ್ಮೊಸ್ ದ್ವೀಪದಲ್ಲಿ "ತಾನು ಕಂಡದ್ದನ್ನೆಲ್ಲಾ" ಮತ್ತು ಕೇಳಿಸಿಕೊಂಡದ್ದನ್ನೆಲ್ಲಾ ಸೂಚಿಸುವದಾಗಿದೆ.

**ವಚನ 3. ಈ ಪ್ರವಾದನಾವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು. ಅವು ನೆರವೇರುವ ಸಮಯವು ಸಮೀಪವಾಗಿದೆ.** ಈ ವಚನದಲ್ಲಿ ಪ್ರಕಟನೆ ಪುಸ್ತಕದ ವಿಶಿಷ್ಟತೆಯಾಗಿರುವಂಥ ಒಂದು ನಾವು ಕಾಣುತ್ತೇವೆ: ಈ ಪುಸ್ತಕವನ್ನು ಓದುವವನಿಗೆ ಮತ್ತು ಓದುವದನ್ನು ಕೇಳಿಸಿಕೊಂಡವರಿಗೂ ಒಂದು ವಿಶೇಷವಾದ ಆಶೀರ್ವಾದ.

**ಓದುವಂಥವನೂ** ಎಂಬುದು ಸಭೆಯ ಸಾರ್ವಜನಿಕ ಕೂಟದಲ್ಲಿ ಶಾಸ್ತ್ರಗಳನ್ನು ಓದುವ ವ್ಯಕ್ತಿಯನ್ನು ಸೂಚಿಸುತ್ತದೆ. "ಅವನೂ" ಎಂಬುದು ಏಕವಚನದಲ್ಲಿ, ಮತ್ತು "ಅಂಥವರೂ" ಎಂಬುದು ಬಹುವಚನದಲ್ಲಿರುತ್ತದೆ ಎಂಬುದನ್ನು ಗಮನಿಸಿರಿ. *ಒಬ್ಬನು* ಓದುವದನ್ನು ಮಾಡಿದನು, ಆದರೆ *ಅನೇಕರು* ಕೇಳಿಸಿಕೊಂಡರು. CEV ತರ್ಜುಮೆಯಲ್ಲಿ "ಈ ಪ್ರವಾದನೆಯನ್ನು ಬೇರೆಯವರಿಗೆ ಓದಿ ಕೇಳಿಸುವ ಪ್ರತಿಯೊಬ್ಬನೂ" ಎಂದಿರುತ್ತದೆ. ಆ ದಿನಗಳಲ್ಲಿ, ಅನೇಕರಿಗೆ ಓದುವದಕ್ಕೆ ಬರುತ್ತಿರಲಿಲ್ಲ-ಮತ್ತು ಕೆಲವೇ ಕೆಲವರು ಮಾತ್ರವೇ ಶಾಸ್ತ್ರಗಳ ಪ್ರತಿಯೊಂದನ್ನು ಸ್ವಂತವಾಗಿ ಹೊಂದಿಕೊಳ್ಳಲು ಸಮರ್ಥರಾಗಿರುತ್ತಿದ್ದರು. ಜನರು ತಮ್ಮ ಜೀವಿತಗಳಿಗಾಗಿರುವ ದೇವರ ಚಿತ್ತವನ್ನು ತಿಳಿದುಕೊಳ್ಳಬೇಕೆಂದರೆ, ವಾಕ್ಯವನ್ನು ಸಾರ್ವಜನಿಕವಾಗಿ ಓದುವದು ಅವಶ್ಯಕವಾಗಿತ್ತು (ರೋಮಾ 10:17). ಸಾರ್ವಜನಿಕವಾಗಿ ವಾಕ್ಯವನ್ನು ವಾಚನ ಮಾಡುವದು ಸಭಾಮಂದಿರದಲ್ಲಿನ ಆರಾಧನೆಯ ಭಾಗವಾಗಿರುತ್ತಿತ್ತು (ಲೂಕ 4:16; ಅಪೊಸ್ತಲರ ಕೃತ್ಯಗಳು 13:15) ಮತ್ತು ಕ್ರೈಸ್ತ ಆರಾಧನೆಯಲ್ಲಿ ಒಂದು ಪ್ರಾಮುಖ್ಯವಾದ ಭಾಗವಾಗಿ ಮಾರ್ಪಟ್ಟಿತು. ಇಂದು ಬೈಬಲ್‌ಗಳು ಸಮೃದ್ಧವಾಗಿ ಲಭ್ಯವಿರುತ್ತವೆ, ಆದರೆ ಈಗಲೂ ನಮಗೆ ಓದುವಿಕೆಯ "ಅರ್ಥವನ್ನು ಕೊಡುವದಕ್ಕೆ" ಶಕ್ತರಾಗಿರುವಂಥವರಿಂದ ವಾಕ್ಯವು ಓದಲ್ಪಡುವದನ್ನು ಕೇಳಿಸಿಕೊಳ್ಳುವ ಅಗತ್ಯವಿರುತ್ತದೆ (ನೋಡಿರಿ ನೆಹಮೀಯ 8:8).

ಪ್ರಕಟನೆ ಪುಸ್ತಕವು ಸಾರಿ ಹೇಳಲ್ಪಡುವ ಅಗತ್ಯವಿರುವದು ಮಾತ್ರವೇ ಅಲ್ಲ, ಅದರೆ ಕೇಳಿಸಿಕೊಂಡು ಕೈಕೊಂಡು ನಡೆಯುವ ಅಗತ್ಯವು ಸಹ ಇರುತ್ತದೆ. ಇಲ್ಲಿ ಪ್ರಸ್ತಾಪಿಸಲಾಗಿರುವ ಕೇಳಿಸಿಕೊಳ್ಳುವಿಕೆಯು ಕೇವಲ ಶಬ್ದವನ್ನು ಅಥವಾ ಮಾತುಗಳನ್ನು ಕೇಳಿಸಿಕೊಳ್ಳುವದಷ್ಟೇ ಆಗಿರುವದಿಲ್ಲ. ಬದಲಾಗಿ, ಅದರಲ್ಲಿ ವಾಕ್ಯವನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುವದು, ವಿಧೇಯರಾಗಲು ಸಿದ್ಧಮನಸ್ಸುಳ್ಳವರಾಗಿರುವದು ಸೇರಿರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 10:33). ವಾಕ್ಯವನ್ನು ಸ್ವೀಕರಿಸಿಕೊಳ್ಳುವದು ಅದನ್ನು ತಿಳಿಯಪಡಿಸುವಷ್ಟೇ ಪ್ರಾಮುಖ್ಯವಾದದ್ದು (ನೋಡಿರಿ ಮತ್ತಾಯ 13; ಲೂಕ 8). **ಕಿವಿಗೊಡುವವನು** ("ಕೈಕೊಂಡು ನಡೆಯುವವನು"; KJV) ಎಂಬ ಪದವು ಗ್ರೀಕ್ ಭಾಷೆಯ τηρέω (*tēreō*) ಎಂಬ ಪದದಿಂದ ಬಂದದ್ದಾಗಿದ್ದು ಅದು "ನೋಡಿಕೊಳ್ಳಿರಿ, ಎಚ್ಚರದಿಂದ ಕಾಯಿರಿ ಮತ್ತು ಕಾಪಾಡಿರಿ" ಎಂಬ ಅರ್ಥವನ್ನು ಕೊಡಬಹುದಾಗಿದೆ. ಪ್ರಕಟನೆ ಪುಸ್ತಕವನ್ನು ಕಾಪಾಡಬೇಕಾದ ಒಂದು ಜವಾಬ್ದಾರಿಕೆಯು ಇರುತ್ತದೆ (22:18, 19). ಹೇಗೂ, ಈ ಸನ್ನಿವೇಶದಲ್ಲಿ ಈ ಪದದ ಅರ್ಥವು "ಕೈಕೊಂಡು ನಡೆಯಿರಿ ಅಥವಾ ವಿಧೇಯರಾಗಿರಿ" ಎಂದಾಗಿರುತ್ತದೆ.

ಯೋಹಾನನು ಪ್ರಕಟನೆ ಪುಸ್ತಕವನ್ನು **ಪ್ರವಾದನೆವಾಕ್ಯ** ಎಂಬದಾಗಿ ಗುರುತಿಸುವ ಮೂಲಕ ಕೇಳಿಸಿಕೊಳ್ಳುವ ಮತ್ತು ಕೈಕೊಂಡು ನಡೆಯುವದರ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದನು. "ಪ್ರವಾದನಾವಾಕ್ಯ" ಎಂಬ ಬಿರುದು ಪ್ರಕಟನೆ ಪುಸ್ತಕವು ದೇವರಿಂದ ಬಂದದ್ದಾಗಿದ್ದು ಅದನ್ನು ಹಗುರವಾಗಿ ಪರಿಗಣಿಸಿಕೊಳ್ಳಬಾರದು ಎಂಬುದನ್ನು ಒತ್ತಿ ಹೇಳುವದಾಗಿದೆ. ಬಹಳಷ್ಟು ಜನರು ಅಪ್ರಜ್ಞಾಪೂರ್ವಕವಾಗಿಯೇ ಪ್ರವಾದನೆಂದರೆ "ಭವಿಷ್ಯದ

ಕುರಿತಾದ ಒಂದು ಮುಂತಿಳಿಸುವಿಕೆ" ಎಂಬದಾಗಿ ಯೋಚಿಸಿಕೊಳ್ಳುತ್ತಾರೆ. ಹೇಗೂ, ನೀವು ಗಮನಿಸಬೇಕಾದದ್ದೇನೆಂದರೆ, ಈ ಪ್ರವಾದನಾ**ವಾಕ್ಯಗಳನ್ನು** *ಕೈಕೊಂಡು ನಡೆಯಬೇಕಾಗಿರುತ್ತದೆ* ಎಂಬದೆ. ಒಬ್ಬನು ಮುಂತಿಳಿಸುವಿಕೆಗೆ ವಿಧೇಯನಾಗಲಾರನು; ಬದಲಾಗಿ ಒಬ್ಬನು ಆಜ್ಞೆಗಳಿಗೆ ವಿಧೇಯನಾಗಲು ಸಾಧ್ಯವಿರುತ್ತದೆ. ಪ್ರಕಟನೆ ಪುಸ್ತಕವು ಭವಿಷ್ಯದ ಮುಂತಿಳಿಸುವಿಕೆಗಳನ್ನು ಒಳಗೊಂಡಿರುತ್ತದಾದರೂ, "ಪ್ರವಾದನೆ" ಎಂಬ ಪದವು ವಿಧೇಯರಾಗಬೇಕಾಗಿರುವ ಆಜ್ಞೆಗಳನ್ನು ಹೊಂದಿರುವ ಸಂದೇಶಕ್ಕೆ ಸಂಬಂಧಪಟ್ಟದ್ದಾಗಿದೆ (ನೋಡಿರಿ 22:7, 12). ಪ್ರಕಟನೆ ಪುಸ್ತಕದಲ್ಲಿ ಆಜ್ಞೆಗಳು ಯಥೇಚ್ಛವಾಗಿರುತ್ತವೆ, ಸ್ಪಷ್ಟವಾಗಿ ಮತ್ತು ಪರೋಕ್ಷವಾಗಿ ಹೇಳಲಾಗಿರುವ ಎರಡೂ ಆಜ್ಞೆಗಳಿರುತ್ತವೆ. ಬಹಳಷ್ಟು ಸ್ಪಷ್ಟವಾಗಿ ತಿಳಿಸಲಾಗಿರುವ ಆಜ್ಞೆಗಳು ಪುಸ್ತಕದ ಆರಂಭ ಮತ್ತು ಮುಕ್ತಾಯದ ಭಾಗಗಳಲ್ಲಿ ಇರುತ್ತವೆ (ನೋಡಿರಿ 2:5, 16, 25; 3:2, 3, 11, 18, 19; 22:11, 17), ಆದರೆ 2:10ರಲ್ಲಿ ಸಿಕ್ಕುವ ಆಜ್ಞೆಗಳು ಪುಸ್ತಕದುದ್ದಕ್ಕೂ *ಸೂಚ್ಯಾರ್ಥವಾಗಿ* ಹೇಳಲ್ಪಟ್ಟಿವೆ: "ನಿನಗೆ ಸಂಭವಿಸುವದಕ್ಕಿರುವ ಬಾಧೆಗಳಿಗೆ ಹೆದರಬೇಡ"; "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು." ಈ ಆಜ್ಞೆಗಳನ್ನು ಕೇಳಿಸಿಕೊಳ್ಳುವದು ಮತ್ತು ಕೈಕೊಂಡು ನಡೆಯುವದು ಒಂದು ಐಚ್ಛಿಕ ವಿಷಯವಾಗಿರುವದಿಲ್ಲ.

ಮೋಶೆಯು ಇಸ್ರಾಯೇಲ್ಯರನ್ನು ನಡಿಸಿಕೊಂಡು ಹೋದಾಗ, ಆತನು ಅವರಿಗೆ "ನೀವು ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ . . . ಆತನ ಆಜ್ಞೆಗಳಿಗೆ ವಿಧೇಯರಾಗಿರಬೇಕು" (ವಿಮೋಚನಕಾಂಡ 15:26) ಎಂದು ಉಪದೇಶ ಮಾಡಿದನು. ಅವರು ವಿಧೇಯರಾದರೆ, ಅವರು ಆಶೀರ್ವಾದ ಹೊಂದುವರು (ವಿಮೋಚನಕಾಂಡ 23:22). ಅದೇ ರೀತಿಯಲ್ಲಿಯೇ, ಯೋಹಾನನು ತನ್ನ ದಿನದಲ್ಲಿ ದಬ್ಬಾಳಿಕೆಗೊಳಗಾಗಿದ್ದ ಕ್ರೈಸ್ತರಿಗೆ ನಂಬಿಗಸ್ತರಾಗಿ ಉಳಿದುಕೊಳ್ಳುವವರಿಗೆ ಮಾತ್ರವೇ ಪ್ರಕಟನೆ ಪುಸ್ತಕದ ವಾಗ್ದಾನಗಳಿರುತ್ತವೆಂದು ಹೇಳಿದನು (2:10).

ಆದಿ ಕ್ರೈಸ್ತರಿಗಾದರೋ, ಅತ್ಯಂಥ ಆದರಣೆಯುಂಟು ಮಾಡುವ ಭಾಗವು **ಸಮಯವು ಸಮೀಪವಾಗಿದೆ** ಎಂಬ ಮಾತುಗಳಲ್ಲಿ ಸಿಕ್ಕಿರಬಹುದಾಗಿದೆ (ನೋಡಿರಿ 22:10). "ಸಮೀಪವಾಗಿದೆ" ಎಂಬ ಪದವು ಗ್ರೀಕ್ ಕ್ರಿಯಾಪದವಾಗಿರುವ ἐγγύς (*engus*) ಎಂಬುದರಿಂದ ಅನುವಾದಿಸಲ್ಪಟ್ಟಿದೆ. ಅದಕ್ಕೆ ಸಂಬಂಧಿಸಿದ ἐγγίζω (*engizō*) ಕ್ರಿಯಾದಪವು ಮಾರ್ಕ 1:15ರಲ್ಲಿ "ಸಮೀಪಿಸಿತು" ಎಂದು ಅನುವಾದಿಸಲ್ಪಟ್ಟಿದೆ: "ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು *ಸಮೀಪಿಸಿತು*" (ಒತ್ತಿ ಹೇಳಿದ್ದು ನನ್ನದು). ಮಾರ್ಕ 1:15ರಲ್ಲಿ ಸಾರಲ್ಪಡುವಿಕೆಯ ಅರ್ಥವು ರಾಜ್ಯದ ಸ್ಥಾಪನೆಯು ಇನ್ನೂ ಭವಿಷ್ಯದಲ್ಲಿ ಸಾವಿರಾರು ವರ್ಷಗಳು ದೂರವಿರುತ್ತದೆಂದಾಗಿರಲಿಲ್ಲ. ಬದಲಾಗಿ, ರಾಜ್ಯವನ್ನು ಸ್ಥಾಪಿಸುವದಕ್ಕಾಗಿರುವ ಸಮಯವು ಕೊನೆಗೂ ಬಂದು ತಲುಪಿದೆ ಎಂಬುದು ಸಾರುವವನ ತಾತ್ಪರ್ಯವಾಗಿತ್ತು. ಅದೇ ರೀತಿಯಲ್ಲಿಯೇ, ಯೋಹಾನನು ತನ್ನ ದಿನದಲ್ಲಿನ ಕ್ರೈಸ್ತರಿಗೆ ಭರವಸ ನೀಡಿ ಹೇಳುತ್ತಿರುವದೇನೆಂದರೆ ದೇವರ ಆಶೀರ್ವಾದವು ಆ *ಕಾಲಕ್ಕೆ* ಇರುತ್ತದೆ, ಹೊರತು ಭವಿಷ್ಯದಲ್ಲಿ ಸಾವಿರಾರು ವರ್ಷಗಳ ಬಳಿಕ ಆಗಿರುವದಿಲ್ಲ ಎಂಬುದೆ. "ತನ್ನ ಬೆನ್ನನ್ನು ಗೋಡೆಗೆ ಅಂಟಿಸಿಕೊಂಡ, ತನ್ನ ಪ್ರಾಣಕ್ಕಾಗಿ ಕಾದಾಟವನ್ನು ಮಾಡುತ್ತಿರುವ ಸಭೆಯೊಂದಕ್ಕೆ, ಮುಂದೆ ಇಪ್ಪತ್ತನೆಯ ಶತಮಾನಗಳಲ್ಲಿ ಏನು ಸಂಭವಿಸಲಿದೆ ಎಂಬನ್ನು ಹೇಳುವ ಸ್ವರ್ಗಲೋಕದ ವೇಳಾಪಟ್ಟಿಯ ಅಗತ್ಯತೆಯು ಇರುವದಿಲ್ಲ. ಯೇಸು ಕ್ರಿಸ್ತನು ಈಗ ಇದ್ದಾನೆ, ಅದರ ಜೀವಕ್ಕಾಗಿ ಈ *ಕ್ಷಣ* ಕಾಳಜಿ ಮಾಡುತ್ತಿದ್ದಾನೆ ಎಂದು ತಿಳಿದುಕೊಳ್ಳುವ ಅಗತ್ಯವಿತ್ತು."[3]

# ಪತ್ರಿಕೆಗೆ ಪರಿಚಯ (1:4-7)

**4ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಯೋಹಾನನು ಬರೆಯುವದೇನೆಂದರೆ -
ವರ್ತಮಾನ ಭೂತ 5ಭವಿಷ್ಯತ್ಕಾಲಗಳಲ್ಲಿರುವಾತನಿಂದ ಮತ್ತು ಆತನ ಸಿಂಹಾಸನದ ಮುಂದಿರುವ ಏಳು ಆತ್ಮಗಳಿಂದ ಮತ್ತು ನಂಬತಕ್ಕ ಸಾಕ್ಷಿಯೂ ಸತ್ತವರೊಳಗಿಂದ ಮೊದಲು ಎದ್ದು ಬಂದವನೂ ಭೂರಾಜರ ಒಡೆಯನೂ ಆಗಿರುವ ಯೇಸು ಕ್ರಿಸ್ತನಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. ನಿಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ
6ನಮ್ಮನ್ನು ರಾಜ್ಯವನ್ನಾಗಲಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್.
7ಇಗೋ, ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು; ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆಬಡುಕೊಳ್ಳುವರು. ಹೌದು, ಹಾಗೆಯೇ ಆಗುವದು. ಆಮೆನ್.**

**ವಚನ 4.** 4ರಿಂದ 7 ವಚನಗಳು ಯೋಹಾನನ ದಿನದಲ್ಲಿ ಪತ್ರಿಕೆಗಳನ್ನು ಬರೆಯುವದಕ್ಕೆ ಅನುಸರಿಸಲಾಗುತ್ತಿದ್ದ ರೂಢಿಯಲ್ಲಿದ್ದ ರೂಪವನ್ನು ಅನುಸರಿಸುತ್ತಾನೆ. ಪತ್ರಿಕೆಯು ಅದನ್ನು ಕಳುಹಿಸುವಾತನು ಮತ್ತು ಸ್ವೀಕರಿಸಿಕೊಳ್ಳುವವರು ಯಾರೆಂದು ಹೆಸರಿಸುವ ಮೂಲಕವಾಗಿ ಆರಂಭಗೊಳ್ಳುತ್ತಿತ್ತು. ಆದ್ದರಿಂದ ನಾವು **ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಯೋಹಾನನು ಬರೆಯುವದೇನೆಂದರೆ** ಎಂದು ಓದುತ್ತೇವೆ. **ಆಸ್ಯ** ಎಂದರೆ ಏಶಿಯಾ ಖಂಡವನ್ನು ಸೂಚಿಸುವದಿಲ್ಲ, ಆದರೆ ರೋಮನ್ ಪ್ರಾಂತ್ಯವಾದ ಆಸ್ಯ ಸೀಮೆಯನ್ನು ಸೂಚಿಸುತ್ತದೆ, ಅದು ಈಗಿನ ಟರ್ಕಿಯ ಪಾಶ್ಚಾತ್ಯ ಸಮುದ್ರ ದಡದಲ್ಲಿತ್ತು. ಏಳು ಸಭೆಗಳನ್ನು ಈ ಅಧ್ಯಾಯದ ನಂತರದ ಭಾಗದಲ್ಲಿ ಪಟ್ಟಿ ಮಾಡಲಾಗಿರುತ್ತದೆ: ಎಫೆಸ, ಸ್ಮುರ್ನ, ಪೆರ್ಗಮ, ಥುವತ್ತೈರ, ಸಾರ್ದಿಸ್, ಫಿಲದೆಲ್ಫಿಯ, ಮತ್ತು ಲವೊದಿಕೀಯ ಎಂಬ ಸ್ಥಳಗಳಲ್ಲಿ ಕೂಡಿ ಬರುತ್ತಿದ್ದ ಸಭೆಗಳು (ವ. 11).

ಸಾಮಾನ್ಯವಾಗಿ "ಏಕೆ ಈ **ಏಳು** ಸಭೆಗಳು?" ಎಂಬ ಪ್ರಶ್ನೆಯು ಕೇಳಲ್ಪಡುತ್ತದೆ ಯಾಕೆಂದರೆ ಆ ಪ್ರಾಂತ್ಯದಲ್ಲಿ ಏಳಕ್ಕಿಂತ ಅಧಿಕ ಸಭೆಗಳು ಸ್ಥಾಪಿಸಲ್ಪಟ್ಟಿದ್ದವು. ನಾವು ಕೆಲವೊಂದು ಶಿಕ್ಷಿತ ಊಹೆಗಳನ್ನು ಮಾಡಿಕೊಳ್ಳಬಹುದು: (1) ಪುಸ್ತಕದಲ್ಲಿ "ಏಳು" ಸಂಖ್ಯೆಗೆ ಕೊಡಲಾಗಿರುವ ಒತ್ತನ್ನು ಗಮನಲ್ಲಿಟ್ಟುಕೊಂಡು ಏಳು ಸಭೆಗಳು ಆರಿಸಿಕೊಳ್ಳಲ್ಪಟ್ಟಿರಬಹುದು. (2) ಈ ಏಳು ಸಭೆಗಳು ಪ್ರಾಂತ್ಯದ ಒಳಭಾಗವನ್ನು ಸುತ್ತುವ ರಸ್ತೆಗಳಲ್ಲಿರುವ ಸ್ಥಳದಲ್ಲಿ ಸ್ಥಾಪಿಸಲ್ಪಟ್ಟಿದ್ದವು; ಅವುಗಳು ಮೂಲಕ ಆದರಣೆಯ ಸಂದೇಶವು ಇಡೀ ಕ್ಷೇತ್ರಕ್ಕೆ ಹರಡಿಕೊಳ್ಳಬಹುದಿತ್ತು. (3) ಇವುಗಳು ಆ ಕಾಲದಲ್ಲಿ–ಮತ್ತು ಯಾವದೇ ಕಾಲದಲ್ಲಿರುವ–ಸಭೆಗಳಿಗೆ ವೈಶಿಷ್ಟ್ಯತೆ ಹೊಂದಿರುವದರಿಂದ ಈ ಏಳು ಸಭೆಗಳನ್ನು ಆರಿಸಿಕೊಂಡಿರಬಹುದಾಗಿದೆ.

ಒಂದು ಹೆಚ್ಚು ಔಚಿತ್ಯವಾದ ಪ್ರಶ್ನೆಯೆಂದರೆ "**ಆಸ್ಯ ಸೀಮೆಯಲ್ಲಿರುವ** ಏಳು ಸಭೆಗಳನ್ನೇ ಏಕೆ?" ಎಂದಾಗಬಹುದು. ಪ್ರಕಟನೆ ಪುಸ್ತಕವು ಬರೆಯಲ್ಪಡುವ ಹೊತ್ತಿಗೆ, ರೋಮನ್ ಸಾಮ್ರಾಜ್ಯದಲ್ಲೆಲ್ಲಾ ಸಭೆಗಳು ಸ್ಥಾಪಿಸಲ್ಪಟ್ಟಿದ್ದವು; ಹಾಗಾದರೆ ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಮಾತ್ರವೇ ಏಕೆ ಪತ್ರಗಳು ಕಳುಹಿಸಲ್ಪಟ್ಟವು? ಆ ಸ್ಥಳಗಳಲ್ಲಿಯೇ ರೋಮನ್ನರಿಂದ ಹಿಂಸೆಯು ಅತ್ಯಂಥ ತೀಕ್ಷ್ಣವಾಗಿ ಸಂಭವಿಸುತ್ತಿತ್ತು; ಆ ಪ್ರಾಂತ್ಯಗಳಲ್ಲಿಯೇ ಕ್ರೈಸ್ತರು ಹೆಚ್ಚಾದ ನೋವನ್ನು ಅನುಭವಿಸುತ್ತಿದ್ದರು. ಇದಕ್ಕೆ ಎರಡು ಕಾರಣಗಳಿದ್ದವು: (1) ಚಕ್ರವರ್ತಿಯ

ಆರಾಧನೆಯು ಆಸ್ಯದಲ್ಲಿ ಅತ್ಯಂಥ ಬಲವಾಗಿತ್ತು. "ಆಸ್ಯದಲ್ಲಿ ಕೈಸರ ಆರಾಧನೆಯ ಪಾಷಂಡಮತವು ಜನಪ್ರಿಯವಾಗಿತ್ತು. ಆಸ್ಯವು ಪಾಷಂಡಮತ ಹಾಗೂ ಎಲ್ಲಾ ವಿಧವಾದ ನಿಗೂಢತೆಗಳಿಗೆ ಫಲವತ್ತಾದ ಭೂಮಿಯಂತಾಗಿತ್ತು, ಮತ್ತು ದೇಶಭಕ್ತಿ, ಧರ್ಮ, ಹಾಗೂ ನಿಗೂಢತೆಗಳಿಂದ ಬಹುವಾಗಿ ಚಮತ್ಕಾರದಿಂದ ಕೂಡಿದ ಪಾಷಂಡಮತಕ್ಕೆ ಸಿಗುತ್ತಿದ್ದಷ್ಟು ಅದ್ದೂರಿಯಾದ ಸ್ವಾಗತವು ಇನ್ನಾವದಕ್ಕೂ ಸಿಗುತ್ತಿರಲಿಲ್ಲ."[4] ಆಸ್ಯ ಸೀಮೆಯಲ್ಲಿ ಕ್ರೈಸ್ತತ್ವವು ಅತ್ಯಂಥ ಬಲಿಷ್ಠವಾಗಿತ್ತು. ಕ್ರಿ.ಶ. 70ರ ಬಳಿಕ ಈ ಪ್ರಾಂತ್ಯವು "ಕ್ರೈಸ್ತತ್ವದ ಪ್ರಮುಖ ಭದ್ರಕೋಟೆಯಾಗಿತ್ತು."[5] ಕ್ರೈಸ್ತರು ಚಕ್ರವರ್ತಿಯ ಆರಾಧನೆಯನ್ನು ತೀಕ್ಷ್ಣವಾಗಿ ವಿರೋಧಿಸುತ್ತಿದ್ದರಾದ್ದರಿಂದ ತಿಕ್ಕಾಟವು ಅನಿವಾರ್ಯವಾಗಿತ್ತು. ರೋಮನ್ ಶಿಕ್ಷೆಯ ಹೊಡೆತವು ಆಸ್ಯ ಸೀಮೆಯಲ್ಲಿ ಜೀವಿಸುತ್ತಿದ್ದ ಕ್ರೈಸ್ತರ ಮೇಲೆ ಬಿದ್ದಿತ್ತು.

ದೇವರಿಗೆ ಎಲ್ಲಿ ಅಗತ್ಯತೆಯು ಇರುತ್ತದೆಂಬುದು *ಗೊತ್ತಿತ್ತು*. ಯಾವ ಸ್ಥಳದಲ್ಲಿ ತನ್ನ ಮಕ್ಕಳು ನೋವಿನಲ್ಲಿರುತ್ತಾರೆಂಬುದು ದೇವರಿಗೆ ತಿಳಿದಿತ್ತು, ಮತ್ತು ಆತನು ತನ್ನ ಆದರಣೆಯನ್ನು ಅದರ ಅಗತ್ಯತೆಯಿರುವ ಕಡೆಯಲ್ಲಿ ನಡಿಸಿದನು. ಆತನು ಮೋಶೆಗೆ ಕಾಣಿಸಿಕೊಂಡಾಗ ಆತನಿಗೆ ಹೀಗೆ ಹೇಳಿದನು, "ಐಗುಪ್ತ ದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ . . . ಅವರ ದುಃಖವನ್ನೆಲ್ಲಾ ನಾನು ಬಲ್ಲೆನು" (ವಿಮೋಚನಕಾಂಡ 3:7). ಆತನು ಪೆರ್ಗಮದಲ್ಲಿರುವ ಸಭೆಗೆ ಹೀಗೆ ಹೇಳಿದನು, "ನೀನು ವಾಸವಾಗಿರುವ ಸ್ಥಳವನ್ನು ಬಲ್ಲೆನು; ಅದು ಸೈತಾನನ ಸಿಂಹಾಸನವಿರುವ ಸ್ಥಳವಾಗಿದೆ" (2:13)-ಸೈತಾನನು ಅತ್ಯಂಥ ಬಲಿಷ್ಠವಾಗಿದ್ದಂಥ ಸ್ಥಳ. ದೇವರು ಈಗಲೂ ಬಲ್ಲವನಾಗಿರುವಂಥ ದೇವರಾಗಿದ್ದಾನೆ. ಒಂದು ಹೃದಯವು ಒಡೆದು ಹೋದಾಗ ಮತ್ತು ಜೀವಿತದ ಭಾರಗಳು ನಮ್ಮನ್ನು ಸೋಲಿಸಿ ಬಿಡುವಂತೆ ಬೆದರಿಸುವಾಗ ದೇವರಿಗೆ ಅದು ಗೊತ್ತಿರುತ್ತದೆ. "ದೇವರು . . . ಎಲ್ಲವನ್ನೂ ಬಲ್ಲವನಾಗಿದ್ದಾನೆ" (1 ಯೋಹಾನ 3:20).

ಆ ದಿನದ ಪತ್ರಿಕೆಗಳಲ್ಲಿ, ನಂತರದ ಭಾಗವಾಗಿ ಅಭಿವಂದನೆಯು ಇರುತ್ತಿತ್ತು. ಯೋಹಾನನು ಹೀಗೆ ಬರೆಯುತ್ತಾನೆ, **ನಿಮಗೆ ಕೃಪೆಯೂ ಶಾಂತಿಯೂ ಆಗಲಿ.** ಈ ಪದಗುಚ್ಛವು ಪ್ರೇರಿತ ಲೇಖಕರ ಪತ್ರಿಕೆಗಳಲ್ಲಿ ರೂಢಿಯಾಗಿ ಬಳಸುತ್ತಿದ್ದ ಅಭಿವಂದನೆಯಾಗಿರುತ್ತಿತ್ತು (ರೋಮಾ 1:7; 1 ಕೊರಿಂಥ 1:3; ಗಲಾತ್ಯ 1:3; ಫಿಲೆಮೋನ 3; ನೋಡಿರಿ 1 ಪೇತ್ರ 1:2; 2 ಪೇತ್ರ 1:2; 2 ಯೋಹಾನ 3). **ಕೃಪೆ** ಎಂದರೆ ದೇವರಿಂದ ಅರ್ಹತೆಯಿಲ್ಲದಿದ್ದರೂ ಪಡೆಯುವಂಥ ಕೃಪಾಕಟಾಕ್ಷವಾಗಿದೆ; **ಶಾಂತಿ** ಎಂಬುದು ನಮ್ಮ ಜೀವಿತಗಳಲ್ಲಿ ದೇವರು ಮಾಡುವ ಕ್ರಿಯೆಯ ಫಲಿತವಾಗಿರುತ್ತದೆ. ಯೋಹಾನನ ವಾಚಕರು ದೇವರ ಕೃಪೆಯ ಕುರಿತು ಪುನಃ ನಿಶ್ಚಯಪಡಿಸಲ್ಪಡುವದನ್ನು ಹಂಬಲಿಸಿದರು, ಮತ್ತು ಅವರ ಹೃದಯಗಳು ಆತನ ಶಾಂತಿಗಾಗಿ ತುಡಿಯುತ್ತಿದ್ದವು ಎಂಬುದರಲ್ಲಿ ಸಂಶಯವೇ ಇರುವದಿಲ್ಲ.

ಆದದರಿಂದ ಯೋಹಾನನು, ತನ್ನ ವಂದನೆಯು **ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಾತನಿಂದ** ಬಂದದ್ದು ಎಂಬುದಾಗಿ ಸೇರ್ಪಡೆಗೊಳಿಸುತ್ತಾನೆ. ಪ್ರಕಟನೆ ಪುಸ್ತಕದಲ್ಲಿನ ಗ್ರೀಕ್ ವಾಕ್ಯದ ವ್ಯಾಕರಣವು ಕೆಲವೊಂದು ಸ್ಥಳಗಳಲ್ಲಿ ಅಸಾಂಪ್ರದಾಯಿಕವಾಗಿರುತ್ತದೆ. ಈ ಪದಗುಚ್ಛವು ಅಂತಹ ಒಂದು ಸ್ಥಳಗಳಲ್ಲೊಂದಾಗಿದೆ. ಮೂಲವಾಕ್ಯದಲ್ಲಿ ಅಕ್ಷರಶಃ "ಇರುವಾತ (ನು), ಇದ್ದವ (ನು), ಮತ್ತು ಬರಲಿರುವವ (ನು)" ಎಂದು ಇರುತ್ತದೆ. ವ್ಯಾಕರಣವು ಸಹಜವೆಂದೆಣಿಸಬಹುದು, ಆದರೆ ಅದು ಪರಿಣಾಮಕಾರಿಯಾಗಿರುತ್ತದೆ.

ದೇವರನ್ನು ಬಣ್ಣಿಸುವದಕ್ಕೆ ಯೋಹಾನನ ಶಬ್ದ ಬಳಕೆಯು ಆತನ ವಾಚಕರ ಮೇಲೆ

ಶಕ್ತಿಶಾಲಿ ಪರಿಣಾಮಗಳನ್ನು ಬೀರಿರಬಬಹುದಾಗಿದೆ. ದೇವರು ಮೋಶೆಗೆ ತನ್ನ ಜನರನ್ನು ಬಿಡುಗಡೆಗೊಳಿಸುವಂತೆ ಹೇಳಿದಾಗ, ಮೋಶೆಯು ಆಕ್ಷೇಪಣೆ ವ್ಯಕ್ತಪಡಿಸಿದನು, “ಅವರು - ಆತನ ಹೆಸರೇನೆಂದು ನನ್ನನ್ನು ಕೇಳಿದರೆ ನಾನೇನು ಉತ್ತರಕೊಡಬೇಕು?” (ವಿಮೋಚನಕಾಂಡ 3:13). ಬಳಿಕ ದೇವರು ಮೋಶೆಗೆ ಹೀಗೆ ಹೇಳಿದನು, “ಇರುವಾತನೇ ಆಗಿದ್ದೇನೆ, ನೀನು ಇಸ್ರಾಯೇಲ್ಯರಿಗೆ - ಇರುವಾತನೆಂಬವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳಬೇಕು” (ವಿಮೋಚನಕಾಂಡ 3:14). ಪ್ರಕಟನೆ 1:4ರಲ್ಲಿ “ಇರುವಾತನಿಂದ” ಎಂಬ ಪದಗುಚ್ಛವನ್ನು ಅನುವಾದಿಸಿರುವ ಗ್ರೀಕ್ ಪದವು “[ವಿಮೋಚನಕಾಂಡ] 3:14ರಲ್ಲಿನ ಇರುವಾತನು ಎಂಬುದರ ಗ್ರೀಕ್ ರೂಪವಾಗಿದೆ.”[6]

ಹಳೆಯ ಒಡಂಬಡಿಕೆಯ ಪರಿಚಯ ಹೊಂದಿರುವ ವಾಚಕರು ದೇವರು ಇಸ್ರಾಯೇಲ್ಯರನ್ನು ಬಿಡಿಸಿದ್ದರಲ್ಲಿ ಏನೆಲ್ಲಾ ಸಂಭವಿಸಿತೆಂಬುದನ್ನು ಜ್ಞಾಪಕಕ್ಕೆ ತಂದುಕೊಳ್ಳದೆ ಪ್ರಕಟನೆ 1ರಲ್ಲಿ ದೇವರಿಗೆ ನೀಡಲಾಗಿರುವ ಬಿರುದನ್ನು ಕೇಳಿಸಿಕೊಳ್ಳಲಾಗಲಿಲ್ಲ. ಮೋಶೆ ಹಾಗೂ ಆರೋನ ಇವರು ಯೆಹೋವನಿಂದ ಬಂದವರೆಂಬುದನ್ನು ಫರೋಹನಿಗೆ ಸಾಭಿತುಪಡಿಸುವಂತೆ ಮಹಾ ಸೂಚಕಕಾರ್ಯಗಳನ್ನು ಮಾಡುವ ಹಾಗೆ ದೇವರು ಅವರನ್ನು ಶಕ್ತಗೊಳಿಸಿದ್ದನು. ಹತ್ತು ಉಪದ್ರವಗಳು - ನೀರು ರಕ್ತವಾಗಿ ಮಾರ್ಪಟ್ಟ ಉಪದ್ರವದಿಂದ ಆರಂಭಗೊಂಡು-ಬಲಿಷ್ಠ ಐಗುಪ್ತವನ್ನು ಅದರ ಮೊಣಕಾಲೂಗಳ ಮೇಲೆ ನಿಲ್ಲುವಂತೆ ಮಾಡಿತ್ತು.

ಫರೋಹನಿಂದ ಹೆದರಿಕೆಗೊಳಗಾಗದೆ ಇದ್ದ ದೇವರು ಕೈಸರಿನಿಂದ ಹೆದರಿಕೆಗೆ ಒಳಗಾಗುವದಿಲ್ಲ ಎಂಬ ಭರವಸವು ದಬ್ಬಾಳಿಕೆಗೊಳಪಟ್ಟ ಕ್ರೈಸ್ತರಿಗೆ ಸಿಕ್ಕಲಿತ್ತು. ಗತಕಾಲದಲ್ಲಿ ತನ್ನ ಜನರನ್ನು ಬಿಡುಗಡೆಗೊಳಿಸಿದ್ದ ದೇವರು, ಅವರ ದಿನದಲ್ಲಿರುವ ತನ್ನ ಜನರನ್ನು ವಿಮೋಚಿಸಬಲ್ಲವನಾಗಿದ್ದನು, ಯಾಕೆಂದರೆ ಆತನು ಈಗಲೂ ಅಧಿಕಾರದಲ್ಲಿದ್ದನು. ದೇವರು ಅವರನ್ನು *ಅವರ* ಸಮಸ್ಯೆಗಳಿಂದ ವಿಮೋಚಿಸಬಲ್ಲನು ಎಂಬ ಭರವಸವನ್ನು ಇಂದಿನ ಕ್ರೈಸ್ತರು ಹೊಂದಿಕೊಳ್ಳತಕ್ಕದ್ದು. ನಮ್ಮ ದೇವರು “ಇರುವವನು ಮತ್ತು ಇದ್ದವನು ಹಾಗೂ ಬರಲಿರುವವನು ಆಗಿರುವ ದೇವರಾಗಿದ್ದಾನೆ.”

ವಂದನೆಯು **ಆತನ ಸಿಂಹಾಸನದ ಮುಂದಿರುವ ಏಳು ಆತ್ಮಗಳಿಂದ** ಸಹ ತಿಳಿಸಲ್ಪಟ್ಟದ್ದಾಗಿತ್ತು. ಈ ಪದಗುಚ್ಛವು ಸಂಭಾವ್ಯವಾಗಿ ಪವಿತ್ರಾತ್ಮನನ್ನು ಸೂಚಿಸುತ್ತದೆ. ಈ ಪದಗುಚ್ಛವು ಕೇವಲ ಏಳು ಆತ್ಮೀಕ ಜೀವಿಗಳನ್ನು ಸೂಚಿಸುತ್ತದೆ, ಬಹುಶಃ ದೇವರ ಅಪ್ಪನೆಯನ್ನು ಎದುರು ನೋಡುತ್ತಾ ಕಾಯುತ್ತಿರುವ ದೇವದೂತರನ್ನು ಸೂಚಿಸುತ್ತದೆಂದು ಕೆಲವರು ನಂಬುತ್ತಾರೆ. ಈ ಅರ್ಥನಿರೂಪಣೆಯು ಸಾಧ್ಯವಿರುತ್ತದೆ, ಆದರೆ ತಕ್ಷಣದ ಸನ್ನಿವೇಶವು, ಪುಸ್ತಕದ ಸನ್ನಿವೇಶದ ಜೊತೆಯಲ್ಲಿ, ಇದು ಪವಿತ್ರಾತ್ಮನನ್ನು ಎಂಬ ನಿರ್ಣಯದ ಪರವಾಗಿರುತ್ತದೆ. ಸಾಮಾನ್ಯವಾಗಿ ಅಲ್ಪವಾದ ಆತ್ಮಗಳು ತಂದೆ ಮತ್ತು ಮಗನ ಸಂಗಡ ಒಟ್ಟುಗೂಡಿಸಲ್ಪಡುವದಿಲ್ಲ. ಅಷ್ಟುಮಾತ್ರವಲ್ಲದೆ, “ಏಳು ಆತ್ಮಗಳು” (ನೋಡಿರಿ 3:1; 4:5; 5:6) ಎಂಬ ಪದವು ಪವಿತ್ರಾತ್ಮನನ್ನು ಸೂಚಿಸುವದಿಲ್ಲವಾದರೆ, ಪ್ರಕಟನೆ ಪುಸ್ತಕದಲ್ಲಿ ಪವಿತ್ರಾತ್ಮನ ಕುರಿತು ಹೇಳುವದಕ್ಕೆ ಸ್ವಲ್ಪವೇ ಇರುತ್ತದೆ ಅಥವಾ ಏನೂ ಇರುವದಿಲ್ಲ ಎಂದಾಗುತ್ತದೆ.

“ಒಬ್ಬನೇ ಆತ್ಮನು” (ಎಫೆಸ 4:4) ಇರುತ್ತಾನಾದ್ದರಿಂದ, ಈ ಉಲ್ಲೇಖವು ಪವಿತ್ರಾತ್ಮನನ್ನು ಕುರಿತಾಗಿದೆ ಎಂದು ಭಾವಿಸಿಕೊಳ್ಳುತ್ತಾ **ಏಳು** ಎಂಬುದನ್ನು ಇಲ್ಲಿ ಅದು “ಪರಿಪೂರ್ಣತೆ” ಅಥವಾ “ಪವಿತ್ರ ಸಂಪೂರ್ಣತೆ”ಯ ಮಹತ್ವಪೂರ್ಣತೆಯೊಂದಿಗೆ ಬಳಸಿಕೊಳ್ಳತಕ್ಕದ್ದು. ಕೆಲವರು ಈ ಉಲ್ಲೇಖವನ್ನು ಯೆಶಾಯ 11:2ರಲ್ಲಿರುವ ಪವಿತ್ರಾತ್ಮನ ಏಳು ವಿಧವಾದ ಗುಣಸ್ವಭಾವಗಳು ಅಥವಾ ಜೆಕರ್ಯ 4:6, 10ರಲ್ಲಿರುವಂತೆ ದೇವರ ಏಳು

ಕಣ್ಣುಗಳು ಎಂದು ಭಾವಿಸುತ್ತಾರೆ. "ಏಳು ಆತ್ಮಗಳು" ಎಂಬ ಪದಗುಚ್ಛವು ಅಥವಾ "ಏಳು-ಪಟ್ಟು ಪವಿತ್ರಾತ್ಮನು" (NIVಯ ಅಡಿಟಿಪ್ಪಣಿ) ಎಂಬ ಪದಗುಚ್ಛವು ಬಹುಶಃ ದೇವರ ಚಿತ್ತವನ್ನು ಕಾರ್ಯರೂಪಕ್ಕೆ ತರುವಲ್ಲಿ ಪವಿತ್ರಾತ್ಮನಿಗಿರುವ ಪರಿಪೂರ್ಣವಾದ ಸಾಮರ್ಥ್ಯವನ್ನು ಸೂಚಿಸಬಹುದಾಗಿದೆ. **ಆತನ ಸಿಂಹಾಸನದ ಮುಂದಿರುವ** ಎಂಬ ಪದಗುಚ್ಛವು "ಆತನ ಚಿತ್ತವನ್ನು ನಡಿಸುವದಕ್ಕೆ ಸಿದ್ಧವಾಗಿ" ಎಂಬ ಸೂಚ್ಯಾರ್ಥವನ್ನು ನೀಡುತ್ತದೆ.

ಈ ಪದಗಳ ಬಳಕೆಯು ಅಹಸಜವಾಗಿಯಾದರೂ, ಯೋಹಾನನು 4 ಮತ್ತು 5 ವಚನಗಳಲ್ಲಿ ದೇವತ್ವದ ಬಗ್ಗೆ ಬರೆದನೆಂದು ಸ್ಪಷ್ಟವಾಗಿರುತ್ತದೆ: (1) ಸನ್ನಿವೇಶದಲ್ಲಿ, "ಇರುವಾತನೂ ಇದ್ದವನೂ ಬರುವಾತನೂ" ನಿತ್ಯ ದೇವರಾಗಿರುವ ತಂದೆಯಾಗಿರತಕ್ಕದ್ದು. ಈ ಪರಿಭಾಷೆಯು ಕೆಲವು ಸಾರಿ ಯೇಸುವಿಗೆ ಅನ್ವಯಿಸಲ್ಪಟ್ಟಿರುತ್ತದೆ (ವ. 8); ಆದರೆ ಯೇಸುವನ್ನು 5ನೇ ವಚನದಲ್ಲಿ ಪಟ್ಟಿ ಮಾಡಲಾಗಿದೆಯಾದ್ದರಿಂದ, ಈ ಪರಿಭಾಷೆಯು ತಂದಗೆ ಅನ್ವಯಗೊಳಿಸತಕ್ಕದ್ದು. (2) ಈಗಾಗಲೇ ಅಭಿಪ್ರಾಯ ಪಟ್ಟಿರುವ ಪ್ರಕಾರ, "ಏಳು ಆತ್ಮಗಳು" ಬಹುಶಃ ಪವಿತ್ರಾತ್ಮನನ್ನು ಸೂಚಿಸುತ್ತದೆ. (3) "ತ್ರೈಯೇಕತ್ವ" ಪಟ್ಟಿಯು ಮಗನ ಹೆಸರನ್ನು ಪ್ರಸ್ತಾಪಿಸುವ ಮೂಲಕ ಪೂರ್ತಿಗೊಳ್ಳುತ್ತದೆ: ಯೇಸು ಕ್ರಿಸ್ತನು (ವ. 5).

**ವಚನ 5.** ಅಧ್ಯಾಯದ ಉಳಿದ ಭಾಗವೆಲ್ಲಾ **ಯೇಸು ಕ್ರಿಸ್ತನ** ಕುರಿತಾಗಿ ಇರುತ್ತದಾದ್ದರಿಂದ, ಯೋಹಾನನು ಮಗನ ಬಗ್ಗೆ ಕೊನೆಯಲ್ಲಿ ಪ್ರಸ್ತಾಪಿಸಿದನು. ಅಪೊಸ್ತಲನು ಯೇಸುವು ಯಾರಾಗಿ*ದ್ದಾನೆ* ಎಂದು ಹೇಳುವ ಮೂಲಕ ತನ್ನ ಒತ್ತು ಕೊಡುವಿಕೆಯನ್ನು ಆರಂಭಗೊಳಿಸುತ್ತಾನೆ: **ನಂಬತಕ್ಕ ಸಾಕ್ಷಿಯೂ ಸತ್ತವರೊಳಗಿಂದ ಮೊದಲು ಎದ್ದುಬಂದವನೂ ಭೂರಾಜರ ಒಡೆಯನೂ ಆಗಿರುವ ಯೇಸು ಕ್ರಿಸ್ತನು.** ಪ್ರತಿಯೊಂದು ಪದವು ಸಹ ಯೋಹಾನನ ವಾಚಕರನ್ನು ಆದರಿಸುವದಕ್ಕಾಗಿ ರಚಿಸಲ್ಪಟ್ಟದ್ದಾಗಿದೆ:

1. **ನಂಬತಕ್ಕ ಸಾಕ್ಷಿ.** ಯೇಸು ತನ್ನ ಜೀವಿತದುದ್ದಕ್ಕೂ ದೇವರ ಚಿತ್ತದ ವಿಷಯವಾಗಿ ನಂಬಿಗಸ್ತನಾಗಿ ಸಾಕ್ಷಿಯನ್ನು ನೀಡಿದನು (ಯೋಹಾನ 3:32; 18:37). ಮೋಶೆ ಮತ್ತು ಕ್ರಿಸ್ತನ ನಡುವೆ ಒಂದು ಸಮಾನಾರ್ಥವನ್ನು ಕಲ್ಪಿಸಬಹುದಾಗಿದೆ, ಇಬ್ಬರೂ ಸಾಕ್ಷಿಯಾಗಿರುವಿಕೆಯಲ್ಲಿ ನಂಬಿಗಸ್ತರಾಗಿದ್ದರು, ಅಥವಾ ವಾಕ್ಯವನ್ನು ಕುರಿತು ಸಾಕ್ಷಿ ಹೇಳುವದರಲ್ಲಿ ನಂಬಿಗಸ್ತರಾಗಿದ್ದರು. ಹೇಗೂ, ಇಲ್ಲಿ ಸಾಕ್ಷಿ ಹೇಳುವದಕ್ಕಿಂತಲೂ ಅಧಿಕ ಅರ್ಥವು ಇರುವದಾಗಿದೆ. "ಸಾಕ್ಷಿ" ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್ ಪದವಾದ μάρτυς (*martus*) ಎಂಬ ಪದದಿಂದಲೇ "ರಕ್ತಸಾಕ್ಷಿ" ಎಂಬ ಪದವು ಬಂದಿರುತ್ತದೆ. ಯೇಸು "ಸಾಯಬೇಕಾದರೂ" ನಂಬಿಗಸ್ತ ಸಾಕ್ಷಿಯಾಗಿದ್ದನು (ಫಿಲಿಪ್ಪಿ 2:8; KJV). ಯೇಸು ಕ್ರೈಸ್ತರಿಗೆ "ಸಾಯಬೇಕಾದರೂ ನಂಬಿಗಸ್ತರಾಗಿರಿ" ಎಂದು ಕರೆ ಕೊಟ್ಟಾಗ (2:10), ಸ್ವತಃ ತಾನು ಮಾಡುವದಕ್ಕೆ ಮನಸ್ಸಿಲ್ಲದವನಾಗಿದ್ದ ಯಾವದೇ ಕಾರ್ಯವನ್ನು ಮಾಡಬೇಕೆಂದು ಅವರಿಂದ ಕೇಳುತ್ತಿರುವದಿಲ್ಲ.

2. **ಸತ್ತವರೊಳಗಿಂದ ಮೊದಲು ಎದ್ದುಬಂದವನು.** ಯೇಸುವಿನ ದೇಹವು ಸಮಾಧಿಯಲ್ಲಿಯೇ ಉಳಿದುಕೊಳ್ಳಲಿಲ್ಲ. ಆತನು ಮರಣವನ್ನು ಜಯಿಸಿದನು, ಹೀಗೆ ಸತ್ತವರೊಳಗಿಂದ ಎದ್ದು ಬಂದವರಲ್ಲಿ ಮೊದಲನೆಯವಾಗಿ "ಇನ್ನು ಮೇಲೆ ಸಾಯತಕ್ಕವನಲ್ಲ" (ರೋಮಾ 6:9). ಮರಣದ ಗಂಡಾಂತರದಲ್ಲಿರುವವರಿಗೆ ಆತನು ಹೀಗೆ ಹೇಳಿದನು, "ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ" (ವ. 18). ಕ್ರೈಸ್ತರಿಗೆ ತಾವು ಸತ್ತವರೊಳಗಿಂದ ಎಬ್ಬಿಸಲ್ಪಡುವೆವೆಂಬ ನಿರೀಕ್ಷೆಯು ಇತ್ತು (1 ಕೊರಿಂಥ 15:54-57). "ಮೊದಲು

ಎದ್ದುಬಂದವನು" ಎಂಬ ಪದವು "ಚೊಚ್ಚಲ ಮಗ"ನಿಗಿರುವ ಸರ್ವೋಚ್ಚತೆಯ ಕುರಿತಾದ ಹಳೆಯ ಒಡಂಬಡಿಕೆಯ ಬೋಧನೆಯಿಂದ ಬಂದಿರುತ್ತದೆ (ನೋಡಿರಿ ಧರ್ಮೋಪದೇಶಕಾಂಡ 21:15-17). ಕೊಲೊಸ್ಸೆ 1:18ರಲ್ಲಿ, "ಮೊದಲು ಎದ್ದು ಬಂದವನು" ಎಂಬುದು "ಪ್ರಥಮ ಸ್ಥಾನ" ಅಥವಾ "ಸರ್ವೋಚ್ಚತೆ" (KJV) ಎಂಬುದರೊಂದಿಗೆ ಜೋಡಿಸಲ್ಪಟ್ಟಿರುತ್ತದೆ. "ಮೊದಲು ಎದ್ದಬಂದವನು" (ಜ್ಯೇಷ್ಠಪುತ್ರ) ಎಂಬ ಪದವು, ಯೆಹೋವನ ಸಾಕ್ಷಿಗಳು ಹೇಳುವ ರೀತಿಯಲ್ಲಿ, ಯೇಸು ಒಬ್ಬ ಸೃಷ್ಟಿಸಲ್ಪಟ್ಟ ಜೀವಿಯಾಗಿದ್ದಾನೆಂಬ ಅಭಿಪ್ರಾಯವನ್ನು ನೀಡುವದಿಲ್ಲ.

3. **ಭೂರಾಜರ ಒಡೆಯನು.** ಯೇಸುವಿನ ಪುನರುತ್ಥಾನವಾಗಿ ನಾಲ್ವತ್ತು ದಿನಗಳ ಬಳಿಕ, ಆತನು ಪರಲೋಕಕ್ಕೆ ಆರೋಹಣಗೊಂಡನು, ಅಲ್ಲಿ ಆತನು ತಂದೆಯ ಬಲಗಡೆಯಲ್ಲಿ ಆಸೀನನಾದನು. ಅಲ್ಲಿ ಆತನು "ಭಾಗ್ಯವಂತನಾದ ಏಕಾಧಿಪತಿಯು . . . ರಾಜಾಧಿರಾಜನೂ ಕರ್ತರ ಕರ್ತನೂ" ಆಗಿ ಆಳ್ವಿಕೆ ಮಾಡುವನು (1 ತಿಮೊಥೆ 6:15; ನೋಡಿರಿ ಪ್ರಕಟನೆ 19:16). ಈ ಲೋಕದ ಒಡೆಯನು ಕೈಸರನಾಗಿರಲಿಲ್ಲ; ಯೇಸುವೇ ಒಡೆಯನಾಗಿದ್ದನು-ಮತ್ತು ಆತನು ಈ ಸತ್ಯವನ್ನು ತೋರ್ಪಡಿಸುವದಕ್ಕಾಗಿ ಸಿದ್ಧಗೊಳ್ಳುತ್ತಿದ್ದನು. ಯೇಸು ಆಳ್ವಿಕೆಯನ್ನು ಮಾಡುತ್ತಿರಲಿಲ್ಲ ಎಂದು ಕೆಲವರು ಹೇಳಿಕೊಳ್ಳುತ್ತಾರೆ, ಆದರೆ ಆತನು ಆಳ್ವಿಕೆ ಮಾಡುತ್ತಿದ್ದನೆಂದು ಬೈಬಲ್ ಕಲಿಸುತ್ತದೆ (1 ಕೊರಿಂಥ 15:24-28). ಅವರು ಆಕ್ಷೇಪಣೆಯೆತ್ತಿ ಹೇಳುವದೇನೆಂದರೆ, "ಕ್ರಿಸ್ತನು ಈಗ ಆಳ್ವಿಕೆ ಮಾಡುತ್ತಿರುವದಾದರೆ, ಏಕೆ ಲೋಕವು ಇಷ್ಟೊಂದು ಭಯಂಕರವಾದ ಸ್ಥಿತಿಯಲ್ಲಿರುತ್ತದೆ?" ಎಂಬದೆ. ಲೋಕದ ಸ್ಥಿತಿಯು ಯೇಸು ಆಳ್ವಿಕೆ ಮಾಡುತ್ತಿಲ್ಲ ಎಂಬುದನ್ನನು ಸಾಭಿತುಪಡಿಸುವದಾದಲ್ಲಿ, ಅದು ದೇವತ್ವದಲ್ಲಿ *ಯಾರೂ*-ತಂದೆಯು ಸಹ-ಆಳ್ವಿಕೆ ಮಾಡುತ್ತಿಲ್ಲ ಎಂದು ಸಾಭಿತುಪಡಿಸುವದಾಗಿದೆ![7]

ಯೇಸು ಯಾರಾಗಿದ್ದಾನೆಂದು ವಿವರಿಸಿದ ಬಳಿಕ, ಯೋಹಾನನು ಸ್ತುತಿಯ ಮಾತುಗಳನ್ನು ಹೇಳುವವನಾಗುತ್ತಾನೆ: **ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ.** ಯೇಸು ಅವರಿಗಾಗಿ ಏನು ಮಾಡಿದ್ದಾನೆಂಬುದನ್ನು ಯೋಹಾನನು ತನ್ನ ವಾಚಕರಿಗೆ ಜ್ಞಾಪಕಗೊಳಿಸುತ್ತಾನೆ:

ಆತನು **ನಮ್ಮನ್ನು ಪ್ರೀತಿಸುವವನು.** "ಪ್ರೀತಿಸುವವನು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವಾದ *ἀγαπάω* (*agapaō*) ಎಂಬುದು ವರ್ತಮಾನಕಾಲ ರೂಪದಲ್ಲಿದ್ದು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ಗ್ರೀಕ್ ಭಾಷೆಯಲ್ಲಿ, ಕಾಲರೂಪಗಳು ಕಾಲಕ್ಕಿಂತಲೂ ಕ್ರಿಯೆಯ ರೀತಿಗೆ ಸಂಬಂಧಿಸಿರುತ್ತವೆ. ಯೇಸು ಈ ಭೂಮಿಗೆ ಬಂದು ಶಿಲುಬೆಯ ಮೇಲೆ ಮರಣಿಸುವ ಮೂಲಕ ತನ್ನ ಪ್ರೀತಿಯನ್ನು ತೋರ್ಪಡಿಸಿ ಕೊಟ್ಟನು, ಮತ್ತು ಆತನು ನಮ್ಮನ್ನು ಕಾಯ್ದು ಕಾಪಾಡುವ ಮೂಲಕ ತನ್ನ ಪ್ರೀತಿಯನ್ನು *ಮುಂದುವರೆಸಿ* ತೋರಿಸುವವನಾಗಿದ್ದಾನೆ. ಮರಣವನ್ನು ಎದುರಿಸುತ್ತಿದ್ದ ಯೋಹಾನನ ವಾಚಕರಿಗೆ ಈ ಸತ್ಯವು ಭದ್ರತೆಯನ್ನು ಒದಗಿಸಿತ್ತು (ರೋಮಾ 8:36, 37).

ಆತನು ನಮ್ಮನ್ನು ಬಿಡಿಸಿದವನು. ಅನೇಕ ಪ್ರಾಚೀನ ಹಸ್ತಪ್ರತಿಗಳಲ್ಲಿ "ಬಿಡಿಸಿದನು" ಎಂಬುದರ ಬದಲಾಗಿ "ತೊಳೆದನು" ಎಂದಿರುತ್ತದೆ (ನೋಡಿರಿ KJV). "ಬಿಡಿಸಿದನು" ಎಂದು ಅನುವಾದಿಸಲ್ಪಟ್ಟಿರುವ *λύω* (*luō*) ಎಂಬ ಗ್ರೀಕ್ ಪದವು "ತೊಳೆ" (ನೋಡಿರಿ 7:14) ಎಂದು ಅನುವಾದಿಸಲ್ಪಟ್ಟಿರುವ *λούω* (*louō*) ಎಂಬ ಗ್ರೀಕ್ ಪದಕ್ಕೆ ಸಾಮ್ಯತೆಯನ್ನು ಹೊಂದಿರುತ್ತದೆ. ಯೇಸು ತನ್ನ ರಕ್ತದಿಂದ ನಮ್ಮನ್ನು ಪಾಪಗಳಿಂದ ರಕ್ಷಿಸುತ್ತಾನೆ. ಮುಂಚಿನ ಪದಗುಚ್ಛವು (ಆತನು "ನಮ್ಮನ್ನು ಪ್ರೀತಿಸುವವನು") ವರ್ತಮಾನಕಾಲ ರೂಪವನ್ನು ಬಳಸಿತು, ಆ ಮೂಲಕ ನಿರಂತರವಾಗಿ ಸಾಗುವ ಕ್ರಿಯೆಯನ್ನು ಸೂಚಿಸಿತು. ಈ ಪದಗುಚ್ಛವು (ಆತನು "ನಮ್ಮನ್ನು

ಬಿಡಿಸಿದವನು") ಎಂಬುದು ಅನಿಶ್ಚಿತ ಭೂತಕಾಲರೂಪವನ್ನು ಹೊಂದಿದ್ದು ಒಂದೇ ಸಾರಿ ನಡೆದ ಕ್ರಿಯೆಯನ್ನು ಸೂಚಿಸುತ್ತದೆ. ಗ್ರೀಕ್ ಭಾಷೆಯಲ್ಲಿ ಅನಿಶ್ಚಿತ ಭೂತಕಾಲರೂಪವು ಆಂಗ್ಲದಲ್ಲಿ ಭೂತಕಾಲರೂಪದಲ್ಲಿರುತ್ತದೆ, ಆದರೆ ಪುನಃ ಇಲ್ಲಿ ಒತ್ತು ಕ್ರಿಯೆಯ ಮೇಲೆಯೇ ಆಗಿರುತ್ತದೆ. ಆ ಒಂದೇ ಸಾರಿ ಮಾಡಲ್ಪಟ್ಟ ಕ್ರಿಯೆಯು ಶಿಲುಬೆಯ ಮೇಲೆ ಯೇಸುವು ಅನುಭವಿಸಿದ ಮರಣವೇ ಆಗಿತ್ತು. ಆತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದನಾದ್ದರಿಂದ, ಅಪರಾಧಭಾವನೆಯ ಭಾರವು ನಮ್ಮ ಆತ್ಮಗಳ ಮೇಲಿಂದ ತೆಗೆದು ಹಾಕಲ್ಪಟ್ಟಿತು (ರೋಮಾ 5:9; ಎಫೆಸ 1:7; ಕೊಲೊಸ್ಸೆ 1:20; 1 ಪೇತ್ರ 1:18, 19; 1 ಯೋಹಾನ 1:7). ಆತನು ನಮ್ಮನ್ನು ಬಿಡುಗಡೆಗೊಳಿಸಿದನು!

**ವಚನ 6.** ಯೋಹಾನನು ಯೇಸುವಿನ ಕುರಿತ ತನ್ನ ಸ್ತುತಿಯನ್ನು ಮುಂದುವರೆಸುತ್ತಾನೆ: **ನಮ್ಮನ್ನು ರಾಜ್ಯವನ್ನಾಗಿಯೂ . . . ಮಾಡಿದವನು**. ಕೆಲವರು **ವನ್ನಾಗಿಯೂ** ಎಂಬುದನ್ನು ಯೇಸು ನಮ್ಮನ್ನು *ಭವಿಷ್ಯಕಾಲದಲ್ಲಿ* ಒಂದು ರಾಜ್ಯವನ್ನಾಗಿ ಮಾಡುವನು ಎಂಬುದಾಗಿ ಅರ್ಥನಿರೂಪಣೆ ಮಾಡುತ್ತಾರೆ. ಹೇಗೂ, "ವನ್ನಾಗಿಯೂ" ಎಂಬ ಮಾತುಗಳು NASBಯಲ್ಲಿ ಇಟಾಲಿಕ್ ರೂಪದಲ್ಲಿದ್ದು ಅವುಗಳು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆಂಬುದನ್ನು ಸೂಚಿಸುತ್ತವೆ. ಮೂಲವಾಕ್ಯವು ಅಕ್ಷರಶಃ ಹೀಗಿರುತ್ತದೆ, "ಆತನು ನಮ್ಮನ್ನು ಒಂದು ರಾಜ್ಯವನ್ನಾಗಿ ಮಾಡಿದನು." **ರಾಜ್ಯವು** ಭವಿಷ್ಯದಲ್ಲಿರುವದಿಲ್ಲ; ರಾಜ್ಯವು ಈಗಾಗಲೇ ಸ್ಥಾಪಿಸಲ್ಪಟ್ಟಿರುತ್ತದೆ (ನೋಡಿರಿ ಕೊಲೊಸ್ಸೆ 1:13). ಅನೇಕ ಪ್ರಾಚೀನ ಹಸ್ತಪ್ರತಿಗಳಲ್ಲಿ "ರಾಜ್ಯವನ್ನಾಗಿಯೂ" ಎಂಬುದಕ್ಕೆ ಬದಲಾಗಿ "ರಾಜರನ್ನಾಗಿಯೂ" ಎಂದಿರುತ್ತದೆ (ನೋಡಿರಿ KJV). ಅರ್ಥವು ಮೂಲಭೂತವಾಗಿ ಒಂದೇ ಆಗಿರುತ್ತದೆ.

ಅಲ್ಲದೆ ಯೇಸು ನಮ್ಮನ್ನು **ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ** ಮಾಡಿದ್ದಾನೆ. ನಾವು ಪುನಃ ವಿಮೋಚನಕಾಂಡದಲ್ಲಿನ ಭಾಷೆಗೆ ಬರುತ್ತೇವೆ. ದೇವರು ಇಸ್ರಾಯೇಲ್ಯರಿಗೆ ಈ ವಾಗ್ದಾನವನ್ನು ನೀಡಿದನು: "ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ . . . ನೀವು ನನಗೆ ಯಾಜಕರಾಜ್ಯವೂ ಪರಿಶುದ್ಧಜನವೂ ಆಗಿರುವಿರಿ" (ವಿಮೋಚನಕಾಂಡ 19:5, 6). ಹದಿನೈದು ನೂರು ವರ್ಷಗಳ ಬಳಿಕ, ಆ ವಾಗ್ದಾನವು ಆತ್ಮೀಕ ಇಸ್ರಾಯೇಲ್ ಆಗಿರುವ ಸಭೆಯಲ್ಲಿ ತನ್ನ ನೆರವೇರಿಕೆಯನ್ನು ಕಂಡಿತು (ರೋಮಾ 2:28, 29; ಗಲಾತ್ಯ 3:29; 1 ಪೇತ್ರ 2:9). ಕ್ರೈಸ್ತರೆಲ್ಲರೂ ಯಾಜಕರಾಗಿದ್ದಾರೆ; ನಾವು ದೇವರಿಗೆ ಆತ್ಮೀಕ ಯಜ್ಞಗಳನ್ನು ಸಮರ್ಪಿಸಬೇಕು (1 ಪೇತ್ರ 2:5; ನೋಡಿರಿ ರೋಮಾ 12:1; ಇಬ್ರಿಯ 13:15). ಹೇಗೂ, ನಾವು ಯಾಜಕರಿಗಿಂತಲೂ ಹೆಚ್ಚಿನವರು, ನಾವು ಒಂದು *ರಾಜವಂಶಸ್ಥರಾದ* ಯಾಜಕರು ಆಗಿದ್ದೇವೆ (1 ಪೇತ್ರ 2:9). ನಾವು ರಾಜಮನೆತನದ ಕುಟುಂಬದ ಭಾಗವಾಗಿದ್ದೇವೆ (5:10ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ).

4 ಮತ್ತು 5 ವಚನಗಳಲ್ಲಿ ಯೇಸುವಿನ ಗುಣಸ್ವಭಾವಗಳು ಆತನು ಅಧೀನದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲದ ಯಾವದೊಂದೂ ಪರಲೋಕದಲ್ಲಾಗಲಿ ಅಥವಾ ಭೂಲೋಕದಲ್ಲಾಗಲಿ ಇರುವದಿಲ್ಲ ಎಂಬುದನ್ನು ತೋರಿಸುತ್ತವೆ. ನಾವು ಯೋಹಾನನ ಜೊತೆಗೂಡಿ ಹರ್ಷೋದ್ಗಾರವನ್ನು ಮಾಡಬೇಕು, **ಆತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್** (ನೋಡಿರಿ ದಾನಿಯೇಲ 7:13, 14).

**ವಚನ 7.** ಯೋಹಾನನು ಯೇಸುವನ್ನು ನಂಬಿಗಸ್ತನು, ಪುನರುತ್ಥಾನಗೊಂಡವನು,

ಆಳುವಾತನು, ಪ್ರೀತಿಸುವಾತನು, ಮತ್ತು ಮಹಿಮೆಯುಳ್ಳವನು ಎಂದು ವರ್ಣಿಸಿದ್ದನು. ಆತನು ಮುಂದೆ ಆತನನ್ನು ಬರಲಿರುವವನು ಎಂದು ಘೋಷಿಸುತ್ತಾನೆ: **ಇಗೋ, ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು** (ನೋಡಿರಿ ಯೋಹಾನ 19:32-37). J. W. Roberts ಹೀಗೆ ಹೇಳುತ್ತಾನೆ, "[ಈ] ವಾಗ್ದಾನವು ಎರಡನೆಯ ಬರೋಣವನ್ನು ಪ್ರಾಥಮಿಕವಾಗಿ ಸೂಚಿಸುತ್ತದೆಂಬುದನ್ನು ಅಲ್ಲಗಳೆಯುವದು ಅಸಾಧ್ಯವಾಗುವದು."[8] ವಾಗ್ದಾನದ ಸಮಗ್ರವಾದ ಸ್ವಭಾವದ ಕಾರಣದಿಂದ ಆತನು ಇದನ್ನು ಹೇಳಿದನು: **ಎಲ್ಲರ ಕಣ್ಣುಗಳು** ಮತ್ತು **ಭೂಮಿಯಲ್ಲಿರುವ ಎಲ್ಲಾ ಕುಲದವರು.** ಈ ವಚನವು 1914ರಲ್ಲಿ ಯೇಸುವು ಸದ್ದಿಲ್ಲದಂತೆ ಮತ್ತು ಕಾಣಿಸದಂತೆ ಹಿಂದಿರುಗಿ ಬಂದನು ಎಂಬ ಯೆಹೋವನ ಸಾಕ್ಷಿಗಳ ಹೇಳಿಕೆಯನ್ನು ಕೊನೆಗಾಣಿಸುತ್ತದೆ.

ಅಲ್ಲದೆ Robertsನು ಗಮನಕ್ಕೆ ತರುವದೇನೆಂದರೆ ಈ ವಾಗ್ದಾನವು ಎರಡನೆಯ ಬರೋಣಕ್ಕೆ *ಸಿಮಿತಗೊಳ್ಳುವದಕ್ಕೆ* ಸಾಧ್ಯವಿರುವದಿಲ್ಲ, ಯಾಕೆಂದರೆ ಅದು ತಾತ್ಕಾಲಿಕವಾದ "ನ್ಯಾಯತೀರ್ಪಿನ ಬರೋಣ" ಎಂಬ ದ್ವೀತಿಯಾರ್ಥವೊಂದನ್ನು ಹೊದಿರುತ್ತದೆ. ದುಷ್ಟ ದೇಶಗಳನ್ನು ದಂಡಿಸುವದಕ್ಕೆ ದೇವರು ಮೇಘಗಳಲ್ಲಿ ಬರುವರುದರ ಸಂಕೇತವು ಶಾಸ್ತ್ರಗಳುದ್ದಕ್ಕೂ ಕಂಡು ಬರುತ್ತದೆ (ನೋಡಿರಿ ಯೆಶಾಯ 19:1; ಯೆಹೆಜ್ಕೇಲ 30:3, 4). ರೋಮನ್ನರ ಹಿಮ್ಮಡಿಯ ಕೆಳಕ್ಕೆ ತುಳಿತಕ್ಕೊಳಗಾಗುತ್ತಿದ್ದ ಕ್ರೈಸ್ತರು ತಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿರುವವರನ್ನು ದಂಡಿಸುವದಕ್ಕಾಗಿ ಕರ್ತನು *ಶೀಘ್ರದಲ್ಲಿಯೆ* ಏನೋ ಒಂದನ್ನು ಮಾಡಲಿದ್ದನು ಎಂಬುದನ್ನು ತಿಳಿದುಕೊಳ್ಳುವ ಅಗತ್ಯವಿತ್ತು. ಯೇಸು ಅವರಿಗೆ "ನಾನು *ಬೇಗನೆ* ಬರಲಿದ್ದೇನೆ" ಎಂದು ಹೇಳುವ ಮೂಲಕ ಭರವಸವನ್ನು ನೀಡುತ್ತಾನೆ (ನೋಡಿರಿ 2:16; 3:11; 22:7, 12, 20; ಒತ್ತಿ ಹೇಳಿದ್ದು ನನ್ನದು).

ಆತನು ರೋಮನ್ ಸಾಮ್ರಾಜ್ಯದ ಮೇಲೆ ನ್ಯಾಯತೀರ್ಪು ಉಂಟು ಮಾಡುವವನಾಗಿ ಬರುವ ವೇಳೆಯಲ್ಲಿ, ಅಸಂತೋಷವು ಎಲ್ಲೆಲ್ಲಿಯೂ ವ್ಯಾಪಕವಾಗಿ ಹರಡಿತ್ತು: **ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆಬಡುಕೊಳ್ಳುವರು.** "ಇದು ಪಶ್ಚಾತ್ತಾಪದಿಂದ ಗೋಳಾಡುವಿಕೆ ಆಗಿರುವದಿಲ್ಲ ಆದರೆ ನಿರೀಕ್ಷೆಯಿಲ್ಲದಿರುವಿಕೆಯ ಗೋಳಾಟವಾಗಿರುವದು."[9] ಪ್ರಕಟನೆ ಪುಸ್ತಕದ ಪರಿಭಾಷೆಯಲ್ಲಿ, ಭೂಮಿಯ ನಿವಾಸಿಗಳು ಕ್ರೈಸ್ತೇತರರಾಗಿದ್ದಾರೆ. ತಮ್ಮ ಚೊಚ್ಚಲ ಮಕ್ಕಳು ಮರಣಿಸಿದಾಗ ಐಗುಪ್ತದವರು ಗೋಳಾಡಿದ (ವಿಮೋಚನಕಾಂಡ 11:6) ಪ್ರಕಾರವೇ ಕ್ರೈಸ್ತರನ್ನು ಹಿಂಸೆ ಮಾಡಿದವರು ಅಂದು ಗೋಳಾಡುವರು. ದೇವರ ಜನರ ಮೇಲೆ ನೋವನ್ನು ಬರಮಾಡಿದ್ದವರು ತಾವು ಬಿತ್ತಿದ್ದನ್ನೇ ಕೊಯ್ಯುವರು-ಎರಡರಷ್ಟು ಮತ್ತು ಮೂರರಷ್ಟು ಅಧಿಕವಾದ ಅಳತೆಯಲ್ಲಿ ಕೊಯ್ಯುವರು.

Robertsನು ಹೇಳುವ ಪ್ರಕಾರ, ನಾವು ಪುನಃ ಒತ್ತಿ ಹೇಳೋಣ, ಏನೆಂದರೆ 7ನೇ ವಚನದಲ್ಲಿ ವಾಗ್ದಾನವು "ಎರಡನೆಯ ಬರೋಣಕ್ಕೆ *ಪ್ರಾಥಮಿಕ* ಉಲ್ಲೇಖವನ್ನು ಹೊಂದಿದೆ" (ಒತ್ತಿ ಹೇಳಿದ್ದು ನನ್ನದು). ಶಾಸ್ತ್ರಗಳಲ್ಲಿ ಪ್ರಸ್ತಾಪಿಸಲಾಗಿರುವ ತಾತ್ಕಾಲಿಕವಾದ "ನ್ಯಾಯತೀರ್ಪಿನ ಬರೋಣಗಳು" ಒಂದೇ ಪರಾಕಾಷ್ಠತೆಯುಳ್ಳ ಎರಡನೆಯ ಬರೋಣದ ಕಡೆಗೆ ಬೆರಳು ಮಾಡುತ್ತವೆ, ಆಗ ಕೊನೆಗೂ ಸಕಲ ಮನುಷ್ಯರು ದೇವರ ಸಿಂಹಾಸನದ ಮುಂದೆ ನಿಂತುಕೊಳ್ಳುವರು ಮತ್ತು ನ್ಯಾಯತೀರಿಸಲ್ಪಡುವರು-ಆ ಸಮಾಪ್ತಿಗೊಳ್ಳುವ ಘಟನೆಯಲ್ಲಿ ಸಕಲ ತಪ್ಪುಗಳು ಸರಿಪಡಿಸಲ್ಪಡುವವು. ತಾತ್ಕಾಲಿಕವಾದ ನ್ಯಾಯತೀರ್ಪಿನ ಬರೋಣಗಳನ್ನು ಹೊರತು ಪಡಿಸಿದರೆ ಯಾವದೇ ಎರಡನೆಯ ಬರೋಣವು ಇರುವದಿಲ್ಲ ಎಂದು ಕೆಲವರು ವಾದಿಸುತ್ತಾರೆ, ಆದರೆ ಇದು ಎರಡನೆಯ ಬರೋಣದ ಕುರಿತಾಗಿರುವ ಹೊಸ ಒಡಂಬಡಿಕೆಯ

ಬೋಧನೆಗೆ ತದ್ವಿರುದ್ಧವಾಗಿರುತ್ತದೆ. ಉದಾಹರಣೆಗೆ, ನಾವು "ಆತನು ಬರುವ ತನಕ" ಕರ್ತನ ಭೋಜನದಲ್ಲಿ ಪಾಲುಗಾರರಾಗಬೇಕಾಗಿರುತ್ತದೆ (1 ಕೊರಿಂಥ 11:26). ಎರಡನೆಯ ಬರೋಣವು ಈಗಾಗಲೇ ಸಂಭವಿಸಿರುವದಾದರೆ, ನಾವು ಇನ್ನು ಮೇಲೆ ಕರ್ತನ ಭೋಜನದಲ್ಲಿ ಪಾಲುಗಾರರಾಗಬಾರದು. ಈ ಪವಿತ್ರ ಸ್ಮರಣೆಯನ್ನು ನಾವು ತ್ಯಜಿಸಿ ಬಿಡಬೇಕೆಂದು ಬೋಧಿಸುವ ಧೈರ್ಯವನ್ನು ನೀವು ಮಾಡುವಿರೋ?

ಕ್ರಿಸ್ತನು ಹಿಂದಿರುಗಿ ಬರುವನು ಎಂಬುದಕ್ಕಿಂತಲೂ ಬೇರೆ ಇನ್ನಾವದೂ ಆದಿ ಕ್ರೈಸ್ತರಿಗೆ ಹೆಚ್ಚು ಆದರಣೆಯನ್ನು ಉಂಟು ಮಾಡಲಿಲ್ಲ. ಯೇಸು ಬರುತ್ತಿದ್ದಾನೆಂದು ಘೋಷಿಸಿದ ವೇಳೆ, ಆತನು **ಹೌದು, ಹಾಗೆಯೇ ಆಗುವದು. ಆಮೆನ್** ಎಂದು ಹೇಳಿದನು. ಅಕ್ಷರಶಃ ಆತನು ಹೇಳಿದ್ದೇನೆಂದರೆ, "ಆಮೆನ್, ಮತ್ತು ಆಮೆನ್!" ಯೋಹಾನನು ಮೊದಲು ಗ್ರೀಕ್ ರೂಪದ ದೃಢೀಕರಣವನ್ನು (ναί, *nai*) ಬಳಸಿದನು ಮತ್ತು ನಂತರ ಇಬ್ರಿಯ ರೂಪದ (ἀμήν, *amēn*) ದೃಢೀಕರಣವನ್ನು ಬಳಸಿದನು. (3:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.) ಸಭೆಯವರೆಲ್ಲರೂ ಹೇಳಲಿ, "ಆಮೆನ್!" (ನೋಡಿರಿ ನೆಹಮೀಯ 5:13; KJV).

## ಕರ್ತನು ಮಧ್ಯದಲ್ಲಿ ಮಾತಾಡುತ್ತಾನೆ (1:8)

**[8]ನಾನು ಆದಿಯೂ ಅಂತವೂ ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವವನೂ ಸರ್ವಶಕ್ತನೂ ಆಗಿದ್ದೇನೆ ಎಂದು ದೇವರಾದ ಕರ್ತನು ಹೇಳುತ್ತಾನೆ.**

**ವಚನ 8.** ಯೋಹಾನನ ಉಪದೇಶದ ಮಧ್ಯದಲ್ಲಿ ಕರ್ತನು ಪ್ರವೇಶಿಸಿ ಮಾತಾಡುತ್ತಾನೆ. **ಆದಿಯೂ ಅಂತವೂ** (ಅಲ್ಫಾವೂ ಓಮೆಗವೂ) ಎಂಬುವುಗಳು ಗ್ರೀಕ್ ಅಕ್ಷರಮಾಲೆಯಲ್ಲಿನ ಪ್ರಥಮ ಮತ್ತು ಕಡೇ ಪದಗಳಾಗಿವೆ. ನಾವು ಹೇಳುವದಾದರೆ ಹೀಗೆ ಹೇಳುವೆವು, "ನಾನು A ಮತ್ತು Z ಆಗಿದ್ದೇನೆ" ಎಂಬದೆ. ದೇವರು ಆರಂಭವೂ ಅಂತ್ಯವೂ, ಮೊದಲನೆಯವನು ಮತ್ತು ಕಡೆಯವನು ಆಗಿದ್ದಾನೆ. **ಇದ್ದವನೂ ಇರುವವನೂ ಬರಲಿರುವವನೂ** ಎಂಬ ಪದಗುಚ್ಛವು 4ನೇ ವಚನದಲ್ಲಿ ನಿತ್ಯನಾದ ದೇವರನ್ನು ಬಣ್ಣಿಸುವದಕ್ಕೆ ಬಳಸಿದ ಪದಗುಚ್ಛವೇ ಆಗಿದೆ. **ಸರ್ವಶಕ್ತ** ಎಂಬ ಪದಗಳು ದೇವರ ಶಕ್ತಿಯ ಬಗ್ಗೆ ಮಾತಾಡುತ್ತವೆ ಹಾಗೂ ಕೈಸರನಲ್ಲ, ಆದರೆ ದೇವರೇ "ಎಲ್ಲರ ಮೇಲೆ ಸರ್ವಶಕ್ತ ಕರ್ತನಾಗಿದ್ದಾನೆ" (NEB) ಎಂಬುದನ್ನು ಸಾರುತ್ತವೆ.

ಮಾತಾಡಿದಾತನು ತಂದೆಯಾದ ದೇವರೋ ಅಥವಾ ಮಗನಾದ ದೇವರೋ ಎಂಬ ವಿಷಯಷಲ್ಲಿ ವ್ಯಾಖ್ಯಾನಕಾರರೊಳಗೆ ಭಿನ್ನಾಭಿಪ್ರಾಯವಿರುತ್ತದೆ. ತಂದೆಯು ಈ ಮುಂಚೆ "ಇರುವಾತನೂ ಇದ್ದವನೂ ಬರಲಿರುವವನೂ" ಎಂಬದಾಗಿ ವರ್ಣಿಸಲ್ಪಟ್ಟಿರುತ್ತಾನೆಂಬ ವಾಸ್ತವಾಂಶವು ತಂದೆಯೇ ಮಾತಾಡಿದನು ಎಂಬ ಅಭಿಪ್ರಾಯದ ಪರವಾಗಿ ಇರುತ್ತದೆ. ಯೇಸುವು ಅನಂತರದಲ್ಲಿ "ನಾನು ಆದಿಯೂ ಅಂತವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ" (22:13; ನೋಡಿರಿ 1:17) ಎಂದು ಘೋಷಿಸಿಕೊಂಡನು ಎಂಬ ವಾಸ್ತವಾಂಶವು ಮಗನು ಮಾತಾಡಿದನು ಎಂಬ ಅಭಿಪ್ರಾಯದ ಪರವಾಗಿ ಇರುತ್ತದೆ. ಅಲ್ಲದೆ, ಈ ವಚನದ ಹಿಂದಿನ ಹಾಗೂ ಮುಂದಿನ ವಚನಗಳಲ್ಲಿ ಯೇಸುವು ಮಾತಾಡುತ್ತಿದ್ದಾನೆಂಬ ವಾಸ್ತವಾಂಶವು 8ನೇ ವಚನದಲ್ಲಿ ಮಾತಾಡಿದವನು ಯೇಸುವೇ ಎಂಬ ಅಭಿಪ್ರಾಯದ ಪರವಾಗಿ ಇರುತ್ತದೆ. ಈ ವಿಷಯವು ಅಷ್ಟೇನೂ ಮಹತ್ವವಿಲ್ಲದ್ದು. ಇಬ್ಬರೂ ದೇವತ್ವದ ಭಾಗವಾಗಿದ್ದಾರೆ (ನೋಡಿರಿ ಕೊಲೊಸ್ಸೆ 2:9). ಒಬ್ಬನು ಏನು ಮಾಡುತ್ತಾನೋ, ಅದನ್ನೆ ಮತ್ತೊಬ್ಬನು ಮಾಡುವನೆಂದು ಹೇಳಲಾಗುತ್ತದೆ. ಯಾವ ರೀತಿಯಲ್ಲಿದ್ದರೂ ಸರಿಯೇ,

8ನೇ ವಚನವು ಕರ್ತನ ವೈಯಕ್ತಿಕ ಅಧಿಕಾರದ ಮುದ್ರೆಯ ಉದ್ದೇಶವನ್ನು ಹೊಂದಿದೆ. ಅದೊಂದು ರೀತಿಯಲ್ಲಿ ಆತನು ಹೀಗೆ ಹೇಳುತ್ತಿರುವಂತಿರುತ್ತದೆ: "ಮಾಡಲ್ಪಟ್ಟಿರುವ ವಾಗ್ದಾನಗಳ ಮೇಲೆ ನಿಮ್ಮ ಜೀವಿತವನ್ನು ಪಣಕ್ಕೀಡಬಹುದು, ಯಾಕೆಂದರೆ ನಾನೇ ಅವುಗಳನ್ನು ನುಡಿದಿದ್ದೇನೆ." ಆ ರೀತಿಯಾಗಿ ಕರ್ತನು ಏಕಾಏಕಿಯಾಗಿ ಮಧ್ಯದಲ್ಲಿ ವೈಯಕ್ತಿಕವಾದ ವಂದನೆಗಳನ್ನು ಸೇರ್ಪಡೆಗೊಳಿಸುವದು ಅಪರೂಪವಾಗಿತ್ತು, ಆದರೆ ಕ್ರೈಸ್ತರು ಅನುಭವಿಸುತ್ತಿದ್ದ ಹಿಂಸೆಯೂ ಅಪರೂಪದ್ದೇ ಆಗಿತ್ತು. ಯೋಹಾನನ ದಿನದ ಕ್ರೈಸ್ತರು "ನಾನೇ ವೈಯಕ್ತಿಕವಾಗಿ ಅಧಿಕಾರವನ್ನು ವಹಿಸಿಕೊಳ್ಳುತ್ತಿದ್ದೇನೆ" ಎಂದು ದೇವರು ಘೋಷಿಸುವದನ್ನು ಕೇಳಿಸಿಕೊಳ್ಳುವ ಅಗತ್ಯವನ್ನು ಹೊಂದಿದ್ದರು.

## ಯೋಹಾನನು ಕೇಳಿಸಿಕೊಂಡದ್ದು (1:9-11)

**9ನಿಮ್ಮ ಸಹೋದರನೂ ಯೇಸುವಿನ ನಿಮಿತ್ತ ಹಿಂಸೆಯಲ್ಲಿಯೂ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ ನಿಮ್ಮೊಂದಿಗೆ ಪಾಲುಗಾರನೂ ಆಗಿರುವ ಯೋಹಾನನೆಂಬ ನಾನು ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ ಪತ್ಮೊಸ್ ದ್ವೀಪದಲ್ಲಿದ್ದೆನು.**
**10ನಾನು ಕರ್ತನ ದಿನದಲ್ಲಿ ದೇವರಾತ್ಮವಶನಾಗಿ ನನ್ನ ಹಿಂದುಗಡೆ ತುತೂರಿಯ ಶಬ್ದದಂತಿರುವ ಮಹಾ ಶಬ್ದವನ್ನು ಕೇಳಿದೆನು. 11ಅದು – ನೀನು ನೋಡುವದನ್ನು ಪುಸ್ತಕದಲ್ಲಿ ಬರೆದು ಎಫೆಸ, ಸ್ಮುರ್ನ, ಪೆರ್ಗಮ, ಥುವತೈರ, ಸಾರ್ದಿಸ್, ಫಿಲದೆಲ್ಫಿಯ, ಲವೊದಿಕೀಯ ಎಂಬೀ ಪಟ್ಟಣಗಳ ಸಭೆಗಳಿಗೆ ಕಳುಹಿಸಬೇಕೆಂದು ನುಡಿಯಿತು.**

**ವಚನ 9.** ಯೋಹಾನನು **ನಿಮ್ಮ ಸಹೋದರನೂ . . . ಆಗಿರುವ ಯೋಹಾನನೆಂಬ ನಾನು** ಎಂದು ಆರಂಭಗೊಳಿಸುತ್ತಾನೆ. ಆತನು ತನ್ನ ಅಪೊಸ್ತಲತ್ವ ಅಥವಾ ಅಧಿಕಾರದ ಕುರಿತು ತನ್ನ ವಾಚಕರಿಗೆ ಜ್ಞಾಪಕಗೊಳಿಸಲಿಲ್ಲ; ಆತನು ಕೇವಲ ತನ್ನನ್ನು ಅವರ ಸಹೋದರನೆಂದು ಪರಿಚಯ ಮಾಡಿಕೊಂಡನು. ಅಲ್ಲದೆ ಆತನು ತನ್ನನ್ನು **ಯೇಸುವಿನ ನಿಮಿತ್ತ ಹಿಂಸೆಯಲ್ಲಿಯೂ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ ನಿಮ್ಮೊಂದಿಗೆ ಪಾಲುಗಾರನೂ** ಎಂಬದಾಗಿ ಸಹ ತನ್ನನ್ನು ಗುರುತಿಸಿಕೊಳ್ಳುತ್ತಾನೆ. **ನಿಮ್ಮೊಂದಿಗೆ ಪಾಲುಗಾರನು** ಎಂಬುದು συγκοινωνός (*sunkoinōnos*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದೆ, ಅದರರ್ಥವು "ಜೊತೆಗೆ ಹಂಚಿಕೊ" ಅಥವಾ "ಒಂದೇ ಸ್ಥಿತಿಯಲ್ಲಿರುವ" ಎಂದಾಗಿರುತ್ತದೆ. ಯೋಹಾನನು ತನ್ನ ವಾಚಕರ ಸಂಗಡ ಮೂರು ರೀತಿಗಳಲ್ಲಿ ಜೊತೆಯ ಪಾಲುಗಾರನಾಗಿದ್ದನು: ಹಿಂಸೆಯಲ್ಲಿ, ರಾಜ್ಯದಲ್ಲಿ, ಮತ್ತು ತಾಳ್ಮೆಯಲ್ಲಿ. ಈ "ಪ್ರಕಟನೆ ಪುಸ್ತಕದಲ್ಲಿರುವ ಮೂರು ಪ್ರಧಾನ ಚರ್ಚೆಯಾಂಶಗಳು"[10] ಪ್ರಥಮ ಶತಮಾನದ ಕ್ರೈಸ್ತರ ಜೀವಿತಗಳಿಂದ ಬೇರ್ಪಡಿಸಲಾಗದಂಥವುಗಳಾಗಿದ್ದವು:

**ಹಿಂಸೆ** (ಸಂಕಷ್ಟ) ಎಂಬುದು ಕ್ರೈಸ್ತರು ಅನುಭವಿಸುತ್ತಿದ್ದ ಬಾಧೆಯನ್ನು ಸೂಚಿಸುತ್ತದೆ. ಗ್ರೀಕ್ ಪದ θλῖψις (*thlipsis*) ಎಂಬುದರಿಂದ "ಹಿಂಸೆ" ಎಂಬುದು ಅನುವಾದಿಸಲ್ಪಟ್ಟಿದ್ದು, ಮೂಲತಃ ಅದರರ್ಥವು "ಒತ್ತಡ" ಎಂದಾಗಿತ್ತು. ಹೇಗೂ, ಹೊಸ ಒಡಂಬಡಿಕೆಯಲ್ಲಿ, ಅದು ಘಟನೆಗಳ ಒತ್ತಡವೇ ಹಿಂಸೆ ಎಂಬದಾಗಿ ಬಣ್ಣಿಸುವದಾಗಿ ಮಾರ್ಪಟ್ಟಿತು.[11]

ಕ್ರೈಸ್ತರು **ರಾಜ್ಯದಲ್ಲಿ** ಇರುವವರಾಗಿದ್ದ ಕಾರಣದಿಂದ ಹಿಂಸಿಸಲ್ಪಡುತ್ತಿದ್ದರು. ದಾನಿಯೇಲ ಪ್ರವಾದನೆಯಲ್ಲಿ, ಮನುಷ್ಯಕುಮಾರನಂತಿರುವವನಿಗೆ ರಾಜ್ಯವು ಕೊಡಲ್ಪಡುತ್ತದೆ. ಯೇಸು ದೇವರ ಬಳಿಗೆ ಆರೋಹಣಗೊಂಡು ಆತನ ಬಲಗಡೆಯಲ್ಲಿ ಕುಳಿತುಕೊಂಡಾಗ ಈ ಪ್ರವಾದನೆಯು ನೆರವೇರಿತು (ಅಪೊಸ್ತಲರ ಕೃತ್ಯಗಳು 2:32–36). ಬಳಿಕ ಯೇಸುವು ತನ್ನ

ರಾಜ್ಯವನ್ನು ಭೂಮಿಯ ಮೇಲೆ ಉದ್ಘಾಟಿಸುವದಕ್ಕಾಗಿ ಪವಿತ್ರಾತ್ಮನನ್ನು ಕಳುಹಿಸಿ ಕೊಟ್ಟನು (ಅಪೊಸ್ತಲರ ಕೃತ್ಯಗಳು 1:6-8; 2:1-4). ಆ ರಾಜ್ಯವು ಸಭೆ ಎಂದು ಪರಿಚಿತಗೊಂಡಿತ್ತು (ಮತ್ತಾಯ 16:18, 19). ಇಂದು ಕೆಲವರು ರಾಜ್ಯವು ಇನ್ನೂ ಬಂದಿರುವದಿಲ್ಲ ಎಂದು ಹೇಳಿಕೊಳ್ಳುತ್ತಾರೆ, ಆದರೆ ಯೋಹಾನ ಮತ್ತು ಆತನ ಸಹೋದರರು ಒಟ್ಟಾಗಿ ಈ ರಾಜ್ಯದಲ್ಲಿ ಪಾಲುಗಾರರಾಗಿದ್ದರು (ಪ್ರಕಟನೆ 1:6, 9). ಅವರಿಗಾದರೋ ಅದು ವರ್ತಮಾನ ಕಾಲದ ವಾಸ್ತವಿಕತೆಯಾಗಿತ್ತೇ, ಹೊರತು ಭವಿಷ್ಯದಲ್ಲಿನ ಒಂದು ನಿರೀಕ್ಷೆಯಾಗಿರಲಿಲ್ಲ. ಅವರ ನಿಷ್ಠಾವಂತಿಕೆಯು ಅರಸನಾದ ಯೇಸುವಿಗೆ ಆಗಿತ್ತೇ, ಹೊರೆತು ಚಕ್ರವರ್ತಿಯಾದ Domitianನಿಗೆ ಅಲ್ಲವಾದ್ದರಿಂದ, ಹಿಂಸೆಯು ಸ್ವಾಭಾವಿಕವಾದ ಫಲಿತವಾಗಿತ್ತು (ಯೋಹಾನ 16:33; ಅಪೊಸ್ತಲರ ಕೃತ್ಯಗಳು 14:19).

ರಾಜ್ಯದಲ್ಲಿರುವವರಿಗೆ **ದೃಢನಿಷ್ಠೆಯ** (ತಾಳ್ಮೆಯ) ಅಗತ್ಯವಿತ್ತು-ತಮ್ಮ ಸಮಸ್ಯೆಗಳ ಹೊರತಾಗಿಯೂ ಅಚಲವಾಗಿರುವ ಸಾಮರ್ಥ್ಯ (14:12; ನೋಡಿರಿ ಮತ್ತಾಯ 24:13; 2 ತಿಮೊಥೆ 2:12). KJVಯಲ್ಲಿ "ತಾಳ್ಮೆ" ಎಂದಿರುತ್ತದೆ, ಅದು "ತಾಳ್ಮೆಯಿಂದ ಸಹಿಸಿಕೊಳ್ಳುವಿಕೆ" ಎಂಬ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ. ಅವರು "ಜೊತೆಯ ಪಾಲುಗಾರರು" ಎಂಬ ವಾಸ್ತವಾಂಶವು ಅವರಿಗೆ ದೃಢನಿಷ್ಠೆಯಿಂದಿರುವದಕ್ಕೆ ಸಹಾಯ ಮಾಡುವದಾಗಿತ್ತು; ಭಾರಗಳನ್ನು ಹಂಚಿಕೊಳ್ಳುವಾಗ ಅವುಗಳು ಹಗುರವಾಗುತ್ತವೆ. ಅವರು **ಯೇಸುವಿನಲ್ಲಿ** (ಯೇಸುವಿನ ನಿಮಿತ್ತ) ಇದ್ದರೆಂಬ ವಾಸ್ತವಾಂಶವು ಸಹ ಸಹಾಯ ಮಾಡುವದಾಗಿತ್ತು. ಕ್ರೈಸ್ತರು ಯೇಸುವಿನೊಂದಿಗೆ ಹೊಂದಿರುವ ವಿಶೇಷವಾದ ಸಂಬಂಧವನ್ನು ಸೂಚಿಸುವದಕ್ಕೆ "ಯೇಸುವಿನಲ್ಲಿ" ಎಂಬುದು ಹೊಸ ಒಡಂಬಡಿಕೆಯುದ್ದಕ್ಕೂ ಬಳಸಲ್ಪಟ್ಟಿರುವ ಪದವಾಗಿದೆ (ರೋಮಾ 16:3; 1 ಕೊರಿಂಥ 1:2). ಯೋಹಾನನ ವಾಚಕರು ಯೇಸುವಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು (ಗಲಾತ್ಯ 3:26-28), ಮತ್ತು ಆತನಲ್ಲಿ ಅವರು ಬಲವನ್ನು ಕಂಡುಕೊಳ್ಳಬಲ್ಲವರಾಗಿದ್ದರು.

ತಾನು ಬರೆಯಬೇಕೆಂದು ಆದೇಶವನ್ನು ಪಡೆದುಕೊಂಡ ವೇಳೆ *ದೈಹಿಕವಾಗಿ* ಎಲ್ಲಿದ್ದನು ಎಂಬುದನ್ನು ಯೋಹಾನನು ಹೇಳುತ್ತಾನೆ: **ನಾನು ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ ಪತ್ಮೊಸ್ ದ್ವೀಪದಲ್ಲಿದ್ದೆನು.** ಕೆಲವರು **ಇದ್ದೆನು** ಎಂದು ಯೋಹಾನನು ಬಳಸುವದು (ಭೂತಕಾಲ) ಆತನು ಈಗ ದ್ವೀಪದಲ್ಲಿರಲಿಲ್ಲ, ಆದರೆ ಪ್ರಕಟನೆ ಪುಸ್ತಕವನ್ನು ಬರೆಯುವ ವೇಳೆಗಾಗಲೇ ಆತನು ಎಫೆಸಕ್ಕೆ ಹಿಂದಿರುಗಿದ್ದನೆಂದು ಸಾಭಿತುಪಡಿಸುತ್ತದೆಂಬುದಾಗಿ ಕೆಲವರು ನಂಬುತ್ತಾರೆ. ಹಾಗಿದ್ದಿರಬಹುದು, ಆದರೆ "ಇದ್ದೆನು" ಎಂಬುದು ಅನುವಾದಿಸಲ್ಪಟ್ಟಿರುವ ಗ್ರೀಕ್ ಪದ γίνομαι (*ginomai*) ಎಂಬುದರ ಅಕ್ಷರಶಃ ಅರ್ಥವು "ಇರಬೇಕಾಗಿ ಬಂತು" ಎಂದಾಗಿರುತ್ತದೆ. ಯೋಹಾನನು ತಾನು ಹೇಗೆ ಪತ್ಮೊಸ್ ದ್ವೀಪದಲ್ಲಿ "ಇರಬೇಕಾಗಿ ಬಂತು" ಎಂಬುದನ್ನು ತನ್ನ ವಾಚಕರಿಗೆ ಹೇಳುತ್ತಿದ್ದಾನೆ. ಆತನು ಈಗಲೂ ಅಲ್ಲಿದ್ದನೋ ಅಥವಾ ಇಲ್ಲವೋ ಎಂಬುದರ ಕುರಿತು ಈ ವಾಕ್ಯಭಾಗವು ಏನನ್ನೂ ತಿಳಿಸುವದಿಲ್ಲ.

**ಪತ್ಮೊಸ್** "ಒಂದು ಏಕಾಂಗಿಯಾದ, ಗಾಳಿ-ಹೊಡೆದುಕೊಂಡ ಹೋಗಲ್ಪಟ್ಟ ದ್ವೀಪ"[12] ಆಗಿದ್ದು ರೋಮನ್ ಸೆರೆಮನೆಯಾಗಿ ಬಳಸಲ್ಪಡುತ್ತಿತ್ತು. ಯೋಹಾನನು ದೇವರ ವಾಕ್ಯವನ್ನು ಧೈರ್ಯದಿಂದ ಸಾರಿದ್ದರ ನಿಮಿತ್ತವಾಗಿ ಮತ್ತು ಯೇಸುವಿನ ಕುರಿತಾದ ತನ್ನ ಸಾಕ್ಷಿಯನ್ನು ನಿಗ್ರಹಿಸಿಕೊಳ್ಳಲು ನಿರಾಕರಿಸಿದ್ದರ ನಿಮಿತ್ತವಾಗಿ ಗಡಿಪಾರು ಮಾಡಲ್ಪಟ್ಟಿದ್ದನು. **ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ** ಎಂಬ ಪದಗುಚ್ಛದ ಅರ್ಥವು

ಯೋಹಾನನು ಅಲ್ಲಿಗೆ ಸಾರುವದಕ್ಕೆ ಅಥವಾ ಪ್ರಕಟನೆಯನ್ನು ಹೊಂದಿಕೊಳ್ಳುವದಕ್ಕಾಗಿ ಹೋದನು ಎಂದು ಸಹ ಆಗಬಲ್ಲದಾಗಿದೆ. ಹೇಗೂ, ಪ್ರಕಟನೆ ಪುಸ್ತಕದಲ್ಲಿ ಈ ಪದಗುಚ್ಛದ ಇತರ ಬಕೆಯು (6:9; 20:4) ಹಿಂಸೆಯ ಯೋಚನೆಗೆ ಸಂಬಂಧಿಸಿದ್ದಾಗಿದೆ. ಆತನ ಬಾಯನ್ನು ಮುಚ್ಚುವದಕ್ಕೋಸ್ಕರ ರೋಮನ್ ಸರ್ಕಾರವು ಆತನನ್ನು ಪತ್ಮೊಸ್ ದ್ವೀಪಕ್ಕೆ ಕಳುಹಿಸಿತ್ತು, ಆದರೆ ಕರ್ತನು ಅವನಿಗೆ ಶೀಘ್ರದಲ್ಲಿಯೇ ನವಚೈತನ್ಯದಿಂದ ಕೂಡಿದ ಸ್ವರವನ್ನು ಕೊಡುವದಕ್ಕಿದ್ದನು.

**ವಚನ 10.** ಬಳಿಕ ಯೋಹಾನನು ಹೆಚ್ಚು ಪ್ರಾಮುಖ್ಯವಾದ ವಾಸ್ತವಾಂಶವನ್ನು ಹಂಚಿಕೊಳ್ಳುತ್ತಾನೆ-ಬರೆಯಬೇಕೆಂದು ತನಗೆ ಹೇಳಲ್ಪಟ್ಟ ವೇಳೆಯಲ್ಲಿ ಆತನು ಆತ್ಮೀಕವಾಗಿ ಎಲ್ಲಿದ್ದನು ಎಂಬುದೆ: **ನಾನು ಕರ್ತನ ದಿನದಲ್ಲಿ ದೇವರಾತ್ಮವಶನಾಗಿ** ಇದ್ದೆನು. "ಕರ್ತನ ದಿನ" ಎಂಬ ಪದವನ್ನು "ಕರ್ತನ [ನ್ಯಾಯತೀರಿಸುವ ದಿನ] ದಿನ" ಎಂದು ಗೊಂದಲ ಮಾಡಿಕೊಳ್ಳಬಾರದು, ಇದು ದೇವರ ನ್ಯಾಯತೀರ್ಪನ್ನು, ಮತ್ತು ಅನೇಕ ಸಾರಿ ಕಡೇ ದಿನವನ್ನು ಸೂಚಿಸುವದಕ್ಕೆ ಬೈಬಲನುದ್ದಕ್ಕೂ ಬಳಸಲ್ಪಟ್ಟಿರುತ್ತದೆ (ಯೆಶಾಯ 2:12; ಯೋವೇ 2:31). **ಕರ್ತನ** ಎಂಬುದು ಗ್ರೀಕ್ ಭಾಷೆಯ κυριακός (*kuriakos*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, "ಕರ್ತನಿಗೆ ಸ್ವಂತವಾಗಿರುವ"[13] ಒಂದನ್ನು ಸೂಚಿಸುವದಕ್ಕಾಗಿ ಬಳಸುವ ವಿಶೇಷ ರೀತಿಯಾಗಿರುತ್ತದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಕೇವಲ ಎರಡು ಸಾರಿ ಮಾತ್ರವೇ ಕಂಡು ಬರುತ್ತದೆ: ಇಲ್ಲಿ ಮತ್ತು "ಕರ್ತನ ಭೋಜನ"ದ ಕುರಿತು ಮಾತಾಡುವ 1 ಕೊರಿಂಥ 11:20ರಲ್ಲಿ ಸಿಕ್ಕುತ್ತದೆ. ಸಭೆಯ ಆರಂಭಿಕ ದಿನಗಳಿಂದಲೂ, "ಕರ್ತನ ದಿನ" ಎಂಬ ಪದವು ವಾರದ ಮೊದಲ ದಿನನ್ನು ಮತ್ತು ವಾರದ ಮೊದಲನೆಯ ದಿನವನ್ನು ಮಾತ್ರವೇ ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ-ಅದು ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ದಿನವಾಗಿದೆ (ಮತ್ತಾಯ 28:1; ಲೂಕ 24:1).[14] ಇಂದು, ನಾವು *ಕರ್ತನ* ದಿನದಂದು *ಕರ್ತನ* ಭೋಜನದಲ್ಲಿ ಪಾಲುಗಾರರಾಗುತ್ತೇವೆ (ಅಪೊಸ್ತಲರ ಕೃತ್ಯಗಳು 20:7).

ಸೆವೆಂತ್-ಡೇ ಅಡ್ವೆಂಟಿಸ್ಟ್‌ರು "ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ" ಎಂದು ಓದುವಂತೆ ಮಾರ್ಕ 2:28ನ್ನು ತಪ್ಪಾಗಿ ಉಲ್ಲೇಖ ಮಾಡುವ ಮೂಲಕ "ಕರ್ತನ ದಿನ" ಎಂಬುದು ಏಳನೆಯ ದಿನವನ್ನು ಸೂಚಿಸುತ್ತದೆಂದು ಸಾಭಿತುಪಡಿಸಲು ಪ್ರಯತ್ನಿಸುತ್ತಾರೆ. ವಾಸ್ತವದಲ್ಲಿ, ಆ ವಾಕ್ಯಭಾಗವು ಸಬ್ಬತ್ ದಿನಕ್ಕೂ *ಸೇರಿದಂತೆ ಪ್ರತಿಯೊಂದು* ದಿನಕ್ಕೆ ಸಹ ಯೇಸು ಒಡೆಯನಾಗಿದ್ದಾನೆಂಬುದನ್ನು ಒತ್ತಿ ಹೇಳುವದಾಗಿರುತ್ತದೆ. ಪ್ರಕಟನೆ 1:10ರಲ್ಲಿರುವ "ಕರ್ತನ ದಿನ" ಎಂಬುದು ಆಂಗ್ಲ ಹಾಗೂ ಗ್ರೀಕ್ ವಾಕ್ಯಗಳೆರಡರಲ್ಲೂ ಮಾರ್ಕ 2:28ರಲ್ಲಿ ಬಳಸಲಾಗಿರುವ ಪದಕ್ಕಿಂತ ವ್ಯತ್ಯಾಸವಾಗಿರುತ್ತದೆ.

**ನಾನು ದೇವರಾತ್ಮವಶನಾಗಿ** ಎಂಬ ಪದಗುಚ್ಛವು ಪ್ರಕಟನೆ 4:2ರಲ್ಲಿ ಸಹ ಸಿಕ್ಕುತ್ತದೆ. ಎರಡೂ ಸ್ಥಳಗಳಲ್ಲಿ, ಒಂದು ಅಕ್ಷರಶಃ ಅನುವಾದವು "ಪವಿತ್ರಾತ್ಮನಲ್ಲಿ ಇರುವವನಾದೆನು" ಎಂದಾಗಿರುತ್ತದೆ. 4:2ರಲ್ಲಿ, "ಆತ್ಮವಶದಲ್ಲಿ" ಇರುವವನಾಗಿ ಎಂಬುದು ಯೋಹಾನನ ಆತ್ಮವು ಪವಿತ್ರಾತ್ಮನ ಸ್ವರವನ್ನು ಆಲಿಸುವಂಥದ್ದಾಯಿತು ಎಂಬುದನ್ನು ಸೂಚಿಸುತ್ತದೆ, ಮತ್ತು ಬಹುಶಃ ಈ ವಚನದಲ್ಲಿ ಸಹ ಅದೇ ಅರ್ಥವಾಗಿರಬಹುದಾಗಿದೆ (ನೋಡಿರಿ ಮತ್ತಾಯ 22:43). ಬೇರೆ ಅರ್ಥಗಳಿರುವ ಸಾಧ್ಯತೆಯು ಇರುತ್ತದೆ. ಮೂಲ ಗ್ರೀಕ್ ವಾಕ್ಯದಲ್ಲಿ, ಆಂಗ್ಲದ ದೊಡ್ಡಕ್ಷರ ಅಥವಾ ಸಣ್ಣಕ್ಷರಗಳ ನಡುವೆ ಯಾವದೇ ಭೇದವನ್ನು ಮಾಡಲಾಗಿರುವದಿಲ್ಲ. ಅಷ್ಟುಮಾತ್ರವಲ್ಲದೆ, ಮೂಲ ವಾಕ್ಯದಲ್ಲಿ, ಪದಗುಚ್ಛವು "ಆತ್ಮ" (Spirit) ಎಂಬುದರ ಮುಂಚೆ ನಿರ್ದಿಷ್ಟ ಗುಣವಾಚಿಯನ್ನು ("the") ಹೊಂದಿರುವದಿಲ್ಲ. ಹೀಗೆ ಆ ಪದಗುಚ್ಛವನ್ನು ಕೇವಲ

"ಆತ್ಮದಲ್ಲಿ" ಎಂದಷ್ಟೆ ಅನುವಾದಿಸಬಹುದಾಗಿದೆ, ಮತ್ತು ಯೋಹಾನನ ಮನಃಸ್ಥಿತಿಯ ಕುರಿತು ಸೂಚಿಸುತ್ತಿರಬಹುದಾಗಿದೆ. ಯೋಹಾನ 4:24ನೇ ವಚನವು ನಮಗೆ "ಆತ್ಮದಲ್ಲಿ" ಆರಾಧಿಸಿರಿ ಎಂದು ಹೇಳುತ್ತದೆ ಮತ್ತು ಅದೇ ಗ್ರೀಕ್ ಪದಗಳನ್ನು ಬಳಸುತ್ತದೆ. ಹೀಗೆ "ಆತ್ಮದಲ್ಲಿ" ಎಂಬುದು ಕೇವಲ ಯೋಹಾನನು ಕರ್ತನ ದಿನದಂದು *ಆರಾಧನೆಯನ್ನು ಮಾಡುತ್ತಿದ್ದನು* ಎಂದಷ್ಟೆ ಅರ್ಥವನ್ನು ಕೊಡಬಹುದಾಗಿದೆ. "ಆತ್ಮದಲ್ಲಿ" ಎಂಬುದರ ಅರ್ಥವು ಏನೇ ಆಗಿದ್ದರೂ ಸರಿಯೇ, ಯೋಹಾನನು ತಾನು ಶೀಘ್ರದಲ್ಲಿಯೇ ಪಡೆದುಕೊಳ್ಳಲಿದ್ದ ಪ್ರಕಟನೆಯನ್ನು *ಗ್ರಹಿಸಲು ಇಷ್ಟವುಳ್ಳವನಾಗಿ* ಇದ್ದನು ಎಂಬ ಯೋಚನೆಯು ಇಲ್ಲಿರುತ್ತದೆ. "ಕರ್ತನ ದಿನ"ದಂದು ಯೋಹಾನನ ಪರಿಸ್ಥಿತಿಯಲ್ಲಿನ ಯಾವದೋ ಒಂದು ಆತನು ಕರ್ತನ ಪ್ರಕಟನೆಯನ್ನು ಗ್ರಹಿಸಿಕೊಳ್ಳುವವನಾಗುವಂತೆ ಮಾಡಿತ್ತು. ಅದೇ ರೀತಿಯಲ್ಲಿಯೇ, ಪೇತ್ರನು ಪ್ರಾರ್ಥನೆಯಲ್ಲಿ ಕಾಲವನ್ನು ಕಳೆದದ್ದರಿಂದ ತಾನು ಹೊಂದಿದ ದರ್ಶನವನ್ನು ಗ್ರಹಿಸಿಕೊಳ್ಳುವಂತೆ ಮಾಡಿತ್ತು (ಅಪೊಸ್ತಲರ ಕೃತ್ಯಗಳು 10:9, 10). ಕರ್ತನ ದಿನವು ಆರಾಧನೆಯ ದಿನವಾಗಿರುವದರಿಂದ, ಆ ಯಾವದೋ ಒಂದು ಬಹುಶಃ ಯೋಹಾನನ ಆರಾಧನೆಯ ಅನುಭವ ಆಗಿರಬಹುದಾಗಿದೆ.

ಬಹುಶಃ ದೃಶ್ಯವು ಹೀಗೆ ತೆರೆದುಕೊಂಡಿರಬಹುದಾಗಿದೆ: ಯೋಹಾನನು ಕಳೆದ ಅರವತ್ತು ವರ್ಷಗಳಿಂದಲೂ ಮಾಡಿಕೊಂಡು ಬಂದಿದ್ದ ಪ್ರಕಾರವಾಗಿಯೇ ವಾರದ ಮೊದಲ ದಿನದ ಬೆಳಗಿನ ಜಾವ ಬೇಗನೆ ಎದ್ದಿರಬಹುದು. ಸೂರ್ಯನು ಉದಯಿಸುವ ಹೊತ್ತಿಗೆ, ಬಂಡೆಯ ಸಾಲಿನ ಮೇಲೆ ಕುಳಿತುಕೊಂಡು ಪೂರ್ವ ದಿಕ್ಕಿನ ಕಡೆಗಿನ ನೀಲಿ ನೀರನ್ನು ದೃಷ್ಟಿಸುತ್ತಾ ಇದ್ದನು. ಕೆಳಗಿನ ಬಂಡೆಗಳಿಗೆ ನಿರಂತರವಾಗಿ ನೀರಿನ ಅಲೆಗಳು ಬಡಿಯುತ್ತಲೇ ಇದ್ದದರಿಂದ ನೀರು ಆತನ ಮುಖಕ್ಕೆ ಸಿಂಪಡಿಸಲ್ಪಟ್ಟಿತು, ಆದರೆ ಆತನ ಯೋಚನೆಗಳೆಲ್ಲಾ ಸಮುದ್ರದ ಆಚೆಯ ಕಡೆಗೆ ನೆಟ್ಟಿದ್ದವು, ಅಲ್ಲಿ ಸಹೋದರರು ಆರಾಧನೆಗಾಗಿ ಕೂಡಿ ಬಂದವರಾಗಿರುತ್ತಿದ್ದರು. ತಾನು ತನ್ನ ಪ್ರೀತಿಪಾತ್ರರ ಮುಖಗಳನ್ನು ಕಣ್ಣುಗಳ ಮುಂದೆ ತಂದುಕೊಂಡಾಗ ಆತನ ಕಣ್ಣುಗಳಲ್ಲಿ ನೀರು ಬಂದಿತು. ಅವರು ಪ್ರಾರ್ಥಿಸುವದನ್ನು, ರೊಟ್ಟಿ ಮುರಿಯುವದನ್ನು ಮತ್ತು ಹಾಡುವದನ್ನು ಕಾಣಬಲ್ಲವನಾಗಿದ್ದನು. ಅಲ್ಲಿ, ಆ ಏಕಾಂಗಿಯಾದ ಕಲ್ಲಿನ ಮೇಲೆ ಕುಳಿತವನಾಗಿ, ತನ್ನ ಸ್ವಂತ ಸ್ವರವನ್ನೆತ್ತಿದ್ದನು, ಅದು ವಯಸ್ಸಾದದ್ದು ಮತ್ತು ಬಿರುಕು ಬಿಟ್ಟದ್ದು ಆಗಿತ್ತಾದರೂ ಭಾವನಾತ್ಮಕತೆಯಿಂದ ತುಂಬಿತ್ತು: "ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್" (ವ. 6).

ಏಕಾಏಕಿಯಾಗಿ, ಆತನ ಪಾದಗಳ ಕೆಳಗಿನ ಭೂಮಿಯು ಕುಸಿಯುತ್ತಿರುವಂತೆ ಅನ್ನಿಸುತ್ತದೆ. ಬಾಣಂಚು ಹಿಂದಕ್ಕೆ ಜಾರಿತು. ಯೋಹಾನನ ಆತ್ಮವು ಕಾಲ ಹಾಗೂ ಸ್ಥಳದ ಸಂಕೋಲೆಗಳು ಕಳಚಲ್ಪಟ್ಟು ಸ್ವತಂತ್ರಗೊಂಡಿಂತೆ ತೋರಿತ್ತು. ಆತನು ತನ್ನ ಸುತ್ತಲಿನ ಶಾರೀರಿಕ ಜಗತ್ತಿನ ಸಂಪರ್ಕವನ್ನು ಕಳಕೊಂಡನು. ಆತನು "ಆತ್ಮದ ವಶದಲ್ಲಿದ್ದನು." ಆತನು *ಕಂಡನು*, ಆದರೆ ತನ್ನ ದೈಹಿಕ ಕಣ್ಣುಗಳಿಂದಲ್ಲ. ಆತನು *ಕೇಳಿಸಿಕೊಂಡನು*, ಆದರೆ ದೈಹಿಕ ಕಿವಿಗಳಿಂದಲ್ಲ. ಆತನು ನೇರವಾಗಿ, ಆತ್ಮೀಕವಾಗಿ ತನ್ನ ರಕ್ಷಕನ ಸಂಪರ್ಕದಲ್ಲಿದ್ದು.[15]

ಆಗ ಯೋಹಾನನು ಗಮನವು ತನ್ನ **ಹಿಂದುಗಡೆ ತುಥ = ತೂರಿಯ ಶಬ್ದದಂತಿರುವ,** ಒಂದು ಸ್ಪಷ್ಟವಾದ ಹಾಗೂ ಆಜ್ಞಾಪಿಸುವ **ಮಹಾಶಬ್ದ**ದಿಂದ ಸೆರೆ ಹಿಡಿಯಲ್ಪಟ್ಟಿತು. ಯೋಹಾನನು ಕೇಳಿಸಿಕೊಂಡಿದ್ದು ಒಂದು ತುತೂರಿಯ ಧ್ವನಿಯಲ್ಲ, ಆದರೆ ತುತೂರಿಯಂತೆ *ಧ್ವನಿಸಿದ* ಒಂದು ಶಬ್ದವನ್ನು ಕೇಳಿದನು. ಈ ". . . ದಂತಿರುವ" ಎಂಬ ಪದವು ಪ್ರಕಟನೆ ಪುಸ್ತಕದಲ್ಲೆಲ್ಲಾ ಹೆಣೆಯಲ್ಪಟ್ಟಿರುವ ಅನೇಕ ಹೋಲಿಕೆಗಳಲ್ಲಿ ಮೊದಲನೆಯದ್ದಾಗಿದೆ.

ತುತೂರಿಯ ಮೊಳಗುವಿಕೆಗಳು ದೀರ್ಘಕಾಲದಿಂದಲೂ ಗಮನವನ್ನು ಸೆಳೆಯುವದಕ್ಕೆ ಮತ್ತು ಪ್ರಾಮುಖ್ಯವಾದ ಕಾರ್ಯಕ್ರಮಗಳನ್ನು ಪರಿಚಯಿಸುವದಕ್ಕಾಗಿ ಬಳಸಲ್ಪಟ್ಟಿರುತ್ತವೆ. (ಹಳೆಯ ಒಡಂಬಡಿಕೆಯಲ್ಲಿ ತುತೂರಿಗಳು ಬಳಸಲ್ಪಟ್ಟಿರುವ ಕೆಲವು ಉದಾಹರಣೆಗಳಿಗಾಗಿ, ಅರಣ್ಯಕಾಂಡ 10ನ್ನು ನೋಡಿರಿ.)

**ವಚನ 11.** ಆ ಶಬ್ದವು ಹೀಗೆ ಹೇಳಿತು, **ನೀನು ನೋಡುವದನ್ನು ಪುಸ್ತಕದಲ್ಲಿ ಬರೆದು. ಪುಸ್ತಕ** ಎಂಬ ಪದವು ಗ್ರೀಕ್ ಭಾಷೆಯ βιβλίον (*biblion*) ಎಂಬ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ, ಆ ಪದದಿಂದಲೇ "ಬೈಬಲ್" ಎಂಬ ಪದವು ಬಂದಿರುತ್ತದೆ. NIV ತರ್ಜುಮೆಯು ಬಹಳ ನಿಖರವಾಗಿ "ಸುರುಳಿ" ಎಂದು ಅನುವಾದಿಸುತ್ತದೆ. ಪುಟಗಳನ್ನೊಳಗೊಂಡ ಪುಸ್ತಕಗಳು ಕ್ರಿ.ಶ. ಎರಡನೆಯ ಶತಮಾನದ ತನಕವೂ ಆವಿಷ್ಕಾರ ಮಾಡಿರಲಿಲ್ಲ.

ಈ ಮುಂಚೆ ಗಮನಿಸಿರುವ ಪ್ರಕಾರ, ಯೋಹಾನನು "ದೇವರ ವಾಕ್ಯಕ್ಕೋಸ್ಕರವೂ ಕ್ರಿಸ್ತನ ವಿಷಯವಾದ ಸಾಕ್ಷಿಗೋಸ್ಕರವೂ" ಪತ್ಮೊಸ್ ದ್ವೀಪದಲ್ಲಿದ್ದನು (1:9). ಯೋಹಾನನ ಸ್ಥಾನದಲ್ಲಿದ್ದರೆ ಕೆಲವರು ಹತಾಶೆಗೊಂಡಿರುತ್ತಿದ್ದರು-ತಾನು ಇನ್ನು ಬೋಧಿಸುವದಕ್ಕಾಗುವದಿಲ್ಲ ಎಂಬುದಕ್ಕಾಗಿ ಹತಾಶೆಗೊಳ್ಳುತ್ತಿದ್ದರು, ತಮ್ಮ ಜೊತೆಯ ಕ್ರೈಸ್ತರ ಸಂಗಡ ಇರುವದಕ್ಕೆ ಸಾಧ್ಯವಿಲ್ಲ ಎಂಬುದಕ್ಕಾಗಿ ಹತಾಶೆಗೊಳ್ಳುತ್ತಿದ್ದರು, ಸಂಕಷ್ಟಗಳಲ್ಲಿ ತಾವು ಬೇರೆಯವರನ್ನು ಸಂತೈಸುವದಕ್ಕೆ ಸಾಧ್ಯವಾಗಲಿಲ್ಲ ಎಂಬುದಕ್ಕಾಗಿ ಹತಾಶೆಗೊಳ್ಳುತ್ತಿದ್ದರು. ನಂತರ ಯೋಹಾನನು ಒಂದು ಶಬ್ದವನ್ನು ಕೇಳಿಸಿಕೊಂಡನು "ಮೂಲಭೂತವಾಗಿ ಹೀಗೆ ಹೇಳುತ್ತಿದ್ದ ಸ್ವರ, 'ನೀನು [ನಿನ್ನ] ಜನರ ಸಂಗಡ ಇರುವದಕ್ಕೆ ಸಾಧ್ಯವಿಲ್ಲ ಆದರೆ ನೀನು ಅವರಿಗೊಂದು ಸಂದೇಶವನ್ನು ಕಳುಹಿಸಬಹುದು; ಅದು ನಾನು ನಿನಗೆ ಕೊಡುವ ಸಂದೇಶವಾಗಿದೆ.'"[16]

KJVಯು ಸಂದೇಶವನ್ನು ಈ ಮಾತುಗಳೊಂದಿಗೆ ಆರಂಭಿಸುತ್ತದೆ, "ನಾನೇ ಅಲ್ಫಾವೂ ಓಮೆಗವೂ ಮೊದಲನೆಯವನೂ ಕಡೆಯವನೂ ಆಗಿದ್ದೇನೆ," ಹೀಗೆ ಮಾತಾಡುವವನನ್ನು ಯೇಸು ಎಂಬುದಾಗಿ ಗುರುತಿಸುತ್ತದೆ (ನೋಡಿರಿ ವ. 17). ಈ ಮಾತುಗಳು ಆರಂಭಿಕ ಹಸ್ತಪ್ರತಿಗಳಲ್ಲಿರುವದಿಲ್ಲ ಮತ್ತು ಈ ಕಾರಣದಿಂದ NASB ಮತ್ತು ಹೆಚ್ಚು ಇತ್ತೀಚಿನ ತರ್ಜುಮೆಗಳಲ್ಲಿ ಕಂಡು ಬರುವದಿಲ್ಲ. ಹೇಗೂ, ಶಬ್ದವು ಬಹುಶಃ ಯೇಸುವಿನ ಶಬ್ದ *ಆಗಿತ್ತು*: ಯೋಹಾನನು ತಿರುಗಿ ನೋಡಿದಾಗ, ಆತನಿಗೆ ಕಂಡವನು ಯೇಸುವೇ ಆಗಿದ್ದನು (ವಚನಗಳು 12-16), ಮತ್ತು ಅದಾದ ಸ್ವಲ್ಪ ಹೊತ್ತಿನಲ್ಲಿ ಯೇಸುವು ಬರೆಯಬೇಕು ಎಂಬ ಆಜ್ಞೆಯನ್ನು ಪುನರಾವರ್ತಿಸುತ್ತಾನೆ (ವ. 19).

ಸಂದೇಶವನ್ನು ಬರೆದ ಬಳಿಕ, ಯೋಹಾನನು ಅದನ್ನು **ಎಫೆಸ, ಸ್ಮುರ್ನ, ಪೆರ್ಗಮ, ಥುವತೈರ, ಸಾರ್ದಿಸ್, ಫಿಲದೆಲ್ಫಿಯ, ಲವೊದಿಕೀಯ ಎಂಬೀ ಏಳು ಪಟ್ಟಣಗಳ ಸಭೆಗಳಿಗೆ** ಕಳುಹಿಸಲಿದ್ದನು. ಈ ಹೆಸರುಗಳ ಪಟ್ಟಿಯು ಮನಸ್ಸಿಗೆ ತೋಚಿದಂತೆ ಗುಂಪು ಮಾಡಿದ್ದಲ್ಲ. **ಎಫೆಸ** ಪಟ್ಟಣದಿಂದ ಆರಂಭಿಸಿ, ನೀವು **ಸ್ಮುರ್ನದ** ಕರಾವಳಿಯ ದಾರಿಯಲ್ಲಿ ಉತ್ತರ ದಿಕ್ಕಿಗೆ ಪ್ರಯಾಣಿಸುವಿರಿ, ಬಳಿಕ ಇನ್ನಷ್ಟು ಮುಂದೆ **ಪೆರ್ಗಮಕ್ಕೆ** ಹೋಗುವಿರಿ. ಪೆರ್ಗಮದಿಂದ, **ಥುವತೈರ**ದ ಒಳನಾಡಿನ ಕಡೆಗೆ ತಿರುಗಿಕೊಳ್ಳುವಿರಿ. ಥುವತೈರದಿಂದ, ನೀವು ದಕ್ಷಿಣದ ಕಡೆಗೆ **ಸಾರ್ದಿಸ್, ಫಿಲದೆಲ್ಫಿಯ,** ಮತ್ತು **ಲವೊದಿಕೀಯ**ಗಳಿಗೆ ಸಾಗುವಿರಿ. ಲವೊದಿಕೀಯದಿಂದ, ಪುನಃ ಪೂರ್ವ ದಿಕ್ಕಿನ ಕಡೆಗೆ ಸಾಗುತ್ತಾ ಎಫೆಸಕ್ಕೆ ಹಿಂದಿರುಗುವಿರಿ. ಒಂದು ವೃತ್ತವು ಸಂಪೂರ್ಣತೆಯ ಸಂಕೇತವಾಗಿದೆ, ಆದ್ದರಿಂದ ಪ್ರಯಾಣದಲ್ಲಿ ಮೂಡಿಸಲಾದ ಏರುಪೇರಿನ ವೃತ್ತವು ಈ **ಏಳು ಸಭೆಗಳು** ಅಂದಿನ ಮತ್ತು ಯಾವದೇ ಕಾಲದ-*ಎಲ್ಲಾ* ಸಭೆಗಳನ್ನು ಪ್ರತಿನಿಧಿಸುತ್ತವೆ

ಎಂಬುದನ್ನ ಇನ್ನಷ್ಟು ಪುರಾವೆಯಾಗುತ್ತದೆ. ಎಫೆಸದಲ್ಲಿದ್ದ ಸಭೆಯು ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದಲೂ ಯೋಹಾನನಿಗೆ ಸ್ವಂತ ಊರಿನ ಸಭೆಯಂತಾಗಿತ್ತು, ಮತ್ತು ಆತನಿಗೆ ಪ್ರಸ್ತಾಪಿಸಲಾಗಿರುವ ಬೇರೆ ಸ್ಥಳಗಳಲ್ಲಿನ ಸಹೋದರರ ಪರಿಚಯವಿದ್ದಿರಬಹುದಾಗಿದೆ.

## ಯೋಹಾನನು ಕಂಡದ್ದು (1:12-16)

**12ನನ್ನ ಸಂಗಡ ಮಾತಾಡುತ್ತಿದ್ದ ಶಬ್ದವು ಯಾರದೆಂದು ನೋಡುವದಕ್ಕೆ ಹಿಂದಕ್ಕೆ ತಿರುಗಿದೆನು. 13ತಿರುಗಿದಾಗ ಏಳು ಚಿನ್ನದ ದೀಪಸ್ತಂಭಗಳನ್ನೂ ಆ ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನ್ನೂ ಕಂಡೆನು. ಆತನು ನಿಲುವಂಗಿಯನ್ನು ತೊಟ್ಟು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡಿದ್ದನು. 14ಆತನ ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು. 15ಆತನ ಕಣ್ಣುಗಳು ಬೆಂಕಿಯ ಉರಿಯಂತೆಯೂ ಆತನ ಪಾದಗಳು ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ ಆತನ ಧ್ವನಿಯು ಜಲಪ್ರವಾಹದ ಘೋಷದಂತೆಯೂ ಇದ್ದವು. 16ಆತನ ಬಲಗೈಯಲ್ಲಿ ಏಳು ನಕ್ಷತ್ರಗಳಿದ್ದವು; ಆತನ ಬಾಯೊಳಗಿಂದ ಹದವಾದ ಇಬ್ಬಾಯಿ ಕತ್ತಿಯು ಹೊರಡುತ್ತಿತ್ತು. ಆತನ ಮುಖವು ಮಧ್ಯಾಹ್ನದಲ್ಲಿ ಪ್ರಕಾಶಿಸುವ ಸೂರ್ಯನಂತಿತ್ತು.**

ಒಂದು ರಾತ್ರಿಯಲ್ಲಿ, ದಾನಿಯೇಲನು ವೃದ್ಧನಾಗಿ ಬಾಬಿಲೋನಿನಲ್ಲಿರುವ ವೇಳೆ, ಒಂದು ದರ್ಶನವನ್ನು ಕಂಡನು. ಆತನು "ಮಹಾವೃದ್ಧನು" ನಾಲ್ಕು ಭಯಂಕರವಾದ ಮೃಗಗಳಿಗೆ ನ್ಯಾಯತೀರ್ಪು ಮಾಡುವನ್ನು ಕಂಡನು (ದಾನಿಯೇಲ 7:9), ಮತ್ತು ಬಳಿಕ ಆತನು "ಮನುಷ್ಯಕುಮಾರನಂತಿರುವವ"ನನ್ನು ನೋಡಿದನು. ಆತನು ಅನಂತರದಲ್ಲಿ ಹೀಗೆ ಬರೆದನು,

> ನಾನು ಕಂಡ ರಾತ್ರಿಯ ಕನಸಿನಲ್ಲಿ ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾವೃದ್ಧನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ ತಂದರು. ಸಕಲಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು (ದಾನಿಯೇಲ 7:13, 14).

ದಾನಿಯೇಲನ ಕನಸಿನ ಮೂಲಭೂತ ಅರ್ಥವು ದಾನಿಯೇಲ 2ನೇ ಅಧ್ಯಾಯದಲ್ಲಿನ ನೆಬೂಕದ್ನೆಚ್ಚರನ ಕನಸಿನ ಅರ್ಥದಂತೆಯೇ ಆಗಿತ್ತು: ರೋಮನ್ ಸಾಮ್ರಾಜ್ಯದ ದಿನಗಳಲ್ಲಿ, ಯೇಸು ತನ್ನ ರಾಜ್ಯವನ್ನು ಸ್ಥಾಪಿಸುವನು-ಆ "ರಾಜ್ಯವು ಎಂದಿಗೂ ಅಳಿಯದು," ಅದು "ಶಾಶ್ವತವಾದದ್ದು" (ದಾನಿಯೇಲ 2:44; ನೋಡಿರಿ ದಾನಿಯೇಲ 7:15–18, 27). ಹೇಗೂ, ಈ ಸಮಯದಲ್ಲಿ ನಮ್ಮ ಆಸಕ್ತಿಯು "ಮನುಷ್ಯಕುಮಾರನಂತಿರುವ" ಒಬ್ಬನ ಚಿತ್ರಣದ ಮೇಲೆ ಕೇಂದ್ರಿಕೃತವಾಗಿರುತ್ತದೆ. ದಾನಿಯೇಲನು "ಮನುಷ್ಯಕುಮಾರನಂತಿರುವವನನ್ನು" ಕಂಡಾಗ, ದಾನಿಯೇಲನು ವ್ಯಥೆಗೊಂಡನು ಮತ್ತು ಕಳವಳಕ್ಕೊಳಗಾದನು (ದಾನೀಯೇಲ 7:15). ಆರು ನೂರು ವರ್ಷಗಳ ಬಳಿಕ, ಆಯೆಗೆನ್ ಸಮುದ್ರದಲ್ಲಿನ ಒಂದು ಚಿಕ್ಕ ದ್ವೀಪದ ಮೇಲೆ, ಮತ್ತೊಬ್ಬ ವೃದ್ಧನು "ಮನುಷ್ಯಕುಮಾರನಂತೆ ಇರುವವನನ್ನು" ಕಂಡನು (ಪ್ರಕಟನೆ 1:13); ಮತ್ತು ಆತನು ಕಂಡಾಗ "ಸತ್ತವನ ಹಾಗೆ ಆತನ ಪಾದಗಳ ಮುಂದೆ" ಕುಸಿದು ಬಿದ್ದನು (1:17).

1:12–16ರಲ್ಲಿ, ಯೋಹಾನನು ತಾನು ಕಂಡ ಮೊದಲ ದರ್ಶನವನ್ನು ಬಣ್ಣಿಸುತ್ತಾನೆ: ಅದು "ಮನುಷ್ಯಕುಮಾರನಂತೆ ಇರುವವನ" ದರ್ಶನ. ಆ ದರ್ಶನವು ಪುಸ್ತಕದ ಮಿಕ್ಕ ಭಾಗಕ್ಕಾಗಿ

ವೇದಿಕೆಯನ್ನು ಸಿದ್ಧಗೊಳಿಸುತ್ತದೆ. ನಾವು ಪ್ರಕಟನೆ ಪುಸ್ತಕವನ್ನು ಅರ್ಥಮಾಡಿಕೊಳ್ಳುವದಾದರೆ, ದಾನಿಯೇಲನಿಂದ ಹಾಗೂ ಯೋಹಾನನಿಂದ ಬಣ್ಣಿಸಲ್ಪಟ್ಟಿರುವ ವ್ಯಕ್ತಿಯನ್ನು ನಾವು ತಿಳಿದಿರತಕ್ಕದ್ದು. ನಾವು ಪ್ರಕಟನೆ ಪುಸ್ತಕದ ಸಂದೇಶದಿಂದ ಆಶೀರ್ವದಿಸಲ್ಪಡುವದಾದಲ್ಲಿ, ನಾವು ಸಹ ಆತನ ಮುಂದೆ ಬೀಳತಕ್ಕದ್ದು.

ನಾವು ಯೋಹಾನನ ದರ್ಶನಗಳನ್ನು ಅಧ್ಯಯನ ಮಾಡುವ ವೇಳೆ, ಇವುಗಳು *ದರ್ಶನಗಳಾಗಿವೆ*, ಹೊರತು ವಾಸ್ತವಿಕತೆಗಳಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದು ಪ್ರಾಮುಖ್ಯವಾದದ್ದು. ಅಪೊಸ್ತಲನು ಚೆನ್ನಾಗಿ ಎಚ್ಚರವಾಗಿದ್ದನು, ಆದರೆ ತಾನು ಕಂಡ ದರ್ಶನದಲ್ಲಿ ಆಗಲೂ ಕನಸಿನಂತಹ ಗುಣವಿತ್ತು: ಆಕಾರಗಳು ಅತ್ತಿತ್ತ ಹೋಗುತ್ತವೆ ಮತ್ತು ಬದಲಾಗುತ್ತವೆ; ಸಾಮಂಜಸ್ಯತೆಯು ಅನೇಕ ಸಾರಿ ಮಹತ್ವದ್ದೇನಿಸುವದಿಲ್ಲ; ಅಸಂಭವತೆಗಳು ನಿಯಮವಾಗಿರುತ್ತದೆ, ಹೊರತು ವಿನಾಯಿತಿ ಆಗಿರುವದಿಲ್ಲ. ಉದಾಹರಣೆಗೆ, ಒಂದು ಸ್ಥಳದಲ್ಲಿ ಸಮುದ್ರದಿಂದ ಬಂದ ಮೃಗಕ್ಕೆ *ಏಳು* ತಲೆಗಳು ಇರುವದಾಗಿ ಬಣ್ಣಿಸಲ್ಪಟ್ಟಿದೆ (13:1), ಆದರೆ ಇನ್ನೊಂದು ವಾಕ್ಯಭಾಗದಲ್ಲಿ ಆತನಿಗೆ ಒಂದೇ ಒಂದು ಬಾಯಿ ಇತ್ತು (16:13). ನಾವು ಈಗ ಸಧ್ಯದಲ್ಲಿ ಪರಿಗಣಿಸುತ್ತಿರುವ ವಾಕ್ಯಭಾಗದ ವಿಷಯವಾಗಿ, ಯೇಸು ವಾಸ್ತವದಲ್ಲಿ ಏಳು ನಕ್ಷತ್ರಗಳನ್ನು ಹೇಗೆ ತನ್ನ ಕೈಯಲ್ಲಿ ಹಿಡಿದುಕೊಳ್ಳಲು ಸಾಧ್ಯವಿತ್ತು (1:16; 2:1)? ನಮ್ಮ ಸೂರ್ಯನ ರೀತಿಯಲ್ಲಿಯೇ, ನಕ್ಷತ್ರಗಳು ಉರಿಯುವ ಇಂಧನಗಳನ್ನೊಳಗೊಂಡು ಇರುತ್ತವೆ, ಮತ್ತು ಎಲ್ಲಾ ನಕ್ಷತ್ರಗಳು ನಮ್ಮ ಸೂರ್ಯನಷ್ಟೇ ಅಥವಾ ಅದಕ್ಕಿಂತಲೂ ದೊಡ್ಡವುಗಳಾಗಿರುತ್ತವೆ. ಅಷ್ಟುಮಾತ್ರವಲ್ಲದೆ, ಯೇಸು ಹೇಗೆ ಏಕಕಾಲದಲ್ಲಿ ಕೈಯೊಳಗೆ ನಕ್ಷತ್ರಗಳನ್ನು ಹಿಡಿದುಕೊಳ್ಳಲು ಮತ್ತು ಯೋಹಾನನ ಮೇಲೆ ತನ್ನ ಕೈಯನ್ನಿಡುವದಕ್ಕೆ ಸಾಧ್ಯವಾಗಿತ್ತು (1:17)? ಈ ಪ್ರಶ್ನೆಗಳಿಗೆ ಯಾವ ಉತ್ತರಗಳೂ ಇರುವದಿಲ್ಲ-ಮತ್ತು ಅವುಗಳಿಗೆ ಯಾವ ಅರ್ಥವೂ ಇರುವದಿಲ್ಲ. ಒಂದು ದರ್ಶನದಲ್ಲಿ ಏನು ಬೇಕಾದರೂ ಸಾಧ್ಯವಿರುತ್ತದೆ.

ನಾವು 1:12-16ರಲ್ಲಿನ ದರ್ಶನಕ್ಕೆ ಹಿಂದಿರುಗಿ ಬರೋಣ. ಯೋಹಾನನು ತಿರುಗಿ ನೋಡಿದಾಗ, ಆತನು ಕಂಡ ಮಹಿಮೆಯನ್ನು ನೋಡಿ ಭಾವಪರವಶಗೊಂಡನು ಮತ್ತು ತಾನು ಕಂಡದ್ದರ ಉಜ್ಜ್ವಲತೆಯಿಂದ ಹೆಚ್ಚುಕಡಿಮೆ ಕಣ್ಣು ಕಾಣದವನಂತಾದನು. ಆತನ ಕಣ್ಣುಗಳು ಸರಿ ಹೊಂದಿಸಿಕೊಂಡ ಬಳಿಕ, ಆತನು ಬೆಳಕುಗಳ ವೃತ್ತವೊಂದನ್ನು ಕಾಣುವದಕ್ಕೆ ಶಕ್ತನಾದನು: ಶುದ್ಧ ಚಿನ್ನದಿಂದ ತಯಾರಿಸಲ್ಪಟ್ಟ ಅತ್ಯುತ್ಕೃಷ್ಟವಾದ ದೀಪಸ್ತಂಭದ ಮೇಲೆ ಮಿನುಗುತ್ತಿದ್ದ ದೀಪಗಳನ್ನು ಕಂಡನು. ಬಳಿಕ ಯೋಹಾನನು ದೀಪಗಳ ಮಧ್ಯದಲ್ಲಿ ಒಂದು ಆಕಾರವು ನಡೆದಾಡುತ್ತಿರುವದನ್ನು ಕಂಡನು (ನೋಡಿರಿ 2:1), ಆತನು ರೂಪವು ಯೋಹಾನನನ್ನು ನಡುಗುವಂತೆ ಮಾಡಿತ್ತು. ಈ ರೂಪವು "ತನ್ನ ಎದೆಯ ಸುತ್ತ ಬಂಗಾರದ ಪಟ್ಟಿಯ" ಜೊತೆಯಲ್ಲಿ ರಾಜರು ಧರಿಸುವ ಉದ್ದವಾದ ಹರಿದಾಡುವ ನಿಲುವಂಗಿಯನ್ನು ತೊಟ್ಟಿದ್ದನು (NRSV). ಚಾಚಲ್ಪಟ್ಟಿರುವ ಒಂದು ಅಂಗೈಯಲ್ಲಿ ಏಳು ಮಿನುಗುವ ನಕ್ಷತ್ರಗಳಿದ್ದವು. ಯೋಹಾನನು ಆತನ ಪಾದಗಳ ಒಂದು ಮಿನುಗುನೋಟವನ್ನು ಕಂಡನು: ಪಾದಗಳು "ಕುಲುಮೆಯಲ್ಲಿ ಕಾಯಿಸಿ ಬೆಳ್ಳಗೆ ಕಾಣುವ ಕೆಂಡದಂತಹ"[17] ತಾಮ್ರದಂತೆ ಇದ್ದವು. ಈ ಮನುಷ್ಯನು ನಡೆದಾಡಿದಲ್ಲೆಲ್ಲಾ ಹೊಗೆಯಾಡುವ ಹೆಜ್ಜೆಗುರುತುಗಳನ್ನು ಬಿಡುತ್ತಿದ್ದನು.

ಹೇಗೂ, ಯೋಹಾನನ ಕಣ್ಣುಗಳು ಆ ಮನುಷ್ಯನ ಮುಖದ ಮೇಲೆಯೇ ಮುಖ್ಯ ಗಮನವನ್ನು ನೆಟ್ಟಿದ್ದವು. ಆತನ ಕೂದಲು ಫಳಫಳನೆ ಹೊಳೆಯುವಷ್ಟು ಬೆಳ್ಳಗಿತ್ತು, ಅತ್ಯಂಥ ಪ್ರಕಾಶಮಾನವಾಗಿ ಉರಿಯು ಸೂರ್ಯನ ಬೆಳಕಿನಲ್ಲಿರುವ ಹಿಮದಂತೆ ಇದ್ದು ಎಷ್ಟೊಂದು ಹೊಳೆಯುತ್ತಿತ್ತೆಂದರೆ ಆತನ ಕಣ್ಣುಗಳಿಗೆ ಹಾನಿಯಾಗಿತ್ತು. ಆ ಮನುಷ್ಯನು ಯೋಹಾನನನ್ನು

ನೋಡಿದನು, ಮತ್ತು ಆತನ "ಕಣ್ಣುಗಳು ಬೆಂಕಿಯ ಜ್ವಾಲೆಯಂತೆ [ಹೊಳೆದವು]" (AB). ಆತನು ಯೋಹಾನನ *ಕಡೆಗೆ* ಹಾಗೆಯೇ ಸುಮ್ಮನೆ ನೋಡಲಿಲ್ಲ; ಆತನು ಅವನ *ಒಳಗೆ* ನೋಡಿದನು! ಆತನು ತನ್ನ ತುಟಿಗಳನ್ನು ತೆರೆದಾಗ, ಆತನ ಸ್ವರವು "ದಡಕ್ಕೆ ಬಡಿಯುವ ಅಲೆಗಳಂತೆ ಬೋರ್ಗರೆದವು" (LB). ನಂತರ, ಆತನ ಬಾಯೊಳಗಿಂದ ಒಂದು ದೊಡ್ಡ ಇಬ್ಬಾಯಿಯ Thracian ಖಡ್ಗವು ಹೊರಹೊಮ್ಮಿತು (ವ. 16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಥಕ್ಕನೆ, ಮನುಷ್ಯನ ಮುಖವು ಮದ್ಯಾಹ್ನದ ಸೂರ್ಯನಂತೆ ಉರಿಯಿತು-ಮತ್ತು ಯೋಹಾನನು ತನ್ನ ಕಣ್ಣುಗಳನ್ನು ಬೇರೆಡೆ ತಿರುಗಿಸಬೇಕಾಯಿತು.

ಈ ದರ್ಶನವು ಮಹಿಮೆ, ವೈಭವ, ಪರಿಶುದ್ಧತೆ, ಶಕ್ತಿ, ಮತ್ತು ಅಧಿಕಾರ ಇವುಗಳನ್ನು ತೋರ್ಪಡಿಸುತ್ತದೆ. ವಿವರಗಳು ಹೀಗೆ ಕೂಗಿ ಹೇಳುತ್ತವೆ, "ಈ ಮನುಷ್ಯಕುಮಾರನಂತೆ ಇರುವವನು ಶಕ್ತಿಶಾಲಿಯು!" ಆತನ ಉಡುಪು ಅವನಿಗೆ ಆಳ್ವಿಕೆ ಮಾಡುವ ಅಧಿಕಾರವಿರುತ್ತದೆಂಬುದನ್ನು ಘೋಷಿಸುತ್ತದೆ. ಆತನ ಘೋಷದಂತಿರುವ ಸ್ವರವು ಆತನಿಗೆ ಆಜ್ಞಾಪಿಸುವ ಶಕ್ತಿಯಿರುತ್ತದೆಂಬುದನ್ನು ಹೇಳುತ್ತದೆ. ಆತನ ತೀಕ್ಷ್ಣವಾದ ಕಣ್ಣುಗಳು ಆತನಿ ಗೆ ತಿಳಿಯುವ ಶಕ್ತಿಯಿದೆ ಎಂಬುದನ್ನು ಸಾರುತ್ತವೆ. ಆತನ ಉರಿಯುವ ಪಾದಗಳು ಮತ್ತು ಆತನ ಬಾಯಿಂದ ಹೊರಡುವ ಕತ್ತಿಯು ಆತನಿಗೆ ದಂಡಿಸುವ ಶಕ್ತಿಯಿರುತ್ತದೆಂಬುದನ್ನು ಸಾರುತ್ತವೆ.

ಅನೇಕ ಸಾರಿ ಒಂದು ದರ್ಶನದಲ್ಲಿನ ವಿವರಗಳು ತಮ್ಮಲ್ಲಿ ಮತ್ತು ತಮ್ಮ ಕುರಿತಾಗಲಿ ಯಾವದೇ ಮಹತ್ವವನ್ನು ಹೊಂದಿರುವದಿಲ್ಲ, ಆದರೆ 1ನೇ ಅಧ್ಯಾಯದಲ್ಲಿ, ವಿವರ*ಗಳು* ಪ್ರಾಮುಖ್ಯವಾಗಿರುತ್ತವೆ. ಏಳು ಸಭೆಗಳಿಗೆ ಬರೆದ ಪತ್ರಿಕೆಗಳಲ್ಲಿ, ಯೇಸುವಿನ ಕುರಿತ ಬಣ್ಣನೆಗಳು (2:1, 8, 12, 18; 3:1, 7) ಮುಖ್ಯವಾಗಿ ಈ ದರ್ಶನದಿಂದ ತೆಗೆದುಕೊಳ್ಳಲ್ಪಟ್ಟಿರುತ್ತವೆ-ಮತ್ತು ಪ್ರತಿಯೊಂದು ಬಣ್ಣನೆಯು ಸಂಬೋಧಿಸಲ್ಪಟ್ಟಿರುವ ಸಭೆಯೊಂದಿಗೆ ನೇರವಾದ ಸಂಬಂಧ ಹೊಂದಿರುತ್ತದೆ. ಮೊದಲನೆಯ ದರ್ಶನದಲ್ಲಿನ ಪ್ರತಿಯೊಂದು ವಿವರವೂ ಪ್ರಾಮುಖ್ಯವಾದದ್ದೆಂಬುದಕ್ಕೆ ಇನ್ನು ಕೆಲವು ಸೂಚನೆಗಳು ಇರುತ್ತವೆ: ಯೇಸು ಸಂಕೇತಗಳಲ್ಲಿ ಎರಡು ಸಂಕೇತಗಳ ಕುರಿತು ವಿವರಿಸುತ್ತಾನೆಂಬ (ವ. 20) ವಾಸ್ತವಾಂಶವು ಅವುಗಳ ಮಹತ್ವವನ್ನು ಒತ್ತಿ ಹೇಳುತ್ತದೆ. ಅಷ್ಟುಮಾತ್ರವಲ್ಲದೆ, 2:5ರಲ್ಲಿ ಎಚ್ಚರಿಕೆಯಲ್ಲಿ ದೀಪಸ್ತಂಭಗಳ ಸಂಕೇತವು ಬಳಸಲ್ಪಟ್ಟಿರುತ್ತದೆ. ಆದುದರಿಂದ, ಸಾಮಾನ್ಯವಾಗಿ ದರ್ಶನಗಳಿಗೆ ಹೆಚ್ಚು ಗಮನವನ್ನು ಕೊಡಲಾಗುವದಿಲ್ಲವಾದರೂ ಈ ದರ್ಶನದ ಪ್ರತಿಯೊಂದು ಭಾಗಕ್ಕಂತೂ ನಾವು ಹೆಚ್ಚಾದ ಗಮನವನ್ನು ಕೊಡಬೇಕಾಗಿರುವದು ಅಗತ್ಯವಾಗಿರುತ್ತದೆ.

**ವಚನ 12.** ಮಾಡಲ್ಪಟ್ಟ ಘೋಷಣೆಯ ಕುರಿತಾದ ಯಾವದೋ ಕಾರ್ಯವು ಅಪೊಸ್ತಲನಿಗೆ ಇಷ್ಟು ವರ್ಷಕಾಲ ಕೇಳಿಸಿಕೊಂಡಿರದೆ ಇದ್ದಂಥ ಸ್ವರವೊಂದನ್ನು ಜ್ಞಾಪಕಕ್ಕೆ ತಂದಿತ್ತು. ಯೋಹಾನನು ಹೀಗೆ ಹೇಳುತ್ತಾನೆ, **ನನ್ನ ಸಂಗಡ ಮಾತಾಡುತ್ತಿದ್ದ ಶಬ್ದವು ಯಾರದೆಂದು ನೋಡುವದಕ್ಕೆ ಹಿಂದಕ್ಕೆ ತಿರುಗಿದೆನು.** ಆ ಹೇಳಿಕೆಯ ಸರಳವಾದ ಅರ್ಥವು "ನನ್ನೊಂದಿಗೆ ಮಾತಾಡುವವರು ಯಾರೆಂದು ನೋಡುವದಕ್ಕೆ ಹಿಂದಕ್ಕೆ ತಿರುಗಿದೆನು" ಎಂದಷ್ಟೆ ಆಗಿರುತ್ತದೆ. ಯೋಹಾನನು ತಿರುಗಿಕೊಂಡು ನೋಡಿದಾಗ, ಆತನು ಕಳೆದ ಆರು ದಶಕಗಳಿಂದ ನೋಡಿರದ ಒಬ್ಬ ಮಿತ್ರನನ್ನು ಕಂಡನು, ಆದರೆ ಆತನನ್ನು ಹಿಂದೆಂದೂ ನೋಡಿರದ ರೀತಿಯಲ್ಲಿ ಕಂಡನು.

ನಾವು ಯೋಹಾನನು ಆರಂಭಿಸಿದ ಸ್ಥಳದಿಂದಲೇ ಆರಂಭಿಸಲಿದ್ದೇವೆ, **ಏಳು ಚಿನ್ನದ ದೀಪಸ್ತಂಭಗಳ** ಕುರಿತು ನೋಡುವ ಮೂಲಕ ಆರಂಭಿಸಲಿದ್ದೇವೆ. KJVಯಲ್ಲಿ "ಮೋಂಬನತ್ತಿ ಕಂಬಗಳು" ಎಂದಿರುತ್ತದೆ, ಆದರೆ ಯೋಹಾನನು ಪ್ರಕಟನೆ ಪುಸ್ತಕವನ್ನು ಬರೆದ ಹಲವಾರು

ವರ್ಷಗಳ ನಂತರದಲ್ಲಷ್ಟೆ ಮೋಂಬತ್ತಿಗಳು ಆವಿಷ್ಕರಿಸಲ್ಪಟ್ಟವು. ದೀಪಸ್ತಂಭಗಳು ನಮಗೆ ದೇವದರ್ಶನ ಗುಡಾರದಲ್ಲಿರುತ್ತಿದ್ದ ಏಳು ಕೊಂಬೆಗಳುಳ್ಳ ದೀಪಸ್ತಂಭವನ್ನು ಜ್ಞಾಪಿಸುತ್ತದೆ (ವಿಮೋಚನಕಾಂಡ 25:31, 32), ಆದರೆ ಇದರಲ್ಲೊಂದು ತಿರುವು ಇರುತ್ತದೆ. ಇವುಗಳು **ಏಳು** ಪ್ರತ್ಯೇಕವಾಗಿದ್ದ, ಒಂದಕ್ಕೊಂದು ಬೇರೆಯಾಗಿ ನಿಂತಿದ್ದ **ದೀಪಸ್ತಂಭಗಳು** ಆಗಿರುವಂತೆ ತೋರುತ್ತದೆ. ಹೀಗೆ ಯೇಸುವು "ದೀಪಸ್ತಂಭಗಳ ಮಧ್ಯದಲ್ಲಿ" ನಿಂತುಕೊಳ್ಳಲು ಶಕ್ತನಾಗಿದ್ದನು (ವ. 13). 20ನೇ ವಚನದಲ್ಲಿ ಯೇಸು "ಏಳು ದೀಪಸ್ತಂಭಗಳು ಅಂದರೆ ಏಳು ಸಭೆಗಳು," ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳು ಎಂದು ಹೇಳಿದನು(ವ. 11). ದೀಪಸ್ತಂಭಗಳು ಚಿನ್ನದಿಂದ ತಯಾರಿಸಲ್ಪಟ್ಟಿದ್ದವು, ಅದು ಲೋಹಗಳಲ್ಲಿಯೇ ಅತ್ಯಂಥ ಬೆಲೆಬಾಳುವ ಲೋಹವಾಗಿರುತ್ತದೆ. ಅದೇ ರೀತಿಯಲ್ಲಿ, ಸಭೆಯು ಯೇಸುವಿಗೆ ಬೆಲೆಯುಳ್ಳದ್ದಾಗಿದೆ (ಅಪೊಸ್ತಲರ ಕೃತ್ಯಗಳು 20:28; ಎಫೆಸ 5:23, 25).

**ವಚನ 13. ಆ ದೀಪಸ್ತಂಭಗಳ ಮಧ್ಯದಲ್ಲಿ**, ಯೋಹಾನನು ತನ್ನೆಲ್ಲಾ ಮಹಿಮೆಯಲ್ಲಿರುವಂತಹ ಯೇಸುವನ್ನು ಕಾಣುತ್ತಾನೆ. ಈ ವ್ಯಕ್ತಿಯು ಯೇಸುವೇ ಎಂಬುದನ್ನು ನಾವು ಬಲ್ಲೆವು ಯಾಕೆಂದರೆ 18ನೇ ವಚನದಲ್ಲಿ ಆತನು "ಸತ್ತವನಾದೆನು ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ" ಎಂದು ಹೇಳಿದನು. 2:18ರಲ್ಲಿ ಯೇಸು ತನ್ನನ್ನು "ದೇವಕುಮಾರನು" ಎಂದು ಗುರುತಿಸಿಕೊಳ್ಳುತ್ತಾನೆ. ಪ್ರಥಮ ಶತಮಾನದ ಕ್ರೈಸ್ತರು ತಮ್ಮನ್ನು ಕೈ ಬಿಡಲ್ಪಟ್ಟವರೆಂದು ಭಾವಿಸಿಕೊಂಡಿರಬಹುದು, ಆದರೆ ಯೇಸು ಅಲ್ಲಿದ್ದನು (ನೋಡಿರಿ ಮತ್ತಾಯ 18:20; 28:20). ಸಭೆಗಳು ಬಹಿಷ್ಕರಿಸಲ್ಪಟ್ಟು ಅಪಾಯಕ್ಕೊಳಗಾಗಬಲ್ಲವರೆಂದು ಭಾವಿಸಿಕೊಂಡಿರಬಹುದು, ಆದರೆ ಯೇಸು ಅವರ "ಮಧ್ಯದಲ್ಲಿ" ಇದ್ದನು (ವ. 13; KJV). ಯೇಸುವು ಸಭೆಯ ಏಕೀಕರಿಸುವ ತತ್ವ ಹಾಗೂ ಅದರ ಶಕ್ತಿ ಆಗಿದ್ದನು, ಮತ್ತು ಆಗಿರುವನು.

ಯೋಹಾನನು ಯೇಸುವನ್ನು **ಮನುಷ್ಯಕುಮಾರನಂತೆ ಇರುವವನು** ಎಂದು ಕರೆಯುತ್ತಾನೆ (ನೋಡಿರಿ 14:14). ಕ್ರಿಸ್ತನ ಭೂಲೋಕದ ಸೇವೆಯ ವೇಳೆಯಲ್ಲಿ, ಆತನು ತನಗಾಗಿ ಬಳಸುತ್ತಿದ್ದ ನಚ್ಚಿನ ಬಿರುದು ಎಂದರೆ "ಮನುಷ್ಯಕುಮಾರನು" (ನೋಡಿರಿ ಮತ್ತಾಯ 8:20), ಅದೊಂದು ಮೆಸ್ಸೀಯನ ಸೂಚ್ಯಾರ್ಥಗಳನ್ನೊಳಗೊಂಡಿದ್ದ ಹೆಸರಾಗಿತ್ತು (ದಾನಿಯೇಲ 7:13). ಸುವಾರ್ತೆಯ ಬರವಣಿಗೆಗಳಲ್ಲಿ ಈ ಪದವು ಎಂಭತ್ತಕ್ಕೂ ಅಧಿಕ ಸಾರಿ ಕಂಡು ಬರುತ್ತದೆ. ಬಳಿಕ ಅಪೊಸ್ತಲನು ಯೇಸುವನ್ನು ಬಣ್ಣಿಸುತ್ತಾನೆ. ಈ ಬಣ್ಣನೆಯು ಹೊಸ ಒಡಂಬಡಿಕೆಯಲ್ಲಿ ಏಕಮಾತ್ರವಾಗಿರತ್ತದೆ-ಮತ್ತು ಅದು ಅಕ್ಷರಶಃ ಆಗಿರುವದಿಲ್ಲ.

ಮೊದಲನೆಯದಾಗಿ, ಯೇಸುವಿನ ಉಡುಪಿನ ಕುರಿತ ಬಣ್ಣನೆಯನ್ನು ನೋಡುತ್ತೇವೆ: ಆತನು ಪಾದದ ವರೆಗೆ ಇರುವ **ನಿಲುವಂಗಿಯನ್ನು ತೊಟ್ಟು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡಿದ್ದನು**. ಆ ಉಡುಪು ಕೆಲಸ ಮಾಡುವ ಸಾಮಾನ್ಯ ಮನುಷ್ಯನ ಉಡುಪಿನಂತಿರಲಿಲ್ಲ, ಆದರೆ ರಾಜವಂಶಸ್ಥನ ಉಡುಪಾಗಿತ್ತು (ನೋಡಿರಿ ಯೆಶಾಯ 6:1). ದುಡಿಯುವ ಪುರುಷರು ಚಿಕ್ಕ ಉಡುಪುಗಳನ್ನು ತೊಟ್ಟಿರುತ್ತಿದ್ದರು, ಒಂದು ಬಟ್ಟೆ ಅಥವಾ ಚರ್ಮದ ನಡುಕಟ್ಟಿನ ಮೂಲಕ ಬಟ್ಟೆಯನ್ನು ಎತ್ತಿ ಸೊಂಟಕ್ಕೆ ಕಟ್ಟಿಕೊಂಡಿರುತ್ತಿದ್ದರು. ಯೇಸು ಉದ್ದವಾದ ನಿಲುವಂಗಿಯನ್ನು, ಜೊತೆಗೆ ಚಿನ್ನದ ಪಟ್ಟಿಯನ್ನು *ಎದೆಗೆ* ಕಟ್ಟಿಕೊಂಡವನಾಗಿ ಇದ್ದನು. ಕೆಲವು ವ್ಯಾಖ್ಯಾನಕಾರರು ಈ ವಚನದಲ್ಲಿನ ಉಡುಪಿನ ವರ್ಣನೆಯು ಮಹಾಯಾಜಕನ ಉಡುಪಿನ ರೀತಿಯಾದ್ದಾಗಿದೆ ಎಂದು ಕಾಣುತ್ತಾರೆ (ನೋಡಿರಿ ವಿಮೋಚನಕಾಂಡ 28:4, 39; 29:5; ಯಾಜಕಕಾಂಡ 16:4).[18]

**ವಚನ 14.** ನಂತರ, ಯೋಹಾನನು ಯೇಸುವಿನ ವ್ಯಕ್ತಿತ್ವದ ಮೇಲೆ ಗಮನವನ್ನು

ಹರಿಸುತ್ತಾನೆ: **ಆತನ ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು** (ನೋಡಿರಿ ದಾನಿಯೇಲ 7:9). ಆತನ ಕೂದಲು ಬೆಳ್ಳಗಿರುವಂಥದ್ದು ಆತನ ಪಾವಿತ್ರ್ಯತೆ ಹಾಗೂ ಪರಿಶುದ್ಧತೆಯನ್ನು ಸೂಚಿಸುವದಾಗಿದೆ (ಯೆಶಾಯ 1:18); ಅಲ್ಲದೆ ಅದು ನರೆತಲೆಯ ಜ್ಞಾನವನ್ನು ಸಹ ಸೂಚಿಸಬಹುದಾಗಿದೆ (ಜ್ಞಾನೋಕ್ತಿ 16:31). **ಆತನ ಕಣ್ಣುಗಳು ಬೆಂಕಿಯ ಉರಿಯಂತೆಯೂ** ಇದ್ದವು (ನೋಡಿರಿ ದಾನಿಯೇಲ 10:6). ಇಬ್ರಿಯ 4:13 ಹೇಳುವ ಪ್ರಕಾರ, "ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ" (ನೋಡಿರಿ ಕೀರ್ತನೆ 139:1-4).

**ವಚನ 15. ಆತನ ಪಾದಗಳು ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ** ಇದ್ದವು (ನೋಡಿರಿ ಯೆಹೆಜ್ಕೇಳ 1:7; ದಾನಿಯೇಲ 10:6). **ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ** ಎಂಬುದನ್ನು ಅನುವಾದಿಸಿರುವ ಗ್ರೀಕ್ ಭಾಷೆಯ χαλκολίβανον (*chalkolibanon*) ಎಂಬದು ಒಂದು ಸಂಯೋಜನೆಯ ಪದವಾಗಿದ್ದು "ತಾಮ್ರ" (χαλκός, *chalkos*) ಎಂಬ ಪದವನ್ನು ಒಳಗೊಂಡಿರುತ್ತದೆ, ಆದರೆ ಇಲ್ಲಿ ಯಾವ ತಾಮ್ರದ ಬೆರಕೆಯನ್ನು ಸೂಚಿಸಿ ಹೇಳಲಾಗಿರುತ್ತದೆಂಬುದು ಸ್ಪಷ್ಟವಾಗಿರುವದಿಲ್ಲ. ಹಿತ್ತಾಳೆಯು ಮುಖ್ಯವಾಗಿ ತಾಮ್ರ ಹಾಗೂ ಸತುವುಗಳ ಮಿಶ್ರಣವಾಗಿರುತ್ತದೆ. ಕಂಚು ಮುಖ್ಯವಾಗಿ ತಾಮ್ರ ಹಾಗೂ ತವರದ ಮಿಶ್ರಣವಾಗಿರುತ್ತದೆ. ಹಿತ್ತಾಳೆ ಹಾಗೂ ತಾಮ್ರಗಳೆರಡೂ ತುಕ್ಕು ಹಿಡಿಯುವದಿಲ್ಲವಾದ ಕಾರಣ ಅವುಗಳು ಬಲವಾದವುಗಳೆಂದು ಪರಿಚಿತವಿರುತ್ತವೆ. ಮೀಕ 4:13ರಲ್ಲಿ, ಚೀಯೋನ್ ಕುಮಾರ್ತೆಯು "ಬಹು ಜನಾಂಗಗಳನ್ನು ಚೂರುಚೂರಾಗಿ ಮಾಡುವಂತೆ" ಆಕೆಗೆ ತಾಮ್ರದ "ಪಾದಗಳು" ಕೊಡಲ್ಪಟ್ಟವು. ಅದೇ ರೀತಿಯಲ್ಲಿ, ಪ್ರಕಟನೆ 1ನೇ ಅಧ್ಯಾಯದಲ್ಲಿನ ಸಂಕೇತವು "ವೈರಿಗಳನ್ನು [ತನ್ನ] ಅಂಗಾಲುಗಳ ಕೆಳಗೆ ಬೂದಿಯಾಗಿ" ಮಾಡುವಂತೆ "ದುಷ್ಟರನ್ನು ತುಳಿದುಬಿಡುವದಕ್ಕೆ" ಯೇಸುವಿಗಿರುವ ಸಾಮರ್ಥ್ಯವನ್ನು ಸೂಚಿಸುತ್ತವೆ (ಮಲಾಕಿ 4:3).

**ಆತನ ಧ್ವನಿಯು ಜಲಪ್ರವಾಹದ ಘೋಷದಂತೆಯೂ ಇದ್ದವು** (ನೋಡಿರಿ ಯೆಹೆಜ್ಕೇಲ 43:2; ದಾನಿಯೇಲ 10:6). ಆತನ ಧ್ವನಿಯು ಪತ್ಮೊಸ್ ದ್ವೀಪದ ಬಂಡೆಗಳಿಂದ ಕೂಡಿದ ದಡಕ್ಕೆ ಅಪ್ಪಳಿಸುತ್ತಿದ್ದ ಆಯೆಗಿಯನ್ (Aegean) ಸಮುದ್ರ ಅಲೆಗಳಂತೆ ಶಕ್ತಿಶಾಲಿ ಮತ್ತು ಘನ ಗಾಂಭೀರ್ಯದಿಂದ ಕೂಡಿತ್ತು. ಕರ್ತನು ಮಾತಾಡಿದರೆ ಮನುಷ್ಯರು ಆಲಿಸತಕ್ಕದ್ದು.

**ವಚನ 16. ಆತನ ಬಲಗೈಯಲ್ಲಿ ಏಳು ನಕ್ಷತ್ರಗಳಿದ್ದವು.** ಬಲಗೈ ಶಕ್ತಿಯ ಕೈ ಆಗಿತ್ತು (ವಿಮೋಚನಕಾಂಡ 15:6). ಕೀರ್ತನೆಗಾರನು ದೇವರಿಗೆ ಹೀಗೆ ಹಾಡಿದನು, "ನಿನ್ನ ಬಲಗೈ ನನಗೆ ಆಧಾರವಾಗಿರುವದು" (ಕೀರ್ತನೆ 63:8). ಯೇಸು ಏಳು ನಕ್ಷತ್ರಗಳನ್ನು ಕಾಯುವದಕ್ಕೆ ಮತ್ತು ಕಾಪಾಡುವದಕ್ಕೆ ಅವುಗಳನ್ನು ತನ್ನ ಬಲಗೈಯಲ್ಲಿ ಹಿಡಿದುಕೊಂಡಿದ್ದನು.

ಅನಂತರದಲ್ಲಿ ಯೇಸು ಏಳು ನಕ್ಷತ್ರಗಳನ್ನು "ಏಳು ಸಭೆಗಳ ದೂತರು" (ವ. 20) ಎಂದು ಗುರುತಿಸುತ್ತಾನೆ, ಆದರೆ ಈ ವಿವರಣೆಯು ನೀಡಿದ ಉತ್ತರಗಳಿಗಿಂತಲೂ ಪ್ರಶ್ನೆಗಳನ್ನು ಅಧಿಕವಾಗಿ ಎಬ್ಬಿಸಿರುತ್ತದೆ. "ದೂತನು" (ಎಂಜೆಲ್) ಎಂಬುದು ಗ್ರೀಕ್ ಭಾಷೆಯ ἄγγελος (*angelos*) ಎಂಬುದರ ಲಿಪ್ಯಂತರಣವಾಗಿರುತ್ತದೆ, ಇದು "ಸಂದೇಶವಾಹಕನು" ಎಂದಷ್ಟೆ ಅರ್ಥವನ್ನು ಕೊಡುವಂಥ ಪದವಾಗಿದೆ. "ದೂತನು" ಒಬ್ಬ ಭೂಲೋಕದ ಸಂದೇಶಕನು ಆಗಿರಬಲ್ಲನು (ಮಲಾಕಿ 3:1; ಮತ್ತಾಯ 11:10) ಅಥವಾ ಒಬ್ಬ ಪರಲೋಕದ ಸಂದೇಶಕನು ಆಗಿರಬಲ್ಲನು (ಲೂಕ 2:9). ಕೆಲವು ವ್ಯಾಖ್ಯಾನಕಾರರು "ಸ್ವರ್ಗಲೋಕದ ಸಂದೇಶಕರು" ಮತ್ತು "ಭೂಮಂಡಲದ ಸಂದೇಶಕರು" ಎಂಬ ಪದಗಳನ್ನು ಬಳಸುತ್ತಾರೆ. ಇವೆರಡರಲ್ಲಿ ಯಾವದು ಎಂಬುದನ್ನು ಸನ್ನಿವೇಶವು ನಿರ್ಧರಿಸತಕ್ಕದ್ದು.

ನಕ್ಷತ್ರಗಳು/ದೇವದೂತರು ಕುರಿತ ಪ್ರತಿಯೊಂದು ಅರ್ಥನಿರೂಪಣೆಯು ತನ್ನದೆ ಆಗಿರುವ ಸಮಸ್ಯೆಗಳನ್ನು ಹೊಂದಿದೆ. ಪ್ರಕಟನೆ ಪುಸ್ತಕದ ಉಳಿದ ಭಾಗದಲ್ಲೆಲ್ಲಾ "ದೇವದೂತನು" ಎಂಬುದು ಒಬ್ಬ ಪರಲೋಕದ ಸಂದೇಶಕನನ್ನು ಸೂಚಿಸುತ್ತದೆ; ಹೀಗೆ "ದೇವದೂತನು" ಬಹುಶಃ 1ರಿಂದ 3 ಅಧ್ಯಾಯಗಳಲ್ಲಿ ಸಹ ಅದೇ ಅರ್ಥವನ್ನು ಹೊಂದಿರಬಹುದಾಗಿದೆ. ಹೇಗೂ, ಆ ಅರ್ಥನಿರೂಪಣೆಯು ಪ್ರಶ್ನೆಗಳನ್ನು ಎಬ್ಬಿಸುತ್ತದೆ: 2 ಮತ್ತು 3 ಅಧ್ಯಾಯಗಳಲ್ಲಿ ಏಕೆ ಈ ದೂತರನ್ನು ಸಂಬೋಧಿಸಿ ಹೇಳಲಾಗಿರುತ್ತದೆ, ಮತ್ತು ಸಭೆಗಳ ಪಾಪಗಳಿಗಾಗಿ ಅವರನ್ನು ಏಕೆ ಹೊಣೆಗಾರರನ್ನಾಗಿ ಮಾಡಲಾಗಿದೆ? ಉದಾಹರಣೆಗೆ 2:1, 2ರಲ್ಲಿ, ಯೇಸು ಹೀಗೆ ಹೇಳುತ್ತಾನೆ, "ಎಫೆಸದಲ್ಲಿರುವ ಸಭೆಯ *ದೂತ*ನಿಗೆ ಬರೆ - . . . ನಿನ್ನ ಕೃತ್ಯಗಳನ್ನೂ ಪ್ರಯಾಸವನ್ನೂ . . . ಬಲ್ಲೆನು" (ಒತ್ತಿ ಹೇಳಿದ್ದು ನನ್ನದು). "ನಿನ್ನ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ σου (*sou*) ಎಂಬುದು ಏಕವಚನವಾಗಿದೆ, ಹೊರತು ಬಹುವಚನವಲ್ಲ. ಕೆಲವರು ಸಭೆಗಳಿಗೆ ಜವಾಬ್ದಾರರಾಗಿರುವ ಕಾಯುವ ದೂತರು ಎಂಬ ಅಭಿಪ್ರಾಯ ಪಡುತ್ತಾರೆ. ದೇವದೂತರು ವ್ಯಕ್ತಿಗಳನ್ನು ಕಾಯುತ್ತಿರುತ್ತಾರೆ ಎಂದು ಬೈಬಲ್ ಖಂಡಿತವಾಗಿಯೂ ಹೇಳುತ್ತದೆ, ಆದರೆ ಪ್ರತಿಯೊಂದು ಸಭೆಗಾಗಿಯೂ ಒಬ್ಬೊಬ್ಬ ದೂತನು ನೇಮಿಸಲ್ಪಟ್ಟಿರುತ್ತಾನೆಂಬ ಬಗ್ಗೆ ಶಾಸ್ತ್ರಗಳು ಏನನ್ನೂ ಹೇಳುವದಿಲ್ಲ. ಅಷ್ಟುಮಾತ್ರವಲ್ಲದೆ, ಯೋಹಾನನು ದೂತರಿಗಾಗಿ ಬರೆಯಬೇಕಿದ್ದ (2:1, 8) ಸಂದೇಶವನ್ನು ಆತನಿಗೆ ತಿಳಿಸುವದಕ್ಕಾಗಿ ಯೇಸು ಏಕೆ ಒಬ್ಬ ದೂತನನ್ನು (22:16) ಕಳುಹಿಸುವನು?

ಈ ದೂತರು ಭೂಲೋಕದ ಸಂದೇಶಕರೆಂದು ಅನೇಕರು ಭಾವಿಸುತ್ತಾರೆ, ಬಹುಶಃ ಯೋಹಾನನು ಸೆರೆವಾಸದಲ್ಲಿರುವಾಗ ಆತನನ್ನು ನೋಡಿಕೊಂಡು ಬರುವದಕ್ಕೆ ಸಭೆಗಳಿಂದ ಕಳುಹಿಸಲ್ಪಟ್ಟಿದ್ದ ಆ ಸಭೆಗಳ ಪ್ರತಿನಿಧಿಗಳಾಗಿರಬಹುದೆಂದು ಭಾವಿಸುತ್ತಾರೆ. ಪಂಗಡಗಳಿಗೆ ಸೇರಿದ ವ್ಯಾಖ್ಯಾನಕಾರರು ಪ್ರತಿ ಸಭೆಯ ದೂತನು ಎಂದರೆ ಅದರ "ಸಭಾಪಾಲಕ" ಅಥವಾ "ಬಿಷಪ್" ಆಗಿದ್ದಾನೆಂದು ಹೇಳುವದನ್ನು ಬಹಳ ಇಷ್ಟಪಡುತ್ತಾರೆ, ಆದರೆ ಆಧುನಿಕ ಕಾಲದ ಪಂಗಡಗಳಲ್ಲಿರುವ ಒಬ್ಬ ಸಭಾಪಾಲಕ/ಒಬ್ಬ ಬಿಷಪ್ (ಸಭಾಧ್ಯಕ್ಷ) ವ್ಯವಸ್ಥೆಯು ಹೊಸ ಒಡಂಬಡಿಕೆಯ ಕಾಲದಲ್ಲಿ ಅಪರಿಚಿತವಾಗಿತ್ತು. ಪುನಃ ನಾವು ಪ್ರಶ್ನಿಸುತ್ತೇವೆ, ಯೇಸು ಏಕೆ ಆ ಮನುಷ್ಯರನ್ನುದ್ದೇಶಿಸಿ ಪತ್ರಗಳನ್ನು ಬರೆಯಿಸುವನು ಮತ್ತು ಸಭೆಗಳ ಪಾಪಗಳಿಗೆ ಅವರನ್ನು ಏಕೆ ಜವಾಬ್ದಾರರನ್ನಾಗಿ ಮಾಡುವನು? ಒಂದು ಆಕರ್ಷಣೆಯ ಯೋಚನೆಯೆಂದರೆ ದೂತರು ಸಭೆಯ *ಹಿರಿಯರಾಗಿದ್ದರು* ಎಂಬುದೆ-ಇಬ್ರಿಯ 13:17ರ ಪ್ರಕಾರ, *ಅವರು* ತಾವು ಸೇವೆ ಮಾಡುವ ಸಭೆಗಳಿಗೆ ಜವಾಬ್ದಾರರಾಗಿದ್ದಾರೆ. ಹೇಗೂ, ಹೀಗಿರುವದಾದರೆ ಅಲ್ಲಿ ಪ್ರತಿಯೊಂದು ಸಭೆಯಲ್ಲಿನ ಒಬ್ಬನೇ *ಒಬ್ಬ* ಹಿರಿಯನನ್ನು ಸಂಬೋಧಿಸಿ ಮಾತಾಡುವ ಸಮಸ್ಯೆಯಿರುತ್ತದೆ (2:1, 8). ಪ್ರತಿ ದೂತನು ಒಂದು ಸಭೆಯಲ್ಲಿನ *ಹಿರಿಯತ್ವ* (ಹಿರಿಯನಿಗೆ) ಪ್ರತಿನಿಧಿಯಾಗಿರತಕ್ಕದ್ದು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಕೆಲವರು ದೂತರ ಸಭೆಗಳ *ಮನೋಭಾವವನ್ನು* ಪ್ರತಿನಿಧಿಸುತ್ತಾರೆ ಎಂದು ಹೇಳುವ ಮೂಲಕ ಅಕ್ಷರಶಃ ದೂತರಲ್ಲಿರುವ ಸ್ವಭಾವತಃ ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಅರ್ಥನಿರೂಪಣೆಯಲ್ಲಿರುವ ಸಮಸ್ಯೆಯೇನೆಂದರೆ ಯೇಸು ಸಾಂಕೇತಿಕ ಭಾಷೆಯನ್ನು ವಿವರಿಸುವದಕ್ಕೆ ಸಾಂಕೇತಿಕ ಭಾಷೆಯನ್ನೇ ಬಳಸಿದನು ಎಂಬುದು ಇದರ ತಾತ್ಪರ್ಯವಾಗಿರುತ್ತದೆ ಎಂಬದೆ.

ಏಳು ನಕ್ಷತ್ರಗಳ ಒಗಟಿನ ಕುರಿತ ಚರ್ಚೆಯು ನಮಗೆ ಪ್ರಕಟನೆ ಪುಸ್ತಕದ ಅಧ್ಯಯನದಲ್ಲಿ ನಿರಂತರವಾಗಿ ಅಗತ್ಯವಿರುವ ತತ್ವವೊಂದನ್ನು ಒತ್ತಿ ಹೇಳುತ್ತದೆ: ನಕ್ಷತ್ರಗಳು ಯಾರು ಅಥವಾ

ಏನು ಎಂಬುದು ನಮಗೆ ನಿಖರವಾಗಿ ತಿಳಿಯಲು ಸಾಧ್ಯವಿಲ್ಲವಾದಾಗ್ಯೂ, *ಈಗಲೂ ನಾವು ಯೇಸು ಹೇಳಲಿಚ್ಛಿಸುವ ಅಂಶವನ್ನು ಗ್ರಹಿಸಿಕೊಳ್ಳಬಲ್ಲೆವು*. ನಕ್ಷತ್ರಗಳು/ದೂತರು ಯಾರೇ ಆಗಿದ್ದರೂ ಸರಿಯೇ, ಅವುಗಳು ಸಭೆಗಳನ್ನು ಪ್ರತಿನಿಧಿಸುತ್ತವೆ-ಮತ್ತು ಆ ಮೂಲಕ ಆ ಸಭೆಗಳ ಸದಸ್ಯರನ್ನು ಪ್ರತಿನಿಧಿಸುತ್ತಾರೆ (ನೋಡಿರಿ 2:1, 7). ಹಾಗಾದರೆ, 16ನೇ ವಚನದಲ್ಲಿನ ಗೂಢ ಲಿಪಿ ಅರ್ಥವು ಯೇಸು *ನಂಬಿಗಸ್ತರನ್ನು* (ವಿಶ್ವಾಸಿಗಳನ್ನು) ತನ್ನ ಕೈಯಲ್ಲಿ ಹಿಡಿದಿರುತ್ತಾನೆ, ಮತ್ತು ಅವರ ಚಿತ್ತಕ್ಕೆ ವಿರುದ್ಧವಾಗಿ ಯಾವ ಮನುಷ್ಯನಾಗಲಿ ಅಥವಾ ಸರ್ಕಾರವಾಗಲಿ "ಅವರನ್ನು ಕಸಿದುಕೊಳ್ಳಲು" ಸಾಧ್ಯವಿಲ್ಲ ಎಂದಾಗಿರತಕ್ಕದ್ದು (ಯೋಹಾನ 10:28; ನೋಡಿರಿ 2 ತಿಮೊಥೆ 1:12). ನಕ್ಷತ್ರಗಳು ಯಾರು ಅಥವಾ ಏನು ಆಗಿವೆ ಎಂಬುದನ್ನು ತಿಳಿದುಕೊಳ್ಳುವದಕ್ಕಿಂತಲೂ *ಆ* ಸಂದೇಶವು ಎಷ್ಟೋ ಹೆಚ್ಚು ಪ್ರಾಮುಖ್ಯವಲ್ಲವೋ?

ಯೇಸುವಿನ ಬಣ್ಣನೆಗಳಲ್ಲಿ ಇನ್ನು ಕೆಲವು ವಿವರಗಳು ಬಾಕಿ ಇರುತ್ತವೆ. **ಆತನ ಬಾಯೊಳಗಿಂದ ಹದವಾದ ಇಬ್ಬಾಯಿ ಕತ್ತಿಯು ಹೊರಡುತ್ತಿತ್ತು** ಎಂದು ಓದುತ್ತೇವೆ. **ಕತ್ತಿ** ಎಂಬುದನ್ನು ಅನುವಾದಿಸಿರುವ ῥομφαία (*rhomphaia*) ಎಂಬ ಗ್ರೀಕ್ ಪದವು, Thraceನಲ್ಲಿ ಉಗಮವಾದ ಭಾರವುಳ್ಳ ಯುದ್ಧ ಖಡ್ಗವನ್ನು ಸೂಚಿಸುವ ಪದವಾಗಿರುತ್ತದೆ. ದೇವರ ವಾಕ್ಯವು ಅನೇಕ ಸಾರಿ ಖಡ್ಗ ಎಂದು ಕರೆಯಲ್ಪಟ್ಟಿರುವದರಿಂದ (ಎಫೆಸ 6:17; ಇಬ್ರಿಯ 4:12) ಮತ್ತು ಯೇಸುವಿನ ಬಾಯೊಳಗಿಂದ ಕತ್ತಿಯು (ಖಡ್ಗ) ಬಂದಿತಾದ್ದರಿಂದ, ಅದು ನಿಶ್ಚಯವಾಗಿಯೂ ದೇವರ ವಾಕ್ಯವೆಂದು ಗುರುತಿಸಲ್ಪಡತಕ್ಕದ್ದು. ಹೇಗೂ, ಎಫೆಸ 6 ಮತ್ತು ಇಬ್ರಿಯ 4ರಲ್ಲಿ "ಕತ್ತಿ" ಎಂಬುದಕ್ಕಿರುವ ಗ್ರೀಕ್ ಪದವು μάχαιρα (*machaira*), ಇದು ಚಿಕ್ಕದಾದ ರೋಮನ್ ಚಾಕು ಆಗಿರುತ್ತದೆ. ಈ ಪದದ ವ್ಯತ್ಯಾಸಕ್ಕೆ ಬಹುಶಃ ಪ್ರಕಟನೆ 1ರಲ್ಲಿ ವಾಕ್ಯದ ಉದ್ದೇಶವು ಕಾರಣವಾಗಿರಬಹುದಾಗಿದೆ. ಈ ಕತ್ತಿಯು ಸುವಾರ್ತೆಯ ಶುಭವಾರ್ತೆ ಆಗಿರಲಿಲ್ಲ; ಅದು ಆತನ ವೈರಿಗಳ ಮೇಲೆ ಕರ್ತನ *ನ್ಯಾಯತೀರ್ಪಿನ* ವಾಕ್ಯವಾಗಿತ್ತು (ನೋಡಿರಿ ಯೆಶಾಯ 49:2). ಸುಳ್ಳು ಬೋಧಕರ ವಿಷಯವಾಗಿ, ಅಧ್ಯಾಯ 2ರಲ್ಲಿ, ಆತನು ಹೀಗೆ ಹೇಳುತ್ತಾನೆ, "ನನ್ನ ಬಾಯಿಕತ್ತಿಯಿಂದ ಅವರ ಮೇಲೆ ಯುದ್ಧಮಾಡುವೆನು" (2:16; ನೋಡಿರಿ 19:15, 21). ಹಾಗಿದ್ದರೂ, ವಾಕ್ಯವು ಕತ್ತಿಯಾಗಿದೆ ಎಂಬ ಚಿತ್ರಣವು ಬದಲಾಗದೆ ಹಾಗೆಯೇ ಉಳಿಯುತ್ತದೆ.

ಅಂತಿಮವಾಗಿ, ಯೋಹಾನನು ಹೀಗೆ ಬರೆದನು, **ಆತನ ಮುಖವು ಮಧ್ಯಾಹ್ನದಲ್ಲಿ ಪ್ರಕಾಶಿಸುವ ಸೂರ್ಯನಂತಿತ್ತು.** ಇಲ್ಲಿ ಸಾದೃಶ್ಯವು ದಿನ ಮಧ್ಯಭಾಗದಲ್ಲಿ ಸೂರ್ಯನು ಬೆಂಕಿಯಂತೆ ಪ್ರಜ್ವಲಿಸುವದರ ಕುರಿತಾಗಿರುತ್ತದೆ. ನಮಗೆ ಇಲ್ಲಿ ರೂಪಾಂತರದ ಘಟನೆ ನೆನಪಾಗುತ್ತದೆ, ಆ ವೇಳೆಯಲ್ಲಿ ಯೇಸುವಿನ ಮುಖವು "ಸೂರ್ಯನಂತೆ ಪ್ರಕಾಶಿಸಿತು" (ಮತ್ತಾಯ 17:2). ಅಂದು ಪರ್ವತದಲ್ಲಿ ಕ್ಷಣಿಕವಾಗಿದ್ದದ್ದು ಈಗ ಪರಲೋಕದಲ್ಲಿ ಶಾಶ್ವತವಾಗಿತ್ತು.

ಈಗ ಹಿಂದಕ್ಕೆ ಹೋಗಿ ದರ್ಶನವನ್ನು ಪುನಃ ಒಟ್ಟಾರೆಯಾಗಿ ಕಾಣುವ ಸಮಯವಾಗಿದೆ. ಈ ಮುಂಚೆ ಗಮನಕ್ಕೆ ತಂದ ಪ್ರಕಾರವೇ, 12ರಿಂದ 16 ವಚನಗಳಲ್ಲಿ ಪ್ರಾಥಮಿಕವಾಗಿ ವ್ಯಕ್ತಪಡಿಸಲ್ಪಟ್ಟಿರುವದು *ಶಕ್ತಿಯ* ಕುರಿತಾಗಿರುತ್ತದೆ. ಸಂಕೇತಗಳಲ್ಲಿ ಚಿತ್ರಿಸಲ್ಪಟ್ಟಿರುವ ಶಕ್ತಿಯು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಸಾಮರ್ಥ್ಯಗಳನ್ನು ಹೊಂದಿರುತ್ತವೆ. ಉದಾಹರಣೆಗೆ, 16ನೇ ವಚನದಲ್ಲಿನ ಚಿತ್ರವನ್ನು ತೆಗೆದುಕೊಳ್ಳಿರಿ: ಒಂದು ಕತ್ತಿಯು ದಂಡಿಸಬಲ್ಲದು ಅಥವಾ ಕಾಪಾಡಬಲ್ಲದು; ಸೂರ್ಯನು ಸುಡಬಲ್ಲನು ಅಥವಾ ಆಶೀರ್ವದಿಸಬಲ್ಲನು, ನೋವುಂಟು ಮಾಡಬಹುದು ಅಥವಾ ಗುಣಪಡಿಸಬಹುದು (ನೋಡಿರಿ

ಕೀರ್ತನೆ 84:11; ಮಲಾಕಿ 4:2).

ದರ್ಶನವು ಯೇಸುವಿಗೆ *ತಿಳಿಯುವ* ಶಕ್ತಿಯಿದೆ ಮತ್ತು ಆ ತಿಳುವಳಿಕೆಯಂತೆ *ಕ್ರಿಯೆ ಮಾಡುವ* ಶಕ್ತಿಯಿರುತ್ತದೆ. ಯೇಸುವಿಗೆ *ತಿಳಿಯಲು* ಶಕ್ತಿಯಿತ್ತೆಂಬುದು ಸ್ಪಷ್ಟವಾಗಿ ತೋರಿರುತ್ತದೆ: ಆತನು ಸಭೆಗಳ ಮಧ್ಯದಲ್ಲಿದ್ದನು, ಹಾಗಾದರೆ ಆತನಿಗೆ ಏನು ಸಂಭವಿಸುತ್ತದೆ ಎಂಬುದು ತಿಳಿದದೆ. ಆತನ ಕಣ್ಣುಗಳು ಸಮಸ್ತವನ್ನೂ ಕಾಣುವಂಥವುಗಳಾಗಿದ್ದವು.

"ತಿಳಿದಿರು" ಎಂಬದನ್ನು ಅನುವಾದಿಸಿರುವ ಗ್ರೀಕ್ ಪದ οἶδα (*oida*) ಎಂಬುದು ಅನೇಕ ಸಾರಿ ವಾಸ್ತವಾಂಶಗಳ ಕುರಿತು ಅರಿವು ಹೊಂದಿರುವದು ಎಂಬುದಕ್ಕಿಂತಲೂ ಅಧಿಕ ಅರ್ಥವನ್ನು ಕೊಡುತ್ತದೆ. ಅದು "ಸತತವಾಗಿ ತಿಳಿದುಕೊಳ್ಳುವವನು ಮತ್ತು ತಿಳಿದುಕೊಳ್ಳಲ್ಪಟ್ಟಿರುವ ವಸ್ತುವಿನ ನಡುವೆ ಇರುವ *ಒಂದು ಸಂಬಂಧ*ವನ್ನು ಸೂಚಿಸುತ್ತದೆ."[19] 1ನೇ ಅಧ್ಯಾಯದ ಅಂತಿಮ ವಚನಗಳಲ್ಲಿ, ಯೇಸು ಮತ್ತು ಆತನ ಶಿಷ್ಯರ ನಡುವಿನ ಸಂಬಂಧವು ಪ್ರತಿಯೊಂದು ವಚನದಲ್ಲಿ ಪ್ರಕಾಶಿಸುವದು. ಕ್ರಿಸ್ತನಿಗೆ *ಕ್ರಿಯೆ ಮಾಡುವ* ಶಕ್ತಿಯಿತ್ತು ಎಂಬುದು ಈ ದರ್ಶನದಲ್ಲಿ ಸ್ಪಷ್ಟವಾಗಿರುತ್ತದೆ: ಆತನು ತನ್ನ ಪಾದಗಳಿಂದ ಮತ್ತು ಕತ್ತಿಯಿಂದ ದಂಡಿಸುವದಕ್ಕೆ ಸಿದ್ಧನಾಗಿದ್ದನು, ಮತ್ತು ಆತನು ತನ್ನ ಬಲವುಳ್ಳ ಬಲಗೈಯಿಂದ ಕಾಪಾಡುವದಕ್ಕೆ ಸಿದ್ಧಗೊಂಡಿದ್ದನು. ಮುಂದಿನ ಎರಡು ಅಧ್ಯಾಯಗಳಲ್ಲಿ, ಯೇಸುವು *ತಿಳಿದಿರುವಂಥ* ವ್ಯಕ್ತಿಯಾಗಿ ಚಿತ್ರಿಸಲ್ಪಟ್ಟಿರುತ್ತಾನೆ (2:2, 9, 13, 19; 3:1, 8, 15), ಆದರೆ ಆತನು ತನಗೆ ತಿಳಿದಿರುವ ಸಂಗತಿಯ ಕುರಿತು *ಏನನ್ನಾದರೂ ಮಾಡುವದಕ್ಕೆ* ಶಕ್ತನು ಸಹ ಆಗಿರುವನು (2:5, 10, 11, 16, 17, 22, 23, 26, 27; 3:3, 5, 9, 10, 12, 16, 19–21).

ಪ್ರಥಮ ಶತಮಾನದ ಕ್ರೈಸ್ತರಿಗೆ ದರ್ಶನದ ಸಂದೇಶವು ಏನಾಗಿತ್ತದೆಂದರೆ ಕರ್ತನು ತನ್ನ ಜನರ ಪರವಾಗಿ ಕಾರ್ಯ ಮಾಡುವದಕ್ಕೆ *ಸಿದ್ಧನೂ*, *ಮನಸ್ಸುಳ್ಳವನೂ*, *ಮತ್ತು ಶಕ್ತನೂ ಆಗಿದ್ದನು* ಎಂಬದೆ. ಇಪ್ಪತ್ತೊಂದನೆಯ ಶತಮಾನದ ಕ್ರೈಸ್ತರಿಗಿರುವ ಸಂದೇಶವೆಂದರೆ ಆತನು *ಈಗಲೂ* ಸಿದ್ಧನಿದ್ದಾನೆ! ಕೀರ್ತನೆ 27:1 ಹೇಳುವ ಪ್ರಕಾರ, "ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು; ನಾನು ಯಾರಿಗೆ ಹೆದರೇನು?"

## ಯೋಹಾನನು ಅನುಭವ ಮಾಡಿದ್ದು (1:17-20)

**17ನಾನು ಆತನನ್ನು ಕಂಡಾಗ ಸತ್ತವನ ಹಾಗೆ ಆತನ ಪಾದಗಳ ಮುಂದೆ ಬಿದ್ದೆನು. ಆತನು ತನ್ನ ಬಲಗೈಯನ್ನು ನನ್ನ ಮೇಲಿಟ್ಟು – ಹೆದರಬೇಡ, ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ. 18ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ. 19ಆದದರಿಂದ ನೀನು ಕಂಡವುಗಳನ್ನೂ ಈಗ ನಡೆಯುತ್ತಿರುವವುಗಳನ್ನೂ ಮುಂದೆ ಆಗಬೇಕಾದವುಗಳನ್ನೂ ಬರೆ. 20ನನ್ನ ಬಲಗೈಯಲ್ಲಿ ನೀನು ಕಂಡ ಏಳು ನಕ್ಷತ್ರಗಳ ಮತ್ತು ಏಳು ಚಿನ್ನದ ದೀಪಸ್ತಂಭಗಳ ಗೂಢಾರ್ಥವನ್ನು ವಿವರಿಸುತ್ತೇನೆ – ಆ ಏಳು ನಕ್ಷತ್ರಗಳು ಅಂದರೆ ಏಳು ಸಭೆಗಳ ದೂತರು; ಆ ಏಳು ದೀಪಸ್ತಂಭಗಳು ಅಂದೆರೆ ಆ ಏಳು ಸಭೆಗಳು.**

**ವಚನ 17.** ಯೋಹಾನನು ಆ ದರ್ಶನಕ್ಕೆ ಹೇಗೆ ಪ್ರತಿಕ್ರಿಯಿಸಿದನು? ಆತನು ಹೀಗೆ ವರದಿ ಮಾಡುತ್ತಾನೆ, **ನಾನು ಆತನನ್ನು ಕಂಡಾಗ ಸತ್ತವನಂತೆ . . . ಬಿದ್ದೆನು**. ಯೋಹಾನನು ಯೇಸುವಿನ ಅತ್ಯಂಥ ನಿಕಟ ಸ್ನೇಹಿತರಲ್ಲೊಬ್ಬನಾಗಿದ್ದನು. ಶಿಷ್ಯರು ಭೋಜನದ ಸಮಯದಲ್ಲಿ

ವಿಶ್ರಮಿಸಿಕೊಳ್ಳುತ್ತಿರುವ ವೇಳೆ, ಯೋಹಾನನು ತನ್ನ ಯಜಮಾನನ ಬಲಗಡೆಯಲ್ಲಿ ಒರಗಿಕೊಂಡಿದ್ದನು (ಯೋಹಾನ 13:23). "ಯೇಸುವಿಗೆ ಪ್ರಿಯನಾಗಿದ್ದ" ಶಿಷ್ಯನು ಈತನೇ ಆಗಿದ್ದನು (ಯೋಹಾನ 13:23)-ಆದಾಗ್ಯೂ ಆತನು ಯೇಸುವನ್ನು ಆತನ ಸಕಲ ಮಹಿಮೆಯಲ್ಲಿ ಕಂಡಾಗ, ಆತನು ಯೇಸುವಿಗೆ "ನನ್ನ ಮಿತ್ರನೇ, ನಿನ್ನನ್ನು ಪುನಃ ಭೇಟಿಯಾಗಿದ್ದು ಚೆನ್ನಾಗಿರುತ್ತದೆ!" ಎಂದು ಹೇಳಲಿಲ್ಲ. ಬದಲಾಗಿ, ದೈವಿಕ ಮಿನುಗುನೋಟವನ್ನು ಕಂಡ ಪ್ರತಿಯೊಬ್ಬರಿಗೂ ಸಂಭವಿಸಿದ ಪ್ರಕಾರವೇ, ಆತನ ತಲೆಗೆ ಒಂದು ಕಟ್ಟಿಗೆಯಿಂದ ಹೊಡೆದರೋ ಎಂಬಂತೆ ಕುಸಿದು ಬಿದ್ದನು (ಯೆಶಾಯ 6:5; ಯೆಹೆಜ್ಕೇಲ 1:28; 3:23; 43:3; ದಾನಿಯೇಲ 8:17, 27; 10:8-10; ಮತ್ತಾಯ 17:6; ಲೂಕ 5:8; ಅಪೊಸ್ತಲರ ಕೃತ್ಯಗಳು 26:14). ಯೋಹಾನನು ಆರಾಧಿಸಬೇಕೆಂದು ಸಾಷ್ಟಾಂಗವೆರಗಲಿಲ್ಲ; ಬದಲಾಗಿ, ಭಯದಿಂದ ಆವರಿಸಲ್ಪಟ್ಟು ಯೇಸುವಿನ ಪಾದಗಳ ಮುಂದೆ ಬಿದ್ದನು. ಇಪ್ಪತ್ತು ನಾಲ್ಕು ಹಿರಿಯರು ದೇವರನ್ನು ಆರಾಧಿಸುವದಕ್ಕಾಗಿ ಆತನ ಸಿಂಹಾಸನದ ಮುಂದೆ ಬಿದ್ದರು (4:10), ಆದರೆ ಯೇಸು ಯೋಹಾನನಿಗೆ ಹೇಳಿದ ಮಾತುಗಳು ಸೂಚಿಸುವದೇನೆಂದರೆ ಭಯವು ಆತನನ್ನು ಕುಸಿದು ಬೀಳುವಂತೆ ಮಾಡಿತ್ತು ಎಂಬದೆ.

ಯೋಹಾನನು ಭಯದಿಂದ ಕೈಕಾಲುಗಳಲ್ಲಿ ಶಕ್ತಿಯಿಲ್ಲದವನಾಗಿದ್ದನು, ಆದರೆ ಯೇಸು ಆತನಿಗೆ **ಹೆದರಬೇಡ** ಎಂದು ಹೇಳಿದನು. ಯೇಸುವಿನ ಮಾತುಗಳನ್ನು ಹೀಗೆ ಅನುವಾದಿಸಬಹುದು, "ಇನ್ನೂ ಭಯ ಪಡುತ್ತಲೇ ಇರಬೇಡ." φοβοῦ ಎಂಬ ಕ್ರಿಯಾಪದವು (*phobou,* ಇದು φοβέω, *phobeō* ಎಂಬ ಪದದಿಂದ ಬಂದದ್ದು) ವರ್ತಮಾನಕಾಲರೂಪದಲ್ಲಿ ಇದ್ದು, ನಿರಂತರ ಕ್ರಿಯೆಯನ್ನು ಸೂಚಿಸುತ್ತದೆ. ಕರ್ತನು ಯೋಹಾನನಿಗೆ ಹೆದರಬೇಡ ಎಂದು ಹೇಳಿದಾಗ ಯೋಹಾನನ ನೆನಪಿನ ಶಕ್ತಿಯು -ಯೇಸು ಹಾಗೂ ಇನ್ನಿಬ್ಬರ ಸಂಗಡ ಒಂದು ಎತ್ತರವಾದ ಪರ್ವತ ತುದಿಯಲ್ಲಿ ಹೋಗಿದ್ದರ ಒಂದು ನೆನಪು ಕೆದಕಲ್ಪಟ್ಟಿತೋ? ಆ ಸಂದರ್ಭದಲ್ಲಿ, ಯೇಸುವು ಮೋಶೆ ಹಾಗೂ ಎಲೀಯನ ಸಂಗಡ ರೂಪಾಂತರಗೊಂಡದ್ದನ್ನು ಕಂಡನು. ಒಂದು ಪ್ರಕಾಶಮಾನವಾದ ಮೇಘವು ಅವರನ್ನು ಆವರಿಸಿಕೊಂಡಿತ್ತು, ಮತ್ತು ಮೇಘದೊಳಗಿಂದ ಒಂದು ಧ್ವನಿಯು ಮಾತಾಡಿ, "ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ!" ಎಂದು ನುಡಿದಿತ್ತು. ಆಗ ಯೋಹಾನ ಹಾಗೂ ಇತರರು "ಬಹಳವಾಗಿ ಹೆದರಿ ಬೋರಲ ಬಿದ್ದರು." ಆಗ ಯೇಸು "ಅವರನ್ನು ಮುಟ್ಟಿ - ಏಳಿರಿಮ ಹೆದರಬೇಡಿರಿ" ಎಂದು ಹೇಳಿದನು (ಮತ್ತಾಯ 17:5-7).

ಕರ್ತನು ಮನುಷ್ಯರಿಗೆ ಅನೇಕ ಸಾರಿ ಆ ಸಂದೇಶವನ್ನು ಕೊಟ್ಟಿದ್ದಾನೆ. ಒಬ್ಬ ದೂತನು ಜಕರೀಯನಿಗೆ "ಭಯಪಡಬೇಡ" (ಲೂಕ 1:13) ಎಂದು ಹೇಳಿದನು. ಅದೇ ಮಾತುಗಳನ್ನು ಮರಿಯಳಿಗೆ (ಲೂಕ 1:30) ಮತ್ತು ಯೋಸೇಫನಿಗೆ (ಮತ್ತಾಯ 1:20) ಹೇಳಲಾಯಿತು. ದೇವದೂತರು ಕುರುಬರಿಗೆ ಕಾಣಿಸಿಕೊಂಡಾಗ, ಅವರ ಸಂದೇಶದ ಒಂದು ಭಾಗವು "ಹೆದರಬೇಡಿರಿ" ಎಂದಾಗಿತ್ತು (ಲೂಕ 2:10). ಯಾಯೀರನ ಮಗಳು ಮರಣಿಸಿದಾಗ, ಯೇಸು ಆತನಿಗೆ "ಅಂಜಬೇಡ" (ಮಾರ್ಕ 5:36) ಎಂದು ಹೇಳಿದನು. ಯೇಸು ಸಮುದ್ರದ ಮೇಲೆ ನಡೆಯುತ್ತಾ ಬಿರುಗಾಳಿಯಿಂದ ಹೊಡೆಯಲ್ಪಟ್ಟು ಒದ್ದಾಡುತ್ತಿದ್ದ ಶಿಷ್ಯರ ಬಳಿಗೆ ಬಂದಾಗ ಇದೇ ಮಾತುಗಳನ್ನು ಬಳಸಿದನು (ಮತ್ತಾಯ 14:27). ಕ್ರಿಸ್ತನು ತನ್ನೆಲ್ಲಾ ಹಿಂಬಾಲಕರಿಗೆ ಹೀಗೆ ಹೇಳಿದನು, "ನನ್ನ ಸ್ನೇಹಿತರಾದ ನಿಮಗೆ ಹೇಳುತ್ತೇನೆ - ದೇಹವನ್ನು ಕೊಂದು ಅದಕ್ಕಿಂತ ಹೆಚ್ಚಿನದೇನೂ ಮಾಡಲಾರದವರಿಗೆ ಹೆದರಬೇಡಿರಿ" (ಲೂಕ 12:4). ಕರ್ತನು ಪೌಲನಿಗೆ ಕೊರಿಂಥದಲ್ಲಿ ಕಾಣಿಸಿಕೊಂಡ ವೇಳೆ, ಆತನು ಮಾತುಗಳು ಹೀಗಿದ್ದವು, "ನೀನು ಹೆದರಬೇಡ"

(ಅಪೊಸ್ತಲರ ಕೃತ್ಯಗಳು 18:9). ಹೊಸ ಒಡಂಬಡಿಕೆಯ ಈ ಉದಾಹರಣೆಗಳಷ್ಟೆ ಅಲ್ಲದೆ, ಕರ್ತನು ಮನುಷ್ಯರಿಗೆ ಹೆದರಬೇಡಿರಿ ಎಂದು ಹೇಳುವ ಹಳೆಯ ಒಡಂಬಡಿಕೆಯ ಅನೇಕ ಉದಾಹರಣೆಗಳು ಸಹ ಇರುತ್ತವೆ.

ಯೇಸು ಯೋಹಾನನನ್ನು ಹೆದರಿಸಬೇಕೆಂದು ಆತನ ಬಳಿಗೆ ಬಂದಿರಲಿಲ್ಲ, ಆದರೆ ಆತನಿಗೆ ಪ್ರೋತ್ಸಾಹವನ್ನು ನೀಡುವದಕ್ಕೆ ಬಂದಿದ್ದನು; ಆದ್ದರಿಂದ ಅವನಿಗೆ ಹೆದರಬೇಡ ಎಂದು ಹೇಳಿದನು. ಮಾತುಗಳು ಆತ್ಮಕ್ಕೆ ಉಪಶಮನವನ್ನು ನೀಡಬಲ್ಲವು. ಹಳೆಯ ಒಡಂಬಡಿಕೆಯಲ್ಲಿ, ಯೆಹೋವನು "ಕರುಣೆಯ ಒಳ್ಳೇಯ ಮಾತುಗಳಿಂದ" ಮಾತಾಡಿದನು (ಜೆಕರ್ಯ 1:13). ಹೇಗೂ, ಯೇಸು ಕೇವಲ ಮಾತುಗಳೊಂದಿಗೆ ನಿಲ್ಲಿಸಿ ಬಿಡಲಿಲ್ಲ. ಆತನು ನೋವನ್ನು ಅನುಭವಿಸುತ್ತಿರುವ ಮಿತ್ರನ ಭುಜದ ಮೇಲೆ ಒಬ್ಬನು ಕೈಯನ್ನು ಸುತ್ತಲು ಹಾಕುವ ರೀತಿಯಲ್ಲಿಯೇ, ಯೋಹಾನನ ಮೇಲೆ **ತನ್ನ ಬಲಗೈಯನ್ನು ಇಟ್ಟನು**. ಅಲ್ಲದೆ ಯೇಸು ಯೋಹಾನನನ್ನು ಎಬ್ಬಿಸಿ ನಿಲ್ಲುವಂತೆ ಸಹ ಮಾಡಿರಬಹುದಾಗಿದೆ.

"ಹೆದರಬೇಡ" ಎಂದು ಯೇಸು ಯೋಹಾನನಿಗೆ ಹೇಳಿದ ಬಳಿಕ, ಅಪೊಸ್ತಲನಲ್ಲಿದ್ದ ಭಯವನ್ನು ಓಡಿಸುವಂತಹ ಮಾತುಗಳನ್ನು ಹೇಳಿದನು. ರೋಮನ್ ಸೈನ್ಯವು ಎಷ್ಟು ಬಲಾಢ್ಯವಾಗಿದೆ, ಕ್ರೈಸ್ತರಿಗಾಗುತ್ತಿರುವ ಹಿಂಸೆಯು ಸುಧಾರಿಸುವದರ ಬದಲಾಗಿ ಹೇಗೆ ಮತ್ತಷ್ಟು ಕೆಟ್ಟ ಸ್ಥಿತಿಗೆ ತಿರುಗುವದು ಎಂಬದರ ಬಗ್ಗೆಯಾಗಲಿ, ಅಥವಾ ಕ್ರಿಸ್ತನಲ್ಲಿರುವ ಆತನ ಸಹೋದರರು ಹಾಗೂ ಸಹೋದರಿಯರು ಹೇಗೆ ತಮ್ಮ ಪ್ರಾಣಗಳನ್ನು ಕಳಕೊಳ್ಳುವರು ಎಂಬುದರ ಕುರಿತಾಗಲಿ ಕೇಳಿಸಿಕೊಳ್ಳುವದು ಯೋಹಾನನಿಗೆ ಅಗತ್ಯವಿರಲಿಲ್ಲ. ಅಂಥ ವಿಷಯಗಳ ಕುರಿತಾಗಿ ಆತನಿಗೆ ಈಗಾಗಲೇ ತಿಳಿಯದೆ ಇರುವ ಕಾರ್ಯಗಳನ್ನು ಆತನು ಕಲ್ಪನೆ ಮಾಡಿಕೊಳ್ಳಬಹುದಿತ್ತು. ಆತನಿಗೆ ಕೇಳಿಸಿಕೊಳ್ಳುವ ಅಗತ್ಯವಿದ್ದ ಕಾರ್ಯವೆಂದರೆ ಮುಂದೆ ಬರುವ ಭಯಂಕರವಾದ ಸಂಧಿಸುವಂತೆ ಕರ್ತನು ಅವರಿಗೆ *ಸಹಾಯವನ್ನು ಮಾಡುವನು* ಎಂಬದೆ.

ರೋಮನ್ ಶಕ್ತಿಯ ಮುಂದೆ ಭಯಗ್ರಸ್ಥರಾಗಿರುವವರಿಗೆ, ಯೇಸು ಹೇಳುವದೇನೆಂದರೆ, **ನಾನು ಮೊದಲನೆಯವನೂ ಕಡೆಯವನೂ** . . . **ಆಗಿದ್ದೇನೆ.** ಈ ಪದಗುಚ್ಛದ ಪ್ರಾಥಮಿಕ ಅರ್ಥವು "ಅಲ್ಫಾವೂ ಓಮೆಗವೂ" ಎಂಬ ರೀತಿಯಲ್ಲಿಯೇ ಆಗಿರುತ್ತದೆ (ವ. 8; ನೋಡಿರಿ 22:13). ತಂದೆ ಮತ್ತು ಮಗ ಇಬ್ಬರೂ ಹೇಗೆ "ಮೊದಲನೆಯವನೂ ಕಡೆಯವನೂ" ಆಗಿರುವದಕ್ಕೆ ಸಾಧ್ಯ? ಅವರು ಪರಿಪೂರ್ಣವಾಗಿ *ಒಂದಾಗಿರುವ* ಕಾರಣ ಇದು ಸಾಧ್ಯವಿರುತ್ತದೆ (ಯೋಹಾನ 10:30). ಈ ಮಾತುಗಳು ಯೇಸುವಿನ ದೈವಿಕ ಸ್ವಭಾವವನ್ನು ಕುರಿತು ನೆನಪಿಸುವಂಥವುಗಳಾದವು, ಆದರೆ ಅವುಗಳು ಅದಕ್ಕಿಂತಲೂ ಹೆಚ್ಚಿನದನ್ನು ಮಾಡಿದ್ದವು. ಯೇಸುವು ರೋಮನ್ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬರುವದಕ್ಕೆ ಮುಂಚೆಯೇ ಇದ್ದನು ಮತ್ತು ರೋಮನ್ ಸಾಮ್ರಾಜ್ಯವು ಅಳಿದು ಹೋದ ಮೇಲೆಯೂ ಇರುವವನಾಗಿದ್ದಾನೆಂಬುದನ್ನು ಅವುಗಳು ಸೂಚಿಸಿದವು. ಯೆಶಾಯನ ಪುಸ್ತಕದಲ್ಲಿ, "ಮೊದಲನೆಯವನೂ ಕಡೆಯವನೂ" ಎಂಬ ಪದವು ದೇವರು ತನ್ನ ವೈರಿಗಳನ್ನು ಓಡಿಸಿ ತನ್ನ ಜನರನ್ನು ವಿಮೋಚನೆಗೊಳಿಸುವ ಯೋಚನೆಗೆ ಸಂಬಂಧ ಹೊಂದಿರುತ್ತದೆ (ಯೆಶಾಯ 41:14; 44:6; 48:12).

**ವಚನ 18.** ಅಲ್ಲದೆ ಯೇಸು ಇದನ್ನು ಸಹ ಹೇಳಿದನು, "ನಾನು . . . **ಸದಾ ಜೀವಿಸುವವನೂ**" ಆಗಿದ್ದೇನೆ, ಇದು ದೇವತ್ವದ ಒಂದು ಬಿರುದು ಆಗಿರುತ್ತದೆ (ನೋಡಿರಿ ಯೆಹೋಶುವ 3:10; ಕೀರ್ತನೆ 42:2; 84:2; ಹೋಶೇಯ 1:10). W. A. Crisswell ಹೀಗೆ ಬರೆಯುತ್ತಾನೆ,

> ಭೂಲೋಕದ ಸಕಲ ರಾಜರು ಭೂಮಿಯ ಮಣ್ಣಿನಲ್ಲಿ ನಿದ್ರಿಸುವಾಗ ಮತ್ತು ಅವರ ಶಕ್ತಿಯೆಲ್ಲಾ ಅಳಿದು ಹೋದ ಮೇಲೆ. ಭೂಲೋಕದಲ್ಲಿನ ಎಲ್ಲಾ ಸ್ಮಾರಕಗಳು ಸೂರ್ಯನಿಂದ ಓಡಿಸಲ್ಪಡುವಂತಹ ಮುಂಜಾನೆಯ ಮಂಜಿನ ರೀತಿಯಲ್ಲಾಗುವಾಗ, ಭೂಮಿಯ ಮೇಲಿನ ಮಹಾನ್ ವ್ಯಕ್ತಿಗಳೆಲ್ಲಾ ಸಮಾಧಿಯಲ್ಲಿ ನಿದ್ರಿಸುವಾಗ, ಆತನು ಜೀವಿಸುವನು ಮತ್ತು ನೆಲೆಗೊಳ್ಳುವನು ಹಾಗೂ ಎಂದೆಂದಿಗೂ ಆಳ್ವಿಕೆ ಮಾಡುತ್ತಿರುವನು.[20]

ಯೇಸುವಿಗೆ ಹೋಲಿಸಿದರೆ, ರೋಮನ್ ಸಾಮ್ರಾಜ್ಯವು "ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತೆ" ಇದ್ದರು (ಯಾಕೋಬ 4:14).

ರಕ್ತಸಾಕ್ಷಿಗಳಾಗಿ ಸಾಯಬೇಕಾದ ಸ್ಥಿತಿಯನ್ನು ಎದುರಿಸುತ್ತಿರುವವರಿಗೆ, ಯೇಸು ಹೀಗೆ ಹೇಳಿದನು, **ಸತ್ತವನಾದೆನು, ಮತ್ತು ಇಗೋ, ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ. ಆದೆನು** ಎಂಬ ಪದದ ಮಹತ್ವವನ್ನು ನಿರ್ಲಕ್ಷಿಸಬೇಡಿರಿ. ಆತನು ಸತ್ತವನು *ಆಗಿದ್ದನು*, ಆದರೆ ಆತನು ಇನ್ನು ಮೇಲೆ ಸತ್ತವನಾಗಿರುವದಿಲ್ಲ; ಬದಲಾಗಿ, ಆತನು **ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದಾನೆ**. ಅಷ್ಟುಮಾತ್ರವಲ್ಲದೆ, ಈಗ ಆತನು ಮರಣ ಮಂಡಲದ ಮೇಲೆ ಅಧಿಕಾರ ಹೊಂದಿರುತ್ತಾನೆ, ಯಾಕೆಂದರೆ ಆತನ ಬಳಿಯಲ್ಲಿ ಮರಣ ಹಾಗೂ ಪಾತಾಳದ ಬೀಗದ ಕೈಗಳಿದ್ದಾವೆ. **ಮರಣ ಮತ್ತು ಪಾತಾಳ** ಒಟ್ಟಾಗಿ ಸಾಗುತ್ತವೆ (ನೋಡಿರಿ 6:8; 20:13, 14); ಒಬ್ಬ ವ್ಯಕ್ತಿಯ ದೇಹವು ಮರಣಿಸುವಾಗ, ಆತನ ಆತ್ಮವು ಪಾತಾಳ ಲೋಕಕ್ಕೆ ಹೋಗುತ್ತದೆ (ನೋಡಿರಿ 20:13). "ಪಾತಾಳ" (ᾅδης, *hadēs*) ಎಂಬುದರ ಅಕ್ಷರಶಃ ಅರ್ಥವು "ಅಗೋಚರ" ಎಂದಾಗಿರುತ್ತದೆ ಮತ್ತು ದೇಹವನ್ನು ತೊರೆದ ಸತ್ತವರಿರುವಂಥ "ಅಗೋಚರವಾದ ಲೋಕವನ್ನು" ಸೂಚಿಸುತ್ತದೆ. ಯೇಸುವು ಮರಣಿಸಿದ ಬಳಿಕ ಆತನ ಆತ್ಮವು ಪಾತಾಳದ ಲೋಕದಲ್ಲಿತ್ತು (ಅಪೊಸ್ತಲರ ಕೃತ್ಯಗಳು 2:31). ಪಾತಾಳ ಲೋಕದ ಕುರಿತ ಅತ್ಯಂಥ ಗ್ರಹಿಸಬಲ್ಲ ಬಣ್ಣನೆಯು ಲೂಕ 16:19-31ರಲ್ಲಿ ಕಂಡು ಬರುತ್ತದೆ. ಪ್ರಕಟನೆ 1:18ರಲ್ಲಿ KJVಯು "ಪಾತಾಳ" ಎಂಬುದಕ್ಕೆ ಬದಲಾಗಿ "ನರಕ" ಎಂದು ಹೇಳುತ್ತದೆ (ನೋಡಿರಿ 6:8; 20:13, 14), ಅದು ಗೊಂದಲಕರವಾಗಿರುತ್ತದೆ ಯಾಕೆಂದರೆ KJVಯು ದುಷ್ಟರೆಲ್ಲರ ನಿತ್ಯನಿವಾಸವಾಗಿರುವ *γέεννα* (*gehenna*) ವನ್ನು ಸಹ "ನರಕ" ಎಂದು ಅನುವಾದಿಸುತ್ತದೆ. ಪಾತಾಳವು ದುಷ್ಟರು ಇರುವ ನಿತ್ಯವಾದ ನಿವಾಸ ಆಗಿರುವದಿಲ್ಲ.

ತನ್ನ ಬಳಿಯಲ್ಲಿ ಮರಣ ಮತ್ತು ಪಾತಾಳದ **ಬೀಗದ ಕೈಗಳು** ಅವೆ ಎಂದು ಹೇಳುವ ಮೂಲಕ, ಯೇಸು ತಮ್ಮ ನಂಬಿಕೆಯ ನಿಮಿತ್ತವಾಗಿ ಸಾಯುವಂಥವರ ಆತ್ಮಗಳನ್ನು ಬಿಡುಗಡೆಗೊಳಿಸುವ ಅಧಿಕಾರವು ತನಗಿರುತ್ತದೆಂಬುದನ್ನು ಒತ್ತಿ ಹೇಳುತ್ತಿದ್ದಾನೆ. ಮರಣವು ಅವರನ್ನು ನಾಶ ಮಾಡುವದಕ್ಕಾಗಲಿಲ್ಲ, ಮತ್ತು ಪಾತಾಳವು ಅವರನ್ನು ಹಿಡಿದಿಟ್ಟುಕೊಳ್ಳಲು ಆಗಲಿಲ್ಲ. ಅಲ್ಲದೆ ಅವಿಶ್ವಾಸಿಗಳನ್ನು ಮರಣ ಮತ್ತು ಪಾತಾಳದ ಮಂಡಲದಲ್ಲಿ ಹಾಕಿ ಬಿಡುವ ಅಧಿಕಾರವು ತನಗೆ ಇರುತ್ತದೆಂದು ಸಹ ಯೇಸುವು ಇಲ್ಲಿ ಹೇಳುತ್ತಿದ್ದಾನೆ, ಅದು ಪ್ರಕಟನೆ ಪುಸ್ತಕದಲ್ಲಿ ಅನಂತರ ಸ್ಪಷ್ಟಗೊಳಿಸಲ್ಪಡುತ್ತದೆ. ಹೇಗೂ, ಈ ವಾಕ್ಯಭಾಗದಲ್ಲಿ, ಕ್ರೈಸ್ತರಿಗಾಗುವ ಪ್ರಯೋಜನಕ್ಕೆ ಪ್ರಾಥಮಿಕವಾಗಿ ಗಮನವನ್ನು ಕೊಡಲಾಗಿರುತ್ತದೆ.

**ವಚನ 19.** ಬಳಿಕ ಯೇಸು ಪ್ರಕಟನೆಯನ್ನು ಬರೆದಿಡುವದಕ್ಕೆ ಯೋಹಾನನಿಗಿರುವ ಆದೇಶವನ್ನು ಪುನರಾವರ್ತಿಸುತ್ತಾನೆ: **ಆದದರಿಂದ ನೀನು ಕಂಡವುಗಳನ್ನೂ ಈಗ ನಡೆಯುತ್ತಿರುವವುಗಳನ್ನೂ ಮುಂದೆ ಆಗಬೇಕಾದವುಗಳನ್ನೂ ಬರೆ.** ಈ ವಚನವು ಪ್ರಕಟನೆ ಪುಸ್ತಕದ ಸಂಕ್ಷಿಪ್ತ ವಿವರಣೆಯನ್ನು ನೀಡುತ್ತದೆಂದು ಅನೇಕ ವ್ಯಾಖ್ಯಾನಕಾರರು ನಂಬುತ್ತಾರೆ:

(1) "ನೀನು ಕಂಡವುಗಳನ್ನೂ," ಎಂಬುದು 1ನೇ ಅಧ್ಯಾಯದಲ್ಲಿ ಯೋಹಾನನು ನೋಡುತ್ತಿದ್ದ ದರ್ಶನವನ್ನು ಸೂಚಿಸುತ್ತದೆ; (2) "ಈಗ ನಡೆಯುತ್ತಿರುವವುಗಳನ್ನೂ," ಸಭೆಗಳ ಕುರಿತಾಗಿ ಹೇಳಲಿರುವ 2 ಮತ್ತು 3 ಅಧ್ಯಾಯಗಳನ್ನು ಕುರಿತು ಹೇಳುವದಾಗಿದೆ; ಮತ್ತು (3) "ಮುಂದೆ ಆಗಬೇಕಾದವುಗಳನ್ನೂ," 4ರಿಂದ 20 ಅಧ್ಯಾಯಗಳಲ್ಲಿ ತೋರಿಸಲ್ಪಟ್ಟಿರುವ ಪ್ರಕಾರವಾಗಿ. 19ನೇ ವಚನವು ಸಹ ಮೂರು-ವಿಧದ ವಿಭಾಗಗಳ ಬದಲಾಗಿ ಎರಡು-ವಿಧದ ವಿಭಾಗವನ್ನು ಕುರಿತು ಮಾತಾಡಬಹುದಾಗಿದೆ. ಅದರರ್ಥವು ಹೀಗಿರಬಲ್ಲದು, "ಈ ಕಾರ್ಯಗಳನ್ನೆಲ್ಲಾ ನೋಡುವದನ್ನು ನೀನು ಮುಗಿಸಿದ ಬಳಿಕ, (1) ಈಗ ನಡೆಯುತ್ತಿರುವ ಮತ್ತು (2) ಮುಂದೆ ನಡೆಯುವಂಥ ಸಂಗತಿಗಳನ್ನು ಬರೆದಿಡು." ಈ ವಚನವು ಪುಸ್ತಕದ ಸಂಕ್ಷಿಪ್ತ ವಿವರಣೆ ಆಗಿರ*ಬಲ್ಲದು*; ಆದರೆ ಅದು ಹಾಗಿರುವದೇ ಆದಲ್ಲಿ, ಅದು ಅನೇಕ ವಿನಾಯಿತಿಗಳನ್ನು ಹೊಂದಿರುತ್ತದೆ. ಉದಾಹರಣೆಗೆ, 4 ಮತ್ತು 5 ಅಧ್ಯಾಯಗಳಲ್ಲಿನ ಸಿಂಹಾಸನದ ದೃಶ್ಯವು ನಡೆಯುತ್ತಿರುವ ಮತ್ತು ಮುಂದೆ ಆಗಬೇಕಾದವುಗಳೆರಡರ ಭಾಗವೂ ಆಗಿರಬಲ್ಲದು. ಅಷ್ಟುಮಾತ್ರವಲ್ಲದೆ, 12ನೇ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಿರುವ ಯೇಸುವಿನ ಜನನವು ಈಗಾಗಲೇ ಸಂಭವಿಸಿದ್ದಂಥ ಒಂದು ಘಟನೆಯಾಗಿತ್ತೇ, ಹೊರತು ಭವಿಷ್ಯದಲ್ಲಿ ಸಂಭವಿಸಬೇಕಾಗಿರುವ ಒಂದು ಕಾರ್ಯವಾಗಿರಲಿಲ್ಲ.

ನಾವು ಕೇವಲ "ನಡೆಯುತ್ತಿರುವವುಗಳನ್ನು" ನೋಡುವ ಮೂಲಕವಷ್ಟೇ ಸಂಗತಿಗಳು ಹೇಗಿರುತ್ತವೆಂಬುದರ ನಿಜಸ್ಥಿತಿಯು ಹೇಗಿರುತ್ತದೆಂದು ಹೇಳಲು ಸಾಧ್ಯವಿಲ್ಲ; ನಾವು "ಇವುಗಳ ಬಳಿಕ ಆಗಬೇಕಾದವುಗಳನ್ನು" *ಸಹ* ನೋಡಬೇಕಾಗಿರುತ್ತದೆ ಎಂಬುದಾಗಿ 19ನೇ ವಚನವು ಹೇಳುತ್ತಿದೆ ಎಂಬಂತೆ ಅರ್ಥಮಾಡಿಕೊಂಡರೆ ಉತ್ತಮವಾಗಿರುತ್ತದೆ. ಪ್ರಕಟನೆ ಪುಸ್ತಕವೆಂದರೆ ಅದೇ ಆಗಿರುತ್ತದೆ. ಈಗ ಸಧ್ಯಕ್ಕೆ ನಮ್ಮ ಪರಿಸ್ಥಿತಿಯು ಎಷ್ಟೇ ಕೆಟ್ಟದ್ದಾಗಿ ಕಂಡರೂ ಸರಿಯೇ, ಒಂದು ಉಜ್ವಲವಾದ ಭವಿಷ್ಯತ್ತು ಕಾದಿರುತ್ತದೆ. ಯೋಹಾನನ ವಾಚಕರು ಅದನ್ನು ತಿಳಿದುಕೊಳ್ಳುವ ಅಗತ್ಯವಿತ್ತು ಮತ್ತು ನಮಗೆ ಅದನ್ನು ತಿಳಿದುಕೊಳ್ಳುವದು ಅಗತ್ಯವಿರುತ್ತದೆ. "ನಿಮಗೆ ಭವಿಷ್ಯಕ್ಕಾಗಿ ಭರವಸವು ಉಂಟಾಗುವದಾದರೆ, ನಿಮಗೆ ಈಗಿನ ಸ್ಥಿತಿಯಲ್ಲಿ ಸ್ಥಿರತೆ ಸಿಕ್ಕುತ್ತದೆ."[21]

**ಆದದರಿಂದ ಬರೆ** ಎಂಬ ಮಾತುಗಳನ್ನು ಗಮನಿಸಿರಿ. ಇದಕ್ಕೆ ಮುಂಚೆ ಯೋಹಾನನಿಗೆ "ನೀನು ನೋಡುವದನ್ನು *ಪುಸ್ತಕದಲ್ಲಿ ಬರೆದು"* ಎಂದು ಹೇಳಲಾಗಿತ್ತು (ವ. 11; ಒತ್ತಿ ಹೇಳಿದ್ದು ನನ್ನದು). ಯಾವದೇ ಯುಗದಲ್ಲಿರುವ ಶಿಷ್ಯರಾಗಲಿ ಅವುಗಳನ್ನು ಓದಿ ಪ್ರೋತ್ಸಾಹವನ್ನು ಕಂಡುಕೊಳ್ಳುವಂತಾಗುವ ಹಾಗೆ ಆ ಪ್ರೋತ್ಸಾಹದ ಮಾತುಗಳನ್ನು ಶಾಶ್ವತವಾದ ರೂಪದಲ್ಲಿ ಬರೆದಿಡಬೇಕೆಂಬುದು ಕರ್ತನ ಬಯಕೆಯಾಗಿತ್ತು. G. K. Chesterton ಹೀಗೆ ಹೇಳುತ್ತಾನೆ, "ಪರಲೋಕದ ಗಂಭೀರವಾದ ಕೆಲಸವೆಂದರೆ ಸಂತೋಷ."[22] ದೇವರಿಗೆ ಸ್ತೋತ್ರ, ನಾವೇನು ತಿಳಿದುಕೊಳ್ಳುವ ಅಗತ್ಯವಿದೆ ಎಂದು ಆತನು ಬಲ್ಲವನಾಗಿದ್ದಾನೆ-ಮತ್ತು ಅದನ್ನು ಪ್ರಕಟನೆ ಎಂಬ ಪುಸ್ತಕದಲ್ಲಿ ನಮಗೋಸ್ಕರ ಸಂರಕ್ಷಿಸಿ ಇಟ್ಟಿರುತ್ತಾನೆ.

**ವಚನ 20.** ಮೊದಲನೆಯ ದರ್ಶನಕ್ಕೆ ಸಂಬಂಧಿಸಿದ ಒಂದು ವಚನವು ಮಾತ್ರವೇ ಬಾಕಿಯಿರುತ್ತದೆ, ಅದು ಕರ್ತನಿಂದ ಕೊಡಲ್ಪಟ್ಟಿರುವ ಒಂದು ವಿವರಣೆ: **ನನ್ನ ಬಲಗೈಯಲ್ಲಿ ನೀನು ಕಂಡ ಏಳು ನಕ್ಷತ್ರಗಳು ಮತ್ತು ಏಳು ದೀಪಸ್ತಂಭಗಳ ಗೂಢಾರ್ಥವನ್ನು ವಿವರಿಸುತ್ತೇನೆ – ಆ ಏಳು ನಕ್ಷತ್ರಗಳು ಅಂದರೆ ಆ ಏಳು ಸಭೆಗಳ ದೂತರು; ಆ ಏಳು ದೀಪಸ್ತಂಭಗಳು ಅಂದರೆ ಆ ಏಳು ಸಭೆಗಳು. ಗೂಢಾರ್ಥ** ಎಂಬುದನ್ನು ಅನುವಾದಿಸಿರುವ μυστήριον (*mustērion*) ಎಂಬ ಗ್ರೀಕ್ ಪದದ ಅರ್ಥವು "ರಹಸ್ಯಗಳು" ಅಥವಾ "ತಿಳಿಯಲಾಗದವುಗಳು"

ಎಂದಾಗಿರುವದಿಲ್ಲ. ಬದಲಾಗಿ, ಅದು ಹೊಸ ಒಡಂಬಡಿಕೆಯುದ್ದಕ್ಕೂ ಗತಕಾಲದಲ್ಲಿ ಮರೆಯಾಗಿದ್ದಂಥ, ಆದರೆ *ಈಗ* ಪ್ರಕಟಗೊಳಿಸಲ್ಪಟ್ಟ ಸಂಗತಿಯನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುವ ಪದವಾಗಿದೆ. (ಕೆಲವು ಉದಾಹರಣೆಗಳಿಗಾಗಿ, ನೋಡಿರಿ ಮಾರ್ಕ 4:11; ರೋಮಾ 16:25; 1 ಕೊರಿಂಥ 15:51; ಎಫೆಸ 3:3, 4.) Homer Haileyನು ಈ ವಿಷಯವನ್ನು ಗಮನಕ್ಕೆ ತರುತ್ತಾನೆ:

> ಈ ಪದವು ಮನುಷ್ಯನಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ್ದೆಂಬ ಸೂಚ್ಯಾರ್ಥವನ್ನು ಕೊಡುವದಿಲ್ಲ, ಆದರೆ ಅಪೊಸ್ತಲರು ಹಾಗೂ ಪ್ರವಾದಿಗಳ ಮೂಲಕವಾಗಿ ಪವಿತ್ರಾತ್ಮನು ಉಪದೇಶ ನೀಡುವವರಿಗೆ ಪ್ರಕಟಗೊಳಿಸಲ್ಪಟ್ಟಾಗ ಮಾತ್ರವೇ ಅರ್ಥಮಾಡಿಕೊಳ್ಳತಕ್ಕ ಸಂಗತಿಯನ್ನು ಸೂಚಿಸುತ್ತದೆ. ಯೋಹಾನನು ಮತ್ತು ಆತನು ಬರೆಯುತ್ತಿರುವವರಿಗೆ ತಾವು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲದಿರುವಂಥ ಕಾರ್ಯವೊಂದರ ಬಗ್ಗೆ ಉಪದೇಶ ನೀಡಲ್ಪಡಲಿದ್ದರು.[23]

ಈಗಾಗಲೇ ಗಮನಿಸಿರುವ ಪ್ರಾಕಾರ, ಅನೇಕರು **ಏಳು ನಕ್ಷತ್ರಗಳು ಅಂದರೆ ಆ ಏಳು ಸಭೆಗಳ ದೂತರು** ಎಂಬ ಯೇಸುವಿನ ವಿವರಣೆಯನ್ನು ಅರ್ಥಮಾಡಿಕೊಳ್ಳಲು ಕಷ್ಟ ಪಡುತ್ತಾರೆ. ಏಳು "ದೂತರು" ಯಾರು ಅಥವಾ ಏನು ಎಂಬುದು ನಮಗೆ ನಿಖರವಾಗಿ ತಿಳಿಯದು (ವ. 16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಏಳು ಸಭೆಗಳು ದೀಪಗಳಾಗಿರಲಿಲ್ಲ, ಆದರೆ ದೀಪಸ್ತಂಭಗಳಾಗಿದ್ದವು-ದೀಪಗಳು ಇಡಲ್ಪಡುವಂಥಹ ಕಂಬದ ಪೀಠ ಆಗಿದ್ದವು (ನೋಡಿರಿ ಮತ್ತಾಯ 5:15). ಯೇಸು ಸ್ವತಃ ಬೆಳಕಾಗಿದ್ದಾನೆ (ಯೋಹಾನ 8:12). ಕ್ರೈಸ್ತರು ಆ ಬೆಳಕನ್ನು ಪ್ರತಿಫಲಿಸುವವರಾಗಿದ್ದಾರೆ (ಮತ್ತಾಯ 5:14-16; ಫಿಲಿಪ್ಪಿ 2:15), ಮತ್ತು ಸಭೆಯು ಎಲ್ಲರಿಗೂ ಕಾಣಿಸುವಂತೆ ಆ ಬೆಳಕನ್ನು ಎತ್ತಿ ಹಿಡಿಯಬೇಕಾಗಿರುತ್ತದೆ (ಎಫೆಸ 3:21).

## ಅನ್ವಯಿಸುವಿಕೆ

### ದಾಸತ್ವಕ್ಕೊಳಗಾದ ಇಸ್ರಾಯೇಲ್ಯರು ಮತ್ತು ಹಿಂಸೆಗೊಳಗಾದ ಕ್ರೈಸ್ತರು (ಅಧ್ಯಾಯ 1)

1ನೇ ಅಧ್ಯಾಯದಲ್ಲಿ ಆರಂಭಿಕ ಹೇಳಿಕೆಗಳಿಗೆ ಸಂಬಂಧಿಸಿದಂತೆ, ಐಗುಪ್ತದಲ್ಲಿದ್ದ ಇಸ್ರಾಯೇಲ್ಯರ ಮೊರೆಗಳಿಗೆ ದೇವರ ಪ್ರತಿಕ್ರಿಯೆಗಳ ಜೊತೆಗೆ ಹಿಂಸೆಗೊಳಪಟ್ಟ ಪ್ರಥಮ ಶತಮಾನದ ಕ್ರೈಸ್ತರಿಗಾಗಿ ತೋರಿದ ಕಾಳಜಿಯ ಜೊತೆಯಲ್ಲಿ ಹೋಲಿಸಿ ನೋಡುವದಕ್ಕೆ ನೀವು ಒಂದು ನಕ್ಷೆಯನ್ನು ಸಿದ್ಧಪಡಿಸಲು ಬಯಸಬಹುದು. ಆ ನಕ್ಷೆಯು ಈ ರೀತಿಯಲ್ಲಿ ಆರಂಭಗೊಳ್ಳಬಹುದಾಗಿದೆ:

| ಇಸ್ರಾಯೇಲ್ಯರು | ಪ್ರಥಮ ಶತಮಾನದ ಕ್ರೈಸ್ತರು |
|---|---|
| ಐಗುಪ್ತದಲ್ಲಿ ದಾಸರು | ರೋಮನ್ನರಿಂದ ಹಿಂಸಿಸಲ್ಪಟ್ಟರು |
| ದೇವರಿಗೆ ಮೊರೆಯಿಟ್ಟರು | ದೇವರಿಗೆ ಮೊರೆಯಿಟ್ಟರು |
| ದೇವರು ಆಲಿಸಿದನು | ದೇವರು ಆಲಿಸಿದನು |
| ದೇವರು ಮೋಶೆಯೊಂದಿಗೆ ಮಾತಾಡಿದನು | ದೇವರು ಯೋಹಾನನೊಂದಿಗೆ ಮಾತಾಡಿದನು |
| ಅರಣ್ಯ | ಪತ್ಮೊಸ್ |
| ಒಬ್ಬ ದೂತನು | ಒಬ್ಬ ದೂತನು |
| ಒಂದು ಉರಿಯುವ ಪೊದೆ | ಮಹಿಮೆಗೊಂಡ ಕರ್ತನು |
| ದೇವರು ಬಿಡುಗಡೆಯನ್ನು ವಾಗ್ದಾನ ಮಾಡುತ್ತಾನೆ | ದೇವರು ಬಿಡುಗಡೆಯನ್ನು ವಾಗ್ದಾನ ಮಾಡಿದನು |

ನೀವು ನಿಮಗೆ ಬಯಸುವಷ್ಟು ದೂರದ ವರೆಗೆ ಹಘಲಿಕೆಯನ್ನು ಮುಂದುವರೆಸಬಹುದು. ಅಲ್ಲದೆ ನೀವು ಇಂದಿಗೂ ನಮಗೆ ಬಾಧೆಯುಂಡಾದಾಗ ದೇವರು *ಈಗಲೂ* ನಮ್ಮನ್ನು ಆಲಿಸುತ್ತಾನೆ ಮತ್ತು ಪ್ರತ್ಯುತ್ತರ ನೀಡುವನೆಂಬುದನ್ನು ತೋರಿಸುವದಕ್ಕೆ "ಇಂದಿನ ಕ್ರೈಸ್ತರು" ಎಂಬ ಶಿರ್ಷಿಕೆಯಾಗಿ ಮೂರನೆಯ ಅಂಕಣವನ್ನು ಸೇರ್ಪಡೆಗೊಳಿಸಬಹುದು.

ಇಸ್ರಾಯೇಲ್ಯರು ಹಾಗೂ ಹಿಂಸಿಸಲ್ಪಟ್ಟ ಕ್ರೈಸ್ತರ ನಡುವೆ ಇನ್ನು ಹಲವರು ಹೋಲಿಕೆಗಳನ್ನು ಪ್ರಸ್ತಾಪಿಸಬಹುದಾಗಿದೆ. ಉದಾಹರಣೆಗೆ, ಸಿನಾಯ್ ಪರ್ವತದಲ್ಲಿ (ವಿಮೋಚನಕಾಂಡ 19:16, 19) ಮತ್ತು ಪತ್ಮೊಸ್ ದ್ವೀಪದಲ್ಲಿ (ಪ್ರಕಟನೆ 1:10) ಗಮನವನ್ನು ಸೆಳೆಯುವದಕ್ಕೆ ತುತೂರಿಯಂತಿರುವ ಧ್ವನಿಯೊಂದನ್ನು ಬಳಸಲಾಯಿತೆಂಬುದನ್ನು ಗಮನಿಸಿರಿ. ಅಲ್ಲದೆ Domitianನ ರೀತಿಯಲ್ಲಿಯೇ, ಫರೋಹನು ದೇವರಂತೆ ಪೂಜಿಸಲ್ಪಡುತ್ತಿದ್ದನು ಮತ್ತು ವಿಮೋಚನಕಾಂಡ ಕಥೆಯು ಬಿಳಾಮನೆಂಬ ಒಬ್ಬ ಸುಳ್ಳು ಪ್ರವಾದಿಯನ್ನು ಹೊಂದಿತ್ತು, ಅದೇ ರೀತಿಯಲ್ಲಿ ಪ್ರಕಟನೆಯಲ್ಲಿನ ಕಥೆಯು ನಮಗೆ ಒಬ್ಬ ಸುಳ್ಳು ಪ್ರವಾದಿಯ ಕುರಿತು ಹೇಳುತ್ತದೆಂಬುದನ್ನು ಸಹ ಗಮನಿಸತಕ್ಕದ್ದು. ದೇವರು ಮೋಶೆಯನ್ನು ಮತ್ತು ಆರೋನನ್ನು ಫರೋಹನ ಬಳಿಗೆ ಕಳುಹಿಸಿ ಕೊಟ್ಟ ಪ್ರಕಾರವೇ, ನಾವು "ಇಷ್ಟ ಬಂದಾಗಲೆಲ್ಲಾ ನೀರು ರಕ್ತವಾಗುವಂತೆ ಮಾಡುವದಕ್ಕೂ ಸಲಕ ವಿಧವಾದ ಉಪದ್ರವಗಳಿಂದ ಭೂಮಿಯನ್ನು ಪೀಡಿಸುವದಕ್ಕೂ ಅಧಿಕಾರ" ಹೊಂದಿರುವ "ಇಬ್ಬರು ಸಾಕ್ಷಿಗಳ" ಕುರಿತು ಓದುತ್ತೇವೆ (11:3, 6). ಅರಣ್ಯದಲ್ಲಿ ಇಸ್ರಾಯೇಲ್ಯರನ್ನು ದೇವರು ಪೋಷಣೆ ಮಾಡಿದ ಪ್ರಕಾರವೇ (ವಿಮೋಚನಕಾಂಡ 13:18), ಸಭೆಗೋಸ್ಕರ "ದೇವರು ಸ್ಥಳವನ್ನು ಸಿದ್ಧ ಮಾಡಿದ್ದನು" ಎಂಬುದಾಗಿ ಓದುತ್ತೇವೆ. ಪ್ರಕಟನೆ ಪುಸ್ತಕವು ಈ ಸ್ಥಳವನ್ನು "ಅರಣ್ಯ" ಎಂದು ಕರೆಯುತ್ತದೆ (12:6, 14). ಇಸ್ರಾಯೇಲ್ಯರು "ಹಾಲೂ ಜೇನೂ ಹರಿಯುವಂಥ" ದೇಶಕ್ಕೆ (ವಿಮೋಚನಕಾಂಡ 3:17) ಪ್ರಯಾಣಿಸುತ್ತಿದ್ದ ಪ್ರಕಾರವೇ, ನಾವು "ಜೀವಜಲದ ನದಿ" ಇರುವ ಪಟ್ಟಣಕ್ಕೆ ಮತ್ತು "ಜೀವವೃಕ್ಷ" ಇರುವ ದೇಶಕ್ಕೆ ಪ್ರಯಾಣಿಸುತ್ತಿದ್ದೇವೆ (22:1, 2)-ಅದು ದೇವರು "ಕಣ್ಣೀರನ್ನೆಲ್ಲಾ ಒರೆಸಿಬಿಡುವ . . . ಇನ್ನು ಮರಣವಿರದ" ಸ್ಥಳವಾಗಿರುವದು (21:4).

## "ಶಾಸ್ತ್ರದ ಮೇಲಿನ ಕಡೇ ಮಾತು" (1:1-8)

1:1-8ರ ಮೇಲೆ ಒಂದು ಪ್ರಸಂಗವನ್ನು ಅಭಿವೃದ್ಧಿಗೊಳಿಸಬಹುದು: (1) ಶೀರ್ಷಿಕೆ (ವಚನಗಳು 1-3); (2) ವಂದನೆ ತಿಳಿಸುವಿಕೆ (ವಚನಗಳು 4-7); (3) ಮುದ್ರೆ (ವ. 8). ನೀವು Eugene Petersonನ ಕೊಟ್ಟಿರುವ ಬಿರುದನ್ನು ಇಷ್ಟ ಪಡಬಹುದು: "ಶಾಸ್ತ್ರದ ಮೇಲಿನ ಕಡೇ ಮಾತು."[24] ನೀವು ಪ್ರಕಟನೆ ಪುಸ್ತಕವು ಒಂದು ಪರಿಚಯ ಪತ್ರದೊಂದಿಗೆ ಅಂಚೆಯ ಮೂಲಕ ಸ್ವೀಕರಿಸಿಕೊಂಡ ಒಂದು ಹಸ್ತಪ್ರತಿ ಎಂದು ಅಭಿಪ್ರಾಯ ಪಡಬಹುದು. ಲಕೋಟೆಯ ಮೇಲ್ಗಡೆಯಲ್ಲಿ ಪೊಟ್ಟಣದಲ್ಲಿರುವ ಅಂಶಗಳು "ಮುದ್ರೆ ಹಾಕಲ್ಪಟ್ಟಿವೆ" ಎಂದಿರುತ್ತದೆ (ವಚನಗಳು 1-3). ನೀವು ಲಕೊಟೆಯನ್ನು ತೆರೆದು ಪತ್ರವನ್ನು ಓದುವಿರಿ (ವಚನಗಳು 4-7), ಅದು ಹಸ್ತಪ್ರತಿಯಲ್ಲಿರುವ ವಾಗ್ದಾನಗಳ ಕುರಿತು ತಿಳಿಸುವದಾಗಿದೆ. ಪರಿಚಯ ಪತ್ರದ ಕೆಳಗಡೆಯಲ್ಲಿ ಒಂದು ನೋಟರಿ ಮುದ್ರೆಯಿರುತ್ತದೆ, ಪತ್ರವು ಪ್ರಮಾಣಿಕೃತವಾದದ್ದೆಂಬುದನ್ನು ಖಾತ್ರಿ ಪಡಿಸುವದಾಗಿದೆ (ವ. 8).

1:1-8ರಲ್ಲಿನ ಚಿಕ್ಕ ವಿಭಾಗಗಳು ಪ್ರಸಂಗಗಳಿಗೆ ಒಂದು ಆರಂಭಿಕ ಸ್ಥಾನವನ್ನು ಒದಗಿಸಬಲ್ಲವು: ಉದಾಹರಣೆಗೆ, 3ನೇ ವಚನವು ಬೈಬಲನ್ನು ಅಧ್ಯಯನ ಮಾಡುವದರ ಮತ್ತು ವಿಧೇಯವಾಗುವದರ ಪ್ರಾಮುಖ್ಯತೆಯ ಮೇಲೆ ಒಂದು ಪಾಠಕ್ಕೆ ತಳಹದಿಯಾಗಬಲ್ಲದು.

## ಕ್ರೈಸ್ತರಿಗೆ ಆದರಣೆ (1:1-8)

ಪ್ರಕಟನೆ ಪುಸ್ತಕದ ಮೊದಲ ಎಂಟು ವಚನಗಳು-ನಾವು ಅಲ್ಲಿರುವ ಸತ್ಯಗಳನ್ನು *ನಂಬುವದಾದರೆ*-ನಮಗೆ ಉಂಟು ಮಾಡಬಹುದಾದ *ಆದರಣೆ*ಯು ಕುರಿತು ಒತ್ತಿ ಹೇಳುವದು ಪ್ರಾಮುಖ್ಯತೆವಾಗಿರುತ್ತದೆ. ಇಬ್ಬರು ಬಾಲಕರು ಪೂರ್ವದಿಕ್ಕಿನಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಮವಾಗುವ ವಿಷಯದ ಬಗ್ಗೆ ಚರ್ಚಿಸುತ್ತಿದ್ದರು. ಒಬ್ಬ ಬಾಲಕನು ಹೀಗೆ ಹೇಳಿದನು, "ನಿಜವಾಗಿಯೂ ಸೂರ್ಯನು ಚಲಿಸುವದೇ ಇಲ್ಲ ಎಂದು ನನ್ನ ತಂದೆ ಹೇಳುತ್ತಾನೆ. ಭೂಮಿಯೇ ತಿರುಗುತ್ತದೆ, ಮತ್ತು ಸೂರ್ಯನು ಸುತ್ತುತ್ತಿದ್ದಾನೇನೋ ಎಂದು *ಕಾಣಿಸುತ್ತದಷ್ಟೆ*." ಇನ್ನೊಬ್ಬ ಬಾಲಕನು ಅದರ ಬಗ್ಗೆ ಸ್ವಲ್ಪ ಹೊತ್ತು ಆಲೋಚಿಸಿದನು ಮತ್ತು ಬಳಿಕ ಹೀಗೆ ಘೋಷಿಸಿದನು, "ನಾನು ನನ್ನ ಕಣ್ಣುಗಳನ್ನು ನಂಬುವವನಾಗಿದ್ದೇನೆ." ಮೊದಲನೆಯವನು ಮೌನವಾಗಿ ಆದರೆ ಧೃಢವಾಗಿ ಪ್ರತ್ಯುತ್ತರ ನೀಡಿದನು, "ನಾನು *ನನ್ನ ತಂದೆಯನ್ನು ನಂಬುವವನಾಗಿದ್ದೇನೆ*." ನಾವು ಮೊದಲ ಶತಮಾನದಲ್ಲಿ ಜೀವಿಸುವವರಾಗಿದ್ದು ನಮ್ಮ ಕಣ್ಣುಗಳು ಕಂಡ ಸಾಕ್ಷಿಯನ್ನು ನಂಬಿದ್ದರೆ, ಕ್ರೈಸ್ತತ್ವವು ನಾಶಗೊಳ್ಳುತ್ತದೆ ಎಂಬ ನಿರ್ಣಯಕ್ಕೆ ಬಂದಿರುತ್ತಿದ್ದೆವು. ದೇವರಿಗೆ ಸ್ತೋತ್ರ, ಅನೇಕ ಕ್ರೈಸ್ತರು ತಮ್ಮ ಕಣ್ಣುಗಳನ್ನು ನಂಬುವದಕ್ಕಿಂತಲೂ ತಮ್ಮ ತಂದೆಯನ್ನು ನಂಬಿದರು. ಅವರು ನಂಬಿಗಸ್ತರಾಗಿ ನಿಲ್ಲುವದಾದರೆ ಅವರಿಗೆ ಜಯವಾಗುವದು ಎಂಬದಾಗಿ ಅವರ ತಂದೆಯು ಹೇಳಿದ್ದನು. ಅವರು ಆ ವಾಗ್ದಾನವನ್ನು ಹಿಡಿದುಕೊಂಡರು, ಮತ್ತು ಅವರು ಜಯಶಾಲಿಗಳಾದರು. ಕಾಲದಿಂದ ಕಾಲಕ್ಕೆ, ನೀವು ಸಹ ಸೋಲಿಸಲ್ಪಟ್ಟಂತೆಯೈ ಏಕಾಂಗಿಯಾಗಿರುವಂತೆಯೂ ಭಾವಿಸಿಕೊಳ್ಳಬಹುದು. ಆ ರೀತಿಯಾಗುವದಾದರೆ, *ದೇವರು ಕಷ್ಟದಲ್ಲಿ ವಿಶೇಷ ಸಹಾಯಕನಾಗಿದ್ದಾನೆ* ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ (ಕಿರ್ತನೆ 46:1-7). ದೇವರು ಪ್ರಥಮ ಶತಮಾನದಲ್ಲಿ ಕಷ್ಟಕ್ಕೊಳಗಾಗಿದ್ದ ಕ್ರೈಸ್ತರಿಗೆ ಸಹಾಯ ಮಾಡುವದಕ್ಕೆ *ಸಿದ್ಧನಾಗಿದ್ದನು*. ಆತನು ನಿಮ್ಮನ್ನು ಆಶೀರ್ವದಿಸುವದಕ್ಕೆ ಸಹ ಸಿದ್ಧನಿದ್ದಾನೆ. ನಾವು ಆತನನ್ನು ನಂಬಿ ಆತನಿಗೆ ನಂಬಿಗಸ್ತರಾಗಿರುವಂತೆ ದೇವರು ನಮಗೆ ಸಹಾಯ ಮಾಡಲಿ.

## ನಂಬಿಗಸ್ತಿಕೆ (1:3, 9)

ಪ್ರಕಟನೆ ವಾಗ್ದಾನಗಳನ್ನು ಪಡೆದುಕೊಳ್ಳಬೇಕಾದರೆ ಅವರು ನಂಬಿಗಸ್ತರಾಗಿ ಉಳಿಯತಕ್ಕದ್ದೆಂದು ಯೋಹಾನನು ಬಳಲಿ ಹೋಗಿದ್ದ ಕ್ರೈಸ್ತರಿಗೆ ಹೇಳಿದನು. ಆ ಸಂದೇಶವು ಈ ದಿನದಲ್ಲಿ ಸಹ ಅಗತ್ಯವಿರುತ್ತದೆ. ನಮ್ಮ ದಾರಿಯಲ್ಲಿ ಕಷ್ಟಗಳು ಬರುವಾಗ, ನಮ್ಮ ಚಿತ್ತಗಳು ದೇವರ ಚಿತ್ತಕ್ಕೆ ಸಮರ್ಪಿಸಿಕೊಳ್ಳುವ ಹೊರತು ಆತನು ನಮ್ಮ ಜೀವಿತಗಳಲ್ಲಿ ಕೆಲಸ ಮಾಡಲಾರನು. ಯೇಸು ಹೀಗೆ ಹೇಳಿದನು, "ನೀವು ಇದನ್ನು ತಿಳುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು" (ಯೋಹಾನ 13:17; ನೋಡಿರಿ ಯಾಕೋಬ 1:22). ಒಂದು ಪ್ರಸಿದ್ಧವಾದ, ಲೌಕಿಕ ಹಾಡು ಅನೇಕರ ತತ್ತ್ವಜ್ಞಾನವನ್ನು ಪ್ರತಿಬಿಂಬಿಸುತ್ತದೆ: "ನಾನು ಅದನ್ನು *ನನ್ನ ಇಷ್ಟದಂತೆ* ಮಾಡಿದೆನು." ನಾವು ದೇವರಿಂದ ಆಶೀರ್ವದಿಸಲ್ಪಡುವದಾದರೆ, ನಾವು "*ನಿನ್ನಿಷ್ಟ*ದಂತೆಯೇ ಮಾಡು, ಕರ್ತನೇ" ಎಂಬ ಸುಂದರವಾದ ಸಂಕೀರ್ತನೆಯಲ್ಲಿ ವ್ಯಕ್ತಪಡಿಸಲಾಗಿರುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

## ಪ್ರಕಟನೆ ಪುಸ್ತಕದಲ್ಲಿರುವ ಏಳು ಧನ್ಯನುಡಿಗಳು (1:3)

1:3ರಲ್ಲಿ ಸಿಕ್ಕುವ ಧನ್ಯನುಡಿಯು ಮೊದಲ್ಗೊಂಡು, ಪ್ರಕಟನೆ ಪುಸ್ತಕದಲ್ಲಿರುವ ಏಳು ಧನ್ಯನುಡಿಗಳ ಮೇಲೆ ಅನೇಕ ಪ್ರಸಂಗಗಳು ಬೋಧಿಸಲ್ಪಟ್ಟಿರುತ್ತವೆ. ಉಳಿದ ಧನ್ಯನುಡಿಗಳು

14:13; 16:15; 19:9; 20:6; 22:7, 14ರಲ್ಲಿ ಸಿಕ್ಕುತ್ತವೆ. "ಧನ್ಯನುಡಿ" ಎಂಬ ಪದವು ಲ್ಯಾಟಿನ್ ಭಾಷೆಯಲ್ಲಿ "ಸಂತೋಷ" ಎಂಬುದಕ್ಕಿರುವ ಪದದಿಂದ ಬಂದಿರುತ್ತದೆ. ಅದು ಮತ್ತಾಯ 5:3-11ರಂತಹ "ಧನ್ಯರು" ಎಂಬ ಮಾತಿನಿಂದ ಆರಂಭಗೊಳ್ಳುವ ವಾಕ್ಯಭಾಗಗಳನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು. "ಧನ್ಯನು" ಎಂದು ಅನುವಾದಿಸಲ್ಪಟ್ಟಿರುವ μακάριος (*makarios*) ಎಂಬ ಗ್ರೀಕ್ ಪದದ ಅರ್ಥವು "ಸಂತೋಷ" - ಆದರೆ ಅದು "'ಸಂತೋಷ' ಎಂಬುದಕ್ಕಿಂತಲೂ ಅಧಿಕ ಅರ್ಥವನ್ನು ಹೊಂದಿದೆ." ಅದು ಒಬ್ಬ ವ್ಯಕ್ತಿಯನ್ನು ದೇವರು ಇಟ್ಟಿರುವ ಅನುಕೂಲಕರ ಪರಿಸ್ಥಿತಿಯನ್ನು ಬಣ್ಣಿಸುತ್ತದೆ.[25]

## ಯೇಸು ಯಾರಾಗಿದ್ದಾನೆ?[26] (1:5-8)

5ರಿಂದ 8 ವಚನಗಳಲ್ಲಿರುವ ಯೇಸುವಿನ ಬಣ್ಣನೆಯನ್ನು ಯೇಸುವಿನ ಕುರಿತಾದ ಒಂದು ಅರ್ಥಗರ್ಭಿತ ಪಾಠಕ್ಕಾಗಿ ಬಳಸಬಹುದಾಗಿದೆ. ಬಳಸಬಹುದಾದ ಆರು ಪದಗುಚ್ಛಗಳು ಇಲ್ಲಿವೆ: ನಂಬಿಗಸ್ತನು, ಪುನರುತ್ಥಾನಗೊಂಡವನು, ಆಳ್ವಿಕೆ ಮಾಡುವವನು, ಪ್ರೀತಿಸುವವನು, ಮಹಿಮೆಯುಳ್ಳವನು, ಮತ್ತು ಬರಲಿರುವವನು.

## ಕ್ರಿಸ್ತನು ನನಗೆ ಯಾವ ಅರ್ಥವನ್ನು ಹೊಂದಿದ್ದಾನೆ (1:5, 6)

*The Gates of New Life* ಎಂಬ ಪುಸ್ತಕದಲ್ಲಿ James Stewartನು ಪ್ರಕಟನೆ 1:5, 6 ವಚನಗಳಿಂದ ಆಯ್ದುಕೊಂಡ "ಕ್ರಿಸ್ತನು ನನಗೆ ಯಾವ ಅರ್ಥವನ್ನು ಹೊಂದಿದ್ದಾನೆ"[27] ಎಂಬ ಗ್ರಂಥಪಾಠವೊಂದನ್ನು ಸೇರ್ಪಡೆಗೊಳಿಸಿರುತ್ತಾನೆ. ಆತನ ಅಂಶಗಳು ಯಾವವೆಂದರೆ (1) ಆತನು "ನಮ್ಮನ್ನು ಪ್ರೀತಿಸುವವನು"; (2) ಆತನು "ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನು"; (3) ಆತನು "ನಮ್ಮನ್ನು ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದನು"; (4) "ಆತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ."

## "ಮನುಷ್ಯಕುಮಾರನಂತೆ ಇರುವವನು" (1:9-20)

ಪ್ರಕಟನೆ 1:9–20ನ್ನು ಓದಿದ ಬಳಿಕ, ದಾನಿಯೇಲನು ಬಣ್ಣಿಸಿದ "ಮನುಷ್ಯಕುಮಾರನಂತೆ ಇರುವವನು" ಬಗ್ಗೆ ನಾವು ಇನ್ನಷ್ಟು ಅಧಿಕವಾದ ಪ್ರಶಂಸೆಯನ್ನು ಹೊಂದಿರತಕ್ಕದ್ದು. ಪ್ರಕಟನೆ ಪುಸ್ತಕದಲ್ಲಿ ಯೇಸುವಿನ ಕುರಿತಾದ ಇತರ ಬಣ್ಣನೆಗಳು ಕಾಣಿಸಿಕೊಳ್ಳುತ್ತವೆ (5:6, 7; 12:1–6; 14:1, 14; 19:16; 22:12–17), ಆದರೆ ಯಾವದೂ 1ನೇ ಅಧ್ಯಾಯದಲ್ಲಿನ ದರ್ಶನದ ರೀತಿಯಲ್ಲಿ ಸವಿಸ್ತಾರವಾದದ್ದಾಗಿರುವದಿಲ್ಲ, ಅದು ಆತನ ಘನಗಾಂಭೀರ್ಯತೆಯನ್ನು, ಆತನ ಶೋಭಾಯಮಾನತೆಯನ್ನು, ಮತ್ತು ಆತನ ಶಕ್ತಿಯನ್ನು ತೋರಿಸುತ್ತದೆ.

## ಪೂಜ್ಯಭಾವನೆ ಮತ್ತು ಭಯಭಕ್ತಿ (1:9-20)

Eugene Petersonನು ಪ್ರಕಟನೆ ಪುಸ್ತಕವನ್ನು "ಕ್ರಿಸ್ತನ ಕುರಿತಾದ ಕಡೇ ಮಾತು" ಎಂದು ಕರೆದನು ಮತ್ತು "ಕಡೇ ಮಾತು . . . ಮನುಷ್ಯಕುಮಾರನ ಮಹಿಮಕರವಾದ, ಹಾಗೂ ದಾನಿಯೇಲನ ದರ್ಶನ" ಆಗಿರುತ್ತದೆ ಎಂದು ಗಮನಕ್ಕೆ ತರುತ್ತಾನೆ.[28] ಇಂದು, ಬಹಳಷ್ಟು ಮಂದಿಗೆ ಗೋದಲಿಯೊಂದರಲ್ಲಿ ಹುಟ್ಟಿದ ಮಗುವು ಬೆಳೆದು ಒಬ್ಬ ಮಹಾನ್ ಬೋಧಕನು ಮತ್ತು ಗುಣಪಡಿಸುವವನು ಆಗಿದ್ದು ಗೊತ್ತಿದೆ. ಶಿಲುಬೆಯ ಮೇಲೆ ಮರಣಿಸಿ ಮತ್ತು ಬಳಿಕ ಪುನರುತ್ಥಾನಗೊಳಿಸಲ್ಪಟ್ಟ ವ್ಯಕ್ತಿಯ ಕುರಿತು ಅನೇಕರು ಕೇಳಿದ್ದಾರೆ. ಹೇಗೂ, ಅತ್ಯಂಥ ಕೆಲವೇ

ಕೆಲವು ಜನರಿಗೆ ಮಾತ್ರವೇ "ಭಾಗ್ಯವಂತನಾದ ಏಕಾಧಿಪತಿಯು ರಾಜಾಧಿ ರಾಜನೂ ಕರ್ತರ ಕರ್ತನೂ" ಆಗಿರುವವನ ಪರಿಚಯವಿರುತ್ತದೆ (1 ತಿಮೊಥೆ 6:15; ನೋಡಿರಿ ಪ್ರಕಟನೆ 17:14; 19:16).

ನಾವು ದೇವರ ಪ್ರಸನ್ನತೆಯೊಳಗೆ ಬರುವಾಗ, ನಾವು ಅತಿರೇಕಗಳಿಂದ ದೂರವಿರಬೇಕು. ಇನ್ನೊಂದೆಡೆಯಲ್ಲಿ, ನಾವು ಭಯದಿಂದ ನಿತ್ರಾಣಗೊಳ್ಳುವದಾದರೆ, ಆತನನ್ನು "ತಂದೆ" ಎಂದು ಕರೆಯುವ ಮಕ್ಕಳು ಎಷ್ಟು ನಿಕಟವಾದವರೆಂಬುದನ್ನು ಎಂದಿಗೂ ತಿಳಿದುಕೊಳ್ಳಲಾರೆವು (ಮತ್ತಾಯ 6:9). ಇನ್ನೊಂದೆಡೆಯಲ್ಲಿ, ನಾವು ಅತಿಯಾದ ಸಲುಗೆಯನ್ನು ಹೊಂದಿದ್ದರೆ, ಆತನಿಗೆ ಯೋಗ್ಯವಾದಂಥ ಗೌರವವನ್ನು ಮತ್ತು ಪೂಜ್ಯಭಾವನೆಯನ್ನು ಸಲ್ಲಿಸುವದಕ್ಕೆ ವಿಫಲರಾಗುವೆವು. ಇಬ್ರಿಯ ಪುಸ್ತಕದ ಲೇಖಕನು ಹೀಗೆ ಹೇಳಿದನು, "ಆದಕಾರಣ . . . ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು *ಭಕ್ತಿಯಿಂದಲೂ ಭಯದಿಂದಲೂ* ಮಾಡೋಣ" (ಇಬ್ರಿಯ 12:28; ಒತ್ತಿ ಹೇಳಿದ್ದು ನನ್ನದು). Warren Wiersbeನು ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ:

> ಇಂದು ಸಭೆಗೆ ಅಗತ್ಯವಿರುವಂಥದ್ದು ಕ್ರಿಸ್ತನ ಹಾಗೂ ಆತನ ಮಹಿಮೆಯ ಕುರಿತಾದ ಜಾಗೃತಿಯೇ. ನಾವು ಆತನನ್ನು "ಉನ್ನತೋನ್ನತ ಸಿಂಹಾಸನಾರೂಢನಾಗಿರುವದನ್ನು" ಕಾಣಬೇಕಾಗಿದೆ (ಯೆಶಾಯ 6:1). ಇಂದು ನಮ್ಮ ಸಭೆಗಳಲ್ಲಿ ಅಪಾಯಕರವಾಗಿ ಆರಾಧನೆ ಹಾಗೂ ಭಯದ ಅನುಪಸ್ಥಿತಿಯು ಇರುತ್ತದೆ. ನಾವು ಮುರಿಯಲ್ಪಟ್ಟು ಆತನ ಪಾದಗಳ ಮುಂದೆ ಬೀಳುವದರ ಬದಲಾಗಿ ನಮ್ಮ ಪಾದಗಳ ಮೇಲೆ ನಿಂತಿರುವ ಬಗ್ಗೆ ಹೆಚ್ಚಳಪಟ್ಟುಕೊಳ್ಳುತ್ತಿದ್ದೇವೆ.[29]

ಕೆಲವರು ದುಷ್ಟತನವನ್ನು ದಂಡಿಸುವ ಶಕ್ತಿಶಾಲಿಯಾದ ಕರ್ತನು ಎಂಬ ಭಾವನೆಯ ವಿಷಯದಲ್ಲಿ ಮುಜುಗರ ಪಡುತ್ತಾರೆ. ಅವರು ಯೆಹೂದಿ ಬಡಗಿಯನ್ನು, ಕಾಂತಿಹೀನ ಗಲಿಲಾಯದವನನ್ನು, ಸೌಮ್ಯ ಕುರುಬನನ್ನು ಹೆಚ್ಚು ಇಷ್ಟ ಪಡುತ್ತಾರೆ. ಹೇಗೂ, ನಿಮ್ಮ ದಾರಿಯಲ್ಲಿ ಕೆಟ್ಟದ್ದು ಸಂಭವಿಸುವಾಗ-ಲೋಕವು ನಿಮಗೆ ವಿರುದ್ಧ ತಿರುಗಿಕೊಳ್ಳುವಾಗ ಮತ್ತು ನಿರೀಕ್ಷೆಯು ಕಿಟಕಿಯಿಂದ ಹೊರಗೆ ಓಡುವಾಗ-ನಿಮ್ಮ ಸಮಸ್ಯೆಗಳನ್ನು ಹಾಗೂ ಹೃದಯವೇದನೆಗಳನ್ನು ತಿಳಿದಿರುವಂಥ ಒಬ್ಬನ, ಅದರ ಬಗ್ಗೆ ಏನನ್ನಾದರೂ ಮಾಡಲು ಶಕ್ತಿಯನ್ನು ಹೊಂದಿರುವ ವ್ಯಕ್ತಿಯ ಅಗತ್ಯತೆಯು ನಿಮಗಿರುತ್ತದೆ. ನಮಗೆ ಅಗತ್ಯವಿರುವ ಆ ಒಬ್ಬ ವ್ಯಕ್ತಿಯು ಯೇಸುವೇ ಎಂದು ಪ್ರಕಟನೆ 1:9-20 ಹೇಳುತ್ತದೆ.

## ಯೇಸುವನ್ನು ಕಂಡುಕೊಳ್ಳುವದು (1:13)

ಯೇಸು ಸಭೆಗಳ ಮಧ್ಯದಲ್ಲಿ ನಡೆದಾಡುತ್ತಾನೆ. ಇಂದು, ಅನೇಕರು ಆತನನ್ನು ಸಿಕ್ಕುವ ಕಡೆಯಲ್ಲಿ ಹುಡುಕುವದನ್ನು ಬಿಟ್ಟು ಮಿಕ್ಕ ಎಲ್ಲಾ ಕಡೆಗಳಲ್ಲಿಯೂ ಹುಡುಕಾಡುತ್ತಿದ್ದಾರೆ. ಅವರು ಆತನನ್ನು ದೈವಿಕ ವರಗಳಿಂದ ಕೂಡಿದ ನಾಯಕರಲ್ಲಿ, ಮನುಷ್ಯ-ಕಲ್ಪಿತ ಅನ್ಯೋನ್ಯತೆಗಳಲ್ಲಿ, ಮತ್ತು "ನವ ಯುಗದ" ನಿಗೂಢತ್ವದಲ್ಲಿ ಆತನನ್ನು ಹುಡುಕಾಡುತ್ತಿದ್ದಾರೆ. ನೀವು ಯೇಸುವನ್ನು ಕಂಡುಕೊಳ್ಳಬೇಕೆಂದು ಬಯಸುವದಾದರೆ, ಆತನನ್ನು ಆತನ ಸಭೆಯಲ್ಲಿ ಹುಡುಕಿರಿ. ಯೇಸುವು ಇರುವ ಕಡೆಯಲ್ಲಿ ಇರಬೇಕೆಂದು ನೀವು ಬಯಸುವದಾದರೆ, ಆತನ ಜನರ ಜೊತೆಯಲ್ಲಿ ಸೇರಿ ಆತನನ್ನು ಆರಾಧಿಸಿರಿ.

## ಒಂದು ಉತ್ತಮವಾದ ನಾಳೆಯ ದಿನ (1:17-20)

ಮಹಿಮೆಗೊಂಡ ಕರ್ತನ ದರ್ಶನವು ಯೋಹಾನನ ಕಣ್ಣುಗಳಿಂದ ಮರೆಯಾಗುತ್ತಾ ಹೋದಾಗ, ಬಾಹ್ಯದಲ್ಲಿ ಎಲ್ಲವೂ ಮೊದಲಿದ್ದಂತೆಯೇ ಇತ್ತು. ಈಗಲೂ Domitianನು ಸಿಂಹಾಸನದಲ್ಲಿದ್ದನು, ವೃದ್ಧನಾದ ಅಪೊಸ್ತಲನು ಈಗಲೂ ಏಕಾಂಗಿಗೊಳಿಸಲ್ಪಟ್ಟು ಪತ್ಮೊಸ್ ದ್ವೀಪದಲ್ಲಿದ್ದನು, ಮತ್ತು ಕ್ರೈಸ್ತರು ಈಗಲೂ ಮರಣಿಸುತ್ತಿದ್ದರು-ಆದರೆ *ಯೇಸು* ಮಾತಾಡಿದ್ದನು! ಯೋಹಾನನ ಹೃದಯದಲ್ಲಿ ಎಂಥ ಬದಲಾವಣೆಯು ಸಂಭವಿಸಿರಬೇಕು. ನಿಶ್ಚಯವಾಗಿಯೂ, ಆತನ ನಿರೀಕ್ಷೆಯು ಪುನಃ ಕಿಡಿ ಹೊತ್ತಿಸಲ್ಪಟ್ಟಿತು, ಆತನ ಸಂತೋಷವು ನವೀಕರಿಸಲ್ಪಟ್ಟಿತು, ಮತ್ತು ಭವಿಷ್ಯವು ಪ್ರಕಾಶಮಾನವಾಗಿ ಕಂಡಿತು. ಪ್ರಕಟನೆ ಪುಸ್ತಕವು ದಬ್ಬಾಳಿಕೆ ಒಳಗಾದವರಿಗಾಗಿ ಬರೆಯಲ್ಪಟ್ಟಿತು, ಜೀವನದ ಕಷ್ಟಗಳಿಂದ ಸದೆಬಡಿಯಲ್ಪಟ್ಟವರಿಗಾಗಿ, ನಿರೀಕ್ಷೆಯನ್ನು ಬಿಟ್ಟು ಬಿಟ್ಟವರಿಗಾಗಿ ಬರೆಯಲ್ಪಟ್ಟಿತು. ಅದು ಹೀಗೆ ಹೇಳುತ್ತದೆ, "ಒಂದು ಉತ್ತಮವಾದ ನಾಳೆಯ ದಿನವು ಬರಲಿದೆ. ಈ ಯೋಚನೆಯನ್ನು ಹಿಡಿದುಕೊಂಡವರಾಗಿ ಇರ್ರಿ, ಮತ್ತು ದೇವರಿಗೆ ಸಮೀಪವಾಗಿ ಉಳಿದುಕೊಳ್ಳಿರಿ." ಈ ಪುಸ್ತಕವು *ನಿಮಗಾಗಿ* ಬರೆಯಲ್ಪಟ್ಟಿತು.

## ಯೇಸುವಿನ ಆತ್ಮ ಚರಿತ್ರೆ (1:17-20)

Jim Bill McInteerನು "ಯೇಸುವಿನ ಆತ್ಮ ಚರಿತ್ರೆ" ಎಂಬುದರ ಮೇಲೊಂದು ಪ್ರಸಂಗವನ್ನು ಹೊಂದಿರುತ್ತಾನೆ, ಅದು ಪ್ರಕಟನೆ 1:17-20ರ ಮೇಲೆ ಆಧಾರವಾಗಿರುತ್ತದೆ.[30] ಆತನ ಕೆಲವೊಂದು ಪ್ರಮುಖ ಅಂಶಗಳು ಹೀಗಿವೆ: (1) ಯೇಸು ತನ್ನ ಸ್ಥಾನವನ್ನು ವಹಿಸಿಕೊಳ್ಳುತ್ತಾನೆ-"ದೀಪಸ್ತಂಭಗಳ ಮಧ್ಯದಲ್ಲಿ" (ವ. 13); (2) ಯೇಸು ಭಯವನ್ನು ಓಡಿಸುತ್ತಾನೆ-"ಹೆದರಬೇಡ" (ವ. 17); (3) ಯೇಸುವು ಅಧಿಕಾರವನ್ನು ಘೋಷಿಸಿದ್ದು-"ನಾನು ಮೊದಲನೆಯವನೂ ಕಡೆಯವನೂ ಆಗಿದ್ದೇನೆ" (ವ. 17); (4) ಯೇಸುವಿನ ಅಧಿಕಾರವು ಜಯಿಸಿತು-"[ನಾನು] ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ" (ವ. 18); (5) ಯೇಸುವಿನ ಅಧಿಕಾರವು ಪುನಃ-ಒತ್ತಿಹೇಳಲ್ಪಟ್ಟಿದ್ದು-"ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ" (ವ. 18).

## ಆದರಣೆಯುಂಟು ಮಾಡುವ ಮಾತುಗಳು (1:17, 18)

ವೇದನೆಯಲ್ಲಿದ್ದ ಕ್ರೈಸ್ತರಿಗೆ ಯೇಸುವು ಹೇಳಿದ ಮಾತುಗಳು ಇಂದು ನಮಗೆ ಅಗತ್ಯವಿರುವಂಥ ಆದರಣೆಯುಂಟು ಮಾಡುವ ಮಾತುಗಳಾಗಿವೆ. ನಮ್ಮಲ್ಲಿ ಬಹಳಷ್ಟು ಮಂದಿಗೆ ಲೋಕದಲ್ಲಿರುವ ಕೆಟ್ಟತನದ ಕುರಿತಾಗಲಿ ಅಥವಾ ಪರಿಸ್ಥಿತಿಯು ಅತ್ಯಂಥ ಭಯಂಕರತೆಗೆ ಹೋಗುತ್ತಿರುವದರ ಕುರಿತಾಗಲಿ ಕೇಳಿಸಿಕೊಳ್ಳುವದು ಅಗತ್ಯವಿರುವದಿಲ್ಲ. ನಾವು ಕಣ್ಣುಗಳನ್ನು ತೆರೆದಿಡುವ ಮೂಲಕ ಅದನ್ನು ತಿಳಿದುಕೊಳ್ಳಬಹುದಾಗಿದೆ. ದೇವರು ಜೀವನದಲ್ಲಿ ಅರ್ಥವನ್ನು ಬರಮಾಡುವನು ಮತ್ತು ಎಲ್ಲವೂ ಸರಿಯಾಗಲಿದೆ ಎಂಬುದರ ಬಗ್ಗೆಯೇ ನಾವು ಕೇಳಿಸಿಕೊಳ್ಳುವ ಅಗತ್ಯವಿದೆ.

ನಾವು ಈಗಲೂ ಯೇಸುವು "ನಾನು ಮೊದಲನೆಯವನೂ ಕಡೆಯವನೂ ಜೀವಿಸುವವನೂ ಆಗಿದ್ದೇನೆ" ಎಂದು ಹೇಳುವದನ್ನು ಕೇಳಿಸಿಕೊಳ್ಳುವ ಅಗತ್ಯವಿರುತ್ತದೆ (ವಚನಗಳು 17, 18). ನಮ್ಮ ಸುತ್ತಲಿರುವ ಗೊಂದಲವು ಕೇವಲ ಕ್ಷಣಿಕವಾದದ್ದು ಮತ್ತು ಕ್ರಿಸ್ತನ ಸಹಾಯದೊಂದಿದೆ, ನಾವು ಬದುಕುಳಿಯುವೆವು ಎಂಬುದನ್ನು ನಾವು ತಿಳಿದುಕೊಳ್ಳುವ ಅಗತ್ಯವಿರುತ್ತದೆ. Jim McGuigganನು ಹೀಗೆ ಹೇಳುತ್ತಾನೆ, "ಆತನು ನಡೆದು ಹೋಗಿರದೆ ಇರುವಂಥ ಯಾವ

ದಾರಿಯಲ್ಲಿಯೂ ನಾವು ನಡೆಯುವದಿಲ್ಲ. ಆತನು ಸಂಧಿಸದೆ ಇರುವಂತಹ ಯಾವದೇ ಭಯವನ್ನಾಗಲಿ ನಾವು ಸಂಧಿಸುವದಿಲ್ಲ. ಆತನು ಈಗಾಗಲೇ ನಿರ್ಮೂಲಗೊಳಿಸದೆ ಇರುವಂತಹ ಯಾವ ವೈರಿಯೊಂದಿಗೂ ನಾವು ಹೋರಾಟವನ್ನು ಮಾಡುವದಿಲ್ಲ!"[31]

ಅಂತಿಮವಾಗಿ, ನಾವು ಕಡೇ ವೈರಿಯನ್ನು ಎದುರುಗೊಳ್ಳುವಾಗ (1 ಕೊರಿಂಥ 15:26), ಮರಣದ ಭೀತಿಯು ತನ್ನ ತಲೆಯನ್ನೆತ್ತುವಾಗ, ಯೇಸು ಹೇಳುವ ಈ ಮಾತುಗಳನ್ನು ಕೇಳಿಸಿಕೊಳ್ಳುವ ಅಗತ್ಯವಿರುತ್ತದೆ: "ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾದೆನು" (ವ. 18). Burton Coffmanನು ಶವಸಂಸ್ಕಾರದ ಆರಾಧನೆಯನ್ನು ನಡಿಸುವಾಗ, ಆತನ ಅನುಸರಿಸುವ ಪದ್ಧತಿಯೆಂದರೆ ಸಮಾಧಿಯ ಬಳಿಯಲ್ಲಿ ಪ್ರಕಟನೆ 1:17, 18 ವಚನಗಳನ್ನು ಓದುವದು ಆಗಿರುತ್ತದೆ:

> ನಾನು ಆತನನ್ನು ಕಂಡಾಗ ಸತ್ತವನ ಹಾಗೆ ಆತನ ಪಾದಗಳ ಮುಂದೆ ಬಿದ್ದೆನು. ಆತನು ತನ್ನ ಬಲಗೈಯನ್ನು ನನ್ನ ಮೇಲಿಟ್ಟು-ಹೆದರಬೇಡ, ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು [ಸಮಾಧಿಯ] ಬೀಗದ ಕೈಗಳು ನನ್ನಲ್ಲಿ ಅವೆ.[32]

## ಕರ್ತನು ನಮ್ಮನ್ನು ಬಲ್ಲವನಾಗಿದ್ದಾನೆ (1:17)

ಬೈಬಲಿನುದ್ದಕ್ಕೂ, ಕರ್ತನನ್ನು ತಿಳಿದವನು ಎಂಬುದಾಗಿ ಚಿತ್ರಿಸಲಾಗಿರುತ್ತದೆ. ಅಬ್ರಹಾಮನ ವಿಷಯವಾಗಿ, ದೇವರು ಹೀಗೆ ಹೇಳಿದನು, "ಅವನು ನನಗೆ ತಿಳಿದವನು" (ಆದಿಕಾಂಡ 18:19; KJV). ಯೆಹೋವನು "ತನ್ನ ಮರೆಹೊಕ್ಕವರನ್ನು ಬಲ್ಲನು" ಎಂದು ನಹೂಮನು ಹೇಳುತ್ತಾನೆ (ನಹೂಮ 1:7). ಯೇಸು ಹೀಗೆ ಹೇಳಿದನು, "ನಾನು ಒಳ್ಳೇ ಕುರುಬನು; . . . ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ" (ಯೋಹಾನ 10:14). ಪೌಲನು ಗಲಾತ್ಯದವರಿಗೆ ಹೀಗೆ ಹೇಳಿದನು, "ನೀವು ದೇವರನ್ನು ತಿಳಿದುಕೊಂಡಿದ್ದೀರಿ; ಸರಿಯಾಗಿ ಹೇಳಬೇಕಾದರೆ ದೇವರು ನಿಮ್ಮನ್ನು ತಿಳಿದುಕೊಂಡಿದ್ದಾನೆ" (ಗಲಾತ್ಯ 4:9). ಆತನು ತಿಮೊಥೆಯನಿಗೆ ಬರೆಯುವ ವೇಳೆ, ಆತನು ಹೀಗೆ ಹೇಳಿದನು, "ತನ್ನವರು ಯಾರೆಂಬದನ್ನು ಕರ್ತನು ತಿಳಿದಿದ್ದಾನೆ" (2 ತಿಮೊಥೆ 2:19). ದೇವರಿಗೆ ನಮ್ಮ ಹೋರಾಟಗಳು ಗೊತ್ತಿವೆ ಮತ್ತು ನಮಗೆ ಅಗತ್ಯವಾದ ಆಶೀರ್ವಾದವನ್ನು ಕೊಡಬಲ್ಲನು ಎಂಬುದನ್ನು ತಿಳಿದುಕೊಳ್ಳುವದು ದೇವರ ಮಕ್ಕಳಿಗೆ ಅತ್ಯಂಥ ಆದರಣೆಯುಂಟು ಮಾಡುವದಾಗಿದೆ (ನೋಡಿರಿ ಇಬ್ರಿಯ 4:14-16).

## ನಾವು ಭಯಗೊಂಡವರಾಗಿರುವಾಗ ಕರ್ತನು ತಿಳಿದವನಾಗಿರುತ್ತಾನೆ (1:17)

ಭಯವು ಮನುಷ್ಯ ಜನಾಂಗದ ಒಂದು ಸಾಮಾನ್ಯವಾಗಿರುವ ಸ್ಥಿತಿಯಾಗಿದೆ. ನಮ್ಮಲ್ಲಿ ಬಹಳಷ್ಟು ಮಂದಿ ಯೋಬನೊಂದಿಗೆ ಗುರುತಿಸಿಕೊಳ್ಳಬಲ್ಲೆವು, ಆತನು ಹೀಗೆ ಹೇಳಿದನು, "ನನಗೆ ಭಯವು ಹುಟ್ಟಿದೊಡನೆಯೇ ಆಪತ್ತು ಸಂಭವಿಸುವದು. ನಾನು ಯಾವದಕ್ಕೆ ಹೆದರುತ್ತೇನೋ ಅದು ತಪ್ಪದೆ ಬರುವದು" (ಯೋಬನು 3:25). ಕೆಲವರಿಗೆ ಭವಿಷ್ಯದ ಭಯವು ಇರುತ್ತದೆ. ಕೆಲವರು ವರ್ತಮಾನಕಾಲದ ಬಗ್ಗೆ ಹೆದರುತ್ತಾರೆ. ಕೆಲವರಿಗೆ ತಮ್ಮ ಗತಕಾಲದ ಕುರಿತು ಜನರಿಗೆ ತಿಳಿದು ಹೋಗುವದೋ ಎಂದು ಹೆದರುತ್ತಾರೆ. ಇನ್ನು ಅನೇಕರು ಸೋಲು-ವ್ಯಾಪಾರದಲ್ಲಿ, ದಾಂಪತ್ಯದಲ್ಲಿ, ಜೀವನದಲ್ಲಿ-ಅನುಭವಿಸುವ ಸಾಧ್ಯತೆಯನ್ನು ನೆನೆದು ಭಯ ಪಡುತ್ತಾರೆ. ಕ್ರೈಸ್ತರು ಶೋಧನೆಗಳಿಗೆ-ಉದ್ಯೋಗದ ಸ್ಥಳದಲ್ಲಿ, ಶಾಲೆಯಲ್ಲಿ, ಮನೆಯಲ್ಲಿ.

ಹೆದರಬಹುದು. ಅಲ್ಲದೆ ಕ್ರೈಸ್ತರು ಹಿಂಸೆಗಾಗಿ ಸಹ ಹೆದರಬಹುದು.

ನಾವು ಭಯಕ್ಕೆ ಸೋತು ಹೋಗುವದು ದೇವರಿಗೆ ಇಷ್ಟವಿಲ್ಲ. *Time ಮ್ಯಾಗಜಿನ್* ಭಯದಿಂದ ಸತ್ತವನೊಬ್ಬನ ಕಥೆಯನ್ನು ವರದಿ ಮಾಡಿತ್ತು.[33] ಈ ಮನುಷ್ಯನು ಅನೇಕ ತುಪ್ಪಳ-ಹಿಡಿಯುವ ಸಾಹಸಯಾತ್ರೆಗಳ ಕೈಗೊಂಡ ವೇಳೆಯಲ್ಲಿ ಉಣ್ಣೆ ಹುಳುಗಳಿಂದ ಕಚ್ಚಲ್ಪಟ್ಟಿದ್ದನು. ಅದಾದ ನಂತರದಲ್ಲಿ ಆತನು ಲೈಮ್ ರೋಗದ ಕುರಿತು ಕೇಳಿದನು, ಅದು ಜಿಂಕೆ ಮೈಮೇಲಿನ ಹಣ್ಣೆ ಹುಳುಗಳಿಂದ ಹರಡುವಂಥದ್ದು. ಆತನು ತನಗೆ ಆ ರೋಗ ಬಂದಿದೆ ಮತ್ತು ತನ್ನ ಹೆಂಡತಿಗೆ ಅದನ್ನು ಹರಿಡಿಸಿ ಬಿಟ್ಟಿದ್ದೇನೆಂಬುದಾಗಿ ಬಹಳವಾಗಿ ಭಯದಿಂದ ಪೀಡಿಸಲ್ಪಡುವವನಾದನು. ಆತನಿಗೆ ಲೈಮ್ ರೋಗವು ಇರುವದಿಲ್ಲ ಮತ್ತು ಆ ರೋಗವು ಬೇರೊಬ್ಬ ವ್ಯಕ್ತಿಗೆ ಸೊಂಕುವದು ಸಾಧ್ಯವೇ ಇರುವದಿಲ್ಲ ಎಂದು ವೈದ್ಯರು ಭರವಸವನ್ನು ನೀಡಿದರು, ಆದರೆ ಅವರ ಮಾತನ್ನು ಆತನು ನಂಬಲಿಲ್ಲ. ಅಂತಿಮವಾಗಿ, ಆತನ ಬುದ್ಧಿಭ್ರಮಣೆಯು ಆತನ ಹೆಂಡತಿಯನ್ನು ಕೊಂದು ಬಳಿಕ ತನ್ನನ್ನು ಸಾಯಿಸಿಕೊಳ್ಳುವಂತೆ ಆತನನ್ನು ನಡಿಸಿತ್ತು. ಭಯವು ತಾರ್ಕಿಕ ಯೋಚನೆಯನ್ನು ಕೊಂದು ಹಾಕಬಲ್ಲದು.

ದಾವೀದನು ಕರ್ತನಿಗೆ ಈ ಮಾತುಗಳನ್ನು ಹೇಳುವ ಮೂಲಕ ಭಯದ ವಿಷಯದಲ್ಲಿ ನಂಜುಗಳೆಕ (ಪ್ರತ್ಯುಪಾಯ) ವನ್ನು ನಮಗೆ ಕೊಟ್ಟನು, "ನನಗೆ ಹೆದರಿಕೆಯುಂಟಾದಾಗ ನಿನ್ನನ್ನೇ ಆಶ್ರಯಿಸಿಕೊಳ್ಳುವೆನು" (ಕೀರ್ತನೆ 56:3). ನಮ್ಮ ಆತ್ಮಗಳು ಕಳವಳಕ್ಕೀಡಾಗಿದ್ದಾವೆ ಎಂಬುದರ ಬಗ್ಗೆ ದೇವರು ಅರುಹು ಹೊಂದಿದ್ದಾನೆಂಬುದನ್ನು ನಾವು ತಿಳಿದುಕೊಳ್ಳಬೇಕಾದ ಅಗತ್ಯವಿರುತ್ತದೆ. ಯೋಹಾನನಿಗೆ ಹೆದರಿಕೆಯುಂಟಾದಾಗ ಅದು ಯೇಸುವಿಗೆ ಗೊತ್ತಿತ್ತು, ಮತ್ತು ನಮಗೆ ಭಯವಾಗುವಾಗ ಅದು ಆತನಿಗೆ ತಿಳಿದಿರುತ್ತದೆ. ಆತನು ಬಲ್ಲವನಾಗಿದ್ದಾನೆ - ಮತ್ತು ಕಾಳಜಿಯುಳ್ಳವನಾಗಿದ್ದಾನೆ.

## ನಮ್ಮನ್ನು ಹೇಗೆ ಸಂತೈಸಬೇಕೆಂದು ಕರ್ತನು ಬಲ್ಲವನಾಗಿದ್ದಾನೆ (1:17)

ಕರ್ತನು ಈಗಲೂ ಇಂದು ನಮ್ಮನ್ನು ಸಂತೈಸುತ್ತಾನೆ: ಆತನು ನಮ್ಮನ್ನು ತನ್ನ ವಾಕ್ಯದ *ವಾಗ್ದಾನಗಳ* ಮುಖಾಂತರವಾಗಿ ಸಂತೈಸುತ್ತಾನೆ. ಕೀರ್ತನೆಗಾರನು ಹೀಗೆ ಹೇಳುತ್ತಾನೆ, "ನಿನ್ನ ನುಡಿಯು ನನ್ನನ್ನು ಚೈತನ್ಯಗೊಳಿಸುತ್ತದೆ; ಆಪತ್ಕಾಲದಲ್ಲಿ ಇದೇ ನನಗೆ ಆದರಣೆ" (ಕೀರ್ತನೆ 119:50). ಬೈಬಲ್ ಆದರಣೆ ಹಾಗೂ ಬಲಗೊಳಿಸುವ ಮಾತುಗಳಿಂದ ತುಂಬಿರುತ್ತದೆ. ಪೌಲನು ಹೀಗೆ ಬರೆದನು, "ಆದದರಿಂದ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ" (1 ಥೆಸಲೋನಿಕ 4:18).

ಈ ದಿನವು ಸಹ, ಕರ್ತನು ತನ್ನ ಮಾತುಗಳನ್ನು ಹೇಳಿ ಬಿಟ್ಟು ಸುಮ್ಮನೆ ಆಗುವದಿಲ್ಲ. ಆತನು ತನ್ನ *ಜನರ* ಮೂಲಕವಾಗಿ ಆದರಣೆಯನ್ನು ಒದಗಿಸುತ್ತಾನೆ. ತೀತನ ಬರುವಿಕೆಯ ಮೂಲಕವಾಗಿ "ದೀನಾವಸ್ಥೆಯಲ್ಲಿರುವವರನ್ನು ಸಂತೈಸುವ ದೇವರು . . . ನಮ್ಮನ್ನು ಸಂತೈಸಿದನು" ಎಂದು ಪೌಲನು ಹೇಳಿದನು (2 ಕೊರಿಂಥ 7:6). ನಾವು ಸಂಕಟಗಳಲ್ಲಿ ಬಿದ್ದವರನ್ನು ಸಂತೈಸುವದಕ್ಕೆ ಶಕ್ತರಾಗುವಂತೆ "ಸಕಲವಿಧವಾಗಿ ಸಂತೈಸುವ ದೇವರು ಆಗಿದ್ದು ನಮಗೆ ಸಂಭವಿಸುವ ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ" ಎಂದು ಆತನು ಹೇಳುತ್ತಾನೆ (2 ಕೊರಿಂಥ 1:3, 4).

ಅಷ್ಟುಮಾತ್ರವಲ್ಲದೆ, ಕರ್ತನು "[ತನ್ನ] ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು [ತನ್ನನ್ನು] ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲ" ಮಾಡುವವನಾಗಿ, ನಮ್ಮನ್ನು ಆತನ *ದೈವಸಂಕಲ್ಪಾನುಸಾರದ ಕಾಳಜಿಯ* ಮುಖಾಂತರವಾಗಿ ನಮ್ಮನ್ನು ಆದರಿಸುತ್ತಾನೆ (ರೋಮಾ 8:28).

ಆತನು ಸಂತೈಸುವಿಕೆಯನ್ನು ಅನುಗ್ರಹಿಸುವ ಎಲ್ಲಾ ದಾರಿಗಳಲ್ಲಿಯೇ ಅತ್ಯಂಥ ಅಮೂಲ್ಯವಾದದ್ದೆಂದರೆ ಆತನ *ಪ್ರಸನ್ನತೆ*ಯೇ ಆಗಿದೆ. ದಾವೀದನು ಹೀಗೆ ಬರೆದನು, "ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ *ನೀನು ಹತ್ತಿರವಿರುವದರಿಂದ* ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ" (ಕೀರ್ತನೆ 23:4; ಒತ್ತಿ ಹೇಳಿದ್ದು ನನ್ನದು). ದೇವರು ಹೀಗೆ ವಾಗ್ದಾನ ಮಾಡಿದ್ದಾನೆ, "ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ; ಎಂದಿಗೂ ತೊರೆಯುವದೂ ಇಲ್ಲ" (ಇಬ್ರಿಯ 13:5).

ನಾವು ಯಾವಾಗ ಭಯದಿಂದ ಕದಲದಂತಾಗುತ್ತೇವೆ, ಅನಿಶ್ಚಿತ್ತತೆಯ ಕಾರಣದಿಂದ ಅರ್ಧಕ್ಕೇ ನಿಂತು ಬಿಡುತ್ತೇವೆ, ಮತ್ತು ನೋವಿನಿಂದ ಬತ್ತಿ ಹೋಗುತ್ತೇವೆ ಎಂಬುದು ಯೇಸುವಿಗೆ ಗೊತ್ತಿದೆ-ಮತ್ತು ನಮ್ಮನ್ನು ಹೇಗೆ *ಸಂತೈಸ*ಬೇಕೆಂದು ಆತನು ಬಲ್ಲವನಾಗಿರುತ್ತಾನೆ. ಆತನು "ಶೋಧಿಸಲ್ಪಡುವವರಿಗೆ [ಅಥವಾ ಪರಿಶೋಧಿಸಲ್ಪಡು ವವರಿಗೆ] ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ" (ಇಬ್ರಿಯ 2:18).

### ಏಳು ದೀಪಸ್ತಂಭಗಳು (1:20)

"ಆ ಏಳು ದೀಪಸ್ತಂಭಗಳೆಂದರೆ ಆ ಏಳು ಸಭೆಗಳು" ಎಂದು ಯೇಸು ಹೇಳಿದನು. ಈ ಅನ್ವಯಿಕೆಯನ್ನು ಮಾಡಬಹುದು: ದೀಪಸ್ತಂಭಗಳು *ಸ್ಥಳೀಯ ಸಭೆಗಳು*. ನಾವು ನಮ್ಮ ಬೆಳಕು ಪ್ರಕಾಶಿಸಬೇಕೆಂದು ಬಯಸುವದಾದರೆ, ನಾವು ಒಂದು ಸ್ಥಳೀಯ ಸಭೆಯಲ್ಲಿ ಸಕ್ರಿಯರಾದ ಸದಸ್ಯರಾಗಿರತಕ್ಕದ್ದು. ಸ್ಥಳೀಯ ಸ್ವಾಯತ್ತತೆ ವಿಷಯವಾಗಿ ಇಲ್ಲಿ ಇನ್ನೊಂದು ಸತ್ಯವನ್ನು ಕಲಿಸಬಹುದಾಗಿದೆ: ಪ್ರತ್ಯೇಕವಾಗಿ ನಿಂತಿರುವ ದೀಪಸ್ತಂಭಗಳು ನಮಗೆ ಸಭೆಯು ಪ್ರತ್ಯೇಕ ಹಾಗೂ ಸ್ವಾತಂತ್ರ್ಯವಾಗಿದ್ದು, ಯೇಸುವಿಗೆ ಮಾತ್ರವೇ ಜವಾಬ್ದಾರವಾಗಿರುತ್ತವೆ ಎಂಬುದನ್ನು ಜ್ಞಾಪಿಸುವದಾಗಿದೆ.

ಇದನ್ನು ಪರಿಗಣಿಸಿರಿ: ದೀಪಸ್ತಂಭಗಳು ನಿಜವಾಗಿಯೂ ಇದ್ದ ಏಳು ಸಭೆಗಳಾಗಿದ್ದವು, ಮತ್ತು ಅವುಗಳಲ್ಲಿ ಕೆಲವು ಬಡತನ, ತಕ್ಕಷ್ಟು ಬೆಳವಣಿಗೆಯಿಲ್ಲದವುಗಳು, ಮತ್ತು ಸಮಸ್ಯೆಯಿಂದ-ಒಡೆದುಹೋದವುಗಳು ಆಗಿದ್ದವು. ಹಾಗಿದ್ದರೂ, ಅವುಗಳು ಆಗಲೂ *ಒಂದು ಉದ್ದೇಶವನ್ನು* ಹೊಂದಿದ್ದವು-ಸುವಾರ್ತೆಯ ಬೆಳಕನ್ನು ಎತ್ತಿ ಹಿಡಿಯುವದು-ಮತ್ತು ಆಗಲೂ ಅವುಗಳು ಯೇಸುವಿಗೆ ಅಮೂಲ್ಯವಾಗಿದ್ದವು. ಯೇಸುವು ಏಳರಲ್ಲಿ ಐದು ಸಭೆಗಳನ್ನು ಖಂಡಿಸಿದನು ಎಂಬುದು ನಿಜವಾದದ್ದೇ, ಆದರೆ ಆತನಿಗೆ ಅವುಗಳ ಬಗ್ಗೆ ಕಾಳಜಿಯಿಲ್ಲವಾಗಿದ್ದರೆ ಆತನು ಅದನ್ನು ಮಾಡಿರುತ್ತಿರಲಿಲ್ಲ. ಸಭೆಯು ಎಷ್ಟೇ ಚಿಕ್ಕದಾಗಿದ್ದರೂ ಚಿಂತೆಯಿಲ್ಲ, ಅದು ಕರ್ತನಿಗೆ ನಂಬಿಗಸ್ತವಾಗಿರುವದಾದರೆ, ಆತನ ದೃಷ್ಟಿಯಲ್ಲಿ ಅದು ಬಂಗಾರಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದಾಗಿರುತ್ತದೆ.

---

### ಅಡಿಟಿಪ್ಪಣಿಗಳು

[1]Robert H. Mounce, notes on Revelation, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 1926. [2]Eugene H. Peterson, *The Message: New Testament With Psalms and Proverbs*. [3]Harold Hazelip, *The Lord Reigns: A Survey of the Book of Revelation* (Abilene, Tex.: Herald of Truth, n.d.), 4 (emphasis added). [4]Edward A. McDowell, *The Meaning and Message of the Book of Revelation* (Nashville: Broadman Press, 1951), 5. [5]Ray Summers, *Worthy Is the Lamb* (Nashville: Broadman Press, 1951), 85. [6]J. W. Roberts, *The Revelation to John (The Apocalypse)*, The Living Word Commentary, ed. Everett

Ferguson (Austin, Tex.: Sweet Publishing Co., 1974), 29. [7]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 35-37ರಲ್ಲಿನ ಚರ್ಚೆಯನ್ನು ನೋಡಿರಿ. [8]Roberts, 31. [9]William Hendriksen, *More Than Conquerors* (Grand Rapids, Mich.: Baker Book House, 1954), 68. [10]Mounce, 1926.

[11]William Barclay, *The Revelation of John*, vol. 1, rev. ed., The Daily Study Bible Series (Philadelphia: Westminster Press, 1976), 40. [12]Don Shackelford, foreword to *Vision of Victory: The Book of Revelation* (Searcy, Ark.: Harding University, 1992), 5. [13]Walter Bauer, *A Greek-English Lexicon of the New Testament and Other Early Christian Literature*, 4th rev. ed., ed. William F. Arndt and F. Wilbur Gingrich (Cambridge: University Press, 1952), 459. [14]ವಾರದ ಮೊದಲ ದಿನವನ್ನು ಕರ್ತನ ದಿನವೆಂದು ಕರೆದ ಇತರ ಆದಿ ಲೇಖಕರ ಮಾದರಿಯೊಂದು Homer Hailey, *Revelation* (Grand Rapids, Mich.: Baker Book House, 1979), 107. ಇನ್ನಷ್ಟು ಸವಿಸ್ತಾರವಾದ ಅಧ್ಯಯನಕ್ಕಾಗಿ, ನೋಡಿರಿ Everett Ferguson, *Early Christians Speak*, rev. ed. (Abilene, Tex.: ACU Press, 1987), 67-79 ರಲ್ಲಿ ಕೊಡಲಾಗಿದೆ. [15]ಈ ಪರಿಚ್ಛೇದವು Hendriksen, 70ರಿಂದ ಆಯ್ದುಕೊಳ್ಳಲಾಗಿದೆ. [16]Summers, 104. [17]Richard Francis Weymouth, *The New Testament in Modern Speech*. [18]ಈ ಚರ್ಚೆಯಾಂಶದ ಮೇಲಿನ ಒಂದು ಚರ್ಚೆಗಾಗಿ, ನೋಡಿರಿ Tommy South, "The Opening Vision: The Christ," *Truth for Today* 9 (October 1988): 45-47. [19]W. E. Vine, *The Expanded Vine's Expository Dictionary of New Testament Words*, ed. John R. Kohlenberger III with James A. Swanson (Minneapolis, Minn.: Bethany House Publishers, 1984), 628 (emphasis added). [20]W. A. Crisswell, *Expository Sermons on Revelation*, vol. 1 (Grand Rapids, Mich.: Zondervan Publishing House, 1962), 159.

[21]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 571. [22]Quoted in Earl F. Palmer, *1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 123. [23]Hailey, 115. [24]Eugene H. Peterson, *The Message: New Testament With Psalms and Proverbs*. [25]Mounce, 1926. ಈ ಧನ್ಯನುಡಿಗಳ ಮೇಲಿನ ಹೆಚ್ಚಿನ ಪಾಠಗಳಿಗಾಗಿ, ನೋಡಿರಿ Patrick H. Casey, "The Beatitudes of Revelation," *Vision of Victory: The Book of Revelation* (Searcy, Ark.: Harding University, 1992), 122-38, and D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 60-61. [26]ಇದೇ ಶೀರ್ಷಿಕೆಯನ್ನು ಬಳಸುವ ಸಂದೇಶಕ್ಕಾಗಿ, ನೋಡಿರಿ Jay Lockhart, "Who Is Jesus?" *Truth for Today* 8 (March 1988): 3-5. [27]James Stewart, *The Gates of New Life* (New York: C. Scribner's Sons, 1940), 241-51. [28]Eugene H. Peterson, *Reversed Thunder* (San Francisco: HarperCollins Publishers, 1988), 32. [29]Wiersbe, 570. [30]*Sermons of Jim Bill McInteer*, ed. J. D. Thomas, Great Preachers of Today, vol. 10 (Abilene, Tex.: Biblical Research Press, 1966), 194-98.

[31]McGuiggan, 39. [32]Burton Coffman, *Commentary on Revelation* (Austin, Tex.: Firm Foundation Publishing House, 1979), 34. ಆತನು ಸಂದರ್ಭವೊಂದಕ್ಕಾಗಿ ಒಂದು ಬದಲಾವಣೆಯನ್ನು ಮಾಡುತ್ತಾನೆ, J. B. Phillips, *The New Testament in Modern English* ದಿಂದ "ಮರಣ ಮತ್ತು ಸಮಾಧಿ" ಎಂಬ ಪದಗುಚ್ಛವನ್ನು ಬಳಸುತ್ತಾನೆ. [33]"Fatal Overreaction," *Time* (14 August 1989): 33.